ಕೃಷಿ ಜ್ಞಾನ ಭಂಡಾರ ಮಾಲಿಕೆ - 45

## ಕೃಷಿ ವಿಜ್ಞಾನಿ - ಕೀಟಶಾಸ್ತ್ರಜ್ಞ

# ಡಾ.ಎಂ.ಪುಟ್ಟರುದ್ರಯ್ಯ

ಡಾ. ಡಿ.ರಾಜಗೋಪಾಲ್



ಕನ್ನಡ ಅಧ್ಯಯನ ವಿಭಾಗ, ಶಿಕ್ಷಣ ನಿರ್ದೇಶನಾಲಯ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕೃಷಿ ಜ್ಞಾನ ಭಂಡಾರ ಮಾಲಿಕೆ - 45

## ಕೃಷಿ ವಿಜ್ಞಾನಿ-ಕೀಟಶಾಸ್ತ್ರಜ್ಞ

# ಡಾ. ಎಂ.ಪುಟ್ಟರುದ್ರಯ್ಯ

ಡಾ. ಡಿ.ರಾಜಗೋಪಾಲ್

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

**ಕೃಷಿವಿಜ್ಞಾನಿ-ಕೀಟಶಾಸ್ತ್ರಜ್ಞ ಡಾ. ಎಂ.ಪುಟ್ಟರುದ್ರಯ್ಯ** – ಲೇಖಕರು: ಡಾ.ಡಿ.ರಾಜಗೋಪಾಲ್
ಪ್ರಕಾಶಕರು: ಕನ್ನಡ ಅಧ್ಯಯನ ವಿಭಾಗ, ಶಿಕ್ಷಣ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-560065.

| | | |
|---|---|---|
| ಪ್ರಥಮ ಮುದ್ರಣ | : 2014 | ಪುಟಗಳು: xii+74+8 |
| ಪ್ರತಿಗಳು | : 500 | ಬೆಲೆ : ರೂ. 60-00 |
| ಕಾಗದ | : ಮ್ಯಾಪ್‌ಲಿಥೊ 70 ಜಿ.ಎಸ್.ಎಂ. | ಗಾತ್ರ : ಡೆಮಿ 1/8 |

**Agricultural Scientist-Entomologist Dr. M.Puttarudraiah -** Written by Dr.D.Rajagopal
**Published by** The Department of Kannada Studies, Directorate of Education, UAS, Bangalore-560065.

| | | |
|---|---|---|
| Copies | : 500 | Pages: xii+74+8 |
| First Edition | : 2014 | Price: Rs.:60-00 |
| Paper | : Maplitho 70 GSM | Size: Demy 1/8 |

ISBN : 978-93-83889-06-8

© ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು.

ಸಂಪಾದಕರು
**ಡಾ. ಜಿ.ಬಾಲಕೃಷ್ಣ**
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ಸಹ ಸಂಪಾದಕರು
**ಡಾ. ಜಿ.ವೀರಭದ್ರಗೌಡ**
ಸಹಾಯಕ ಪ್ರಾಧ್ಯಾಪಕರು

ಮುಖ ಪುಟ ವಿನ್ಯಾಸ: ಜಿ.ಬಿ.
ಮುದ್ರಣ:
**ರಘು ಪ್ರಿಂಟ್ ಸಿಸ್ಟಮ್ಸ್ : 9448004297**

**ಡಾ. ಕೆ. ನಾರಾಯಣಗೌಡ**
ಕುಲಪತಿಗಳು

ಗಾಂಧಿ ಕೃಷಿ ವಿಜ್ಞಾನ ಕೇಂದ್ರ
ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು-560065

# ಕುಲಪತಿಗಳ ಹಾರೈಕೆ

ಕೃಷಿ ವಿಜ್ಞಾನ ಸಾಹಿತ್ಯದ ತಾಂತ್ರಿಕ ಜ್ಞಾನವು ಆಂಗ್ಲ ಭಾಷೆಯಲ್ಲಿ ಎಲ್ಲೆಡೆ ಸಾಕಷ್ಟು ಲಭ್ಯವಿದ್ದು ಆ ಜ್ಞಾನ ಉಪಯುಕ್ತವಾಗಬೇಕಾದರೆ ಅದು ಪ್ರಾದೇಶಿಕ ಭಾಷೆಯಲ್ಲಿ ಸಂಬಂಧಪಟ್ಟವರಿಗೆ ದೊರೆಯಬೇಕು. ಆದರೆ ಈ ವಿಶಿಷ್ಟ ಜ್ಞಾನವನ್ನು ಕನ್ನಡದಲ್ಲಿ ತಲುಪಿಸುವುದು ಬಹಳ ಮುಖ್ಯವಾದ ಕಾರ್ಯವಾಗಿದೆ. ಭಾರತ ಸರ್ಕಾರದ ನೆರವಿನಿಂದ 1969-70ರಲ್ಲಿ ಪ್ರಾರಂಭವಾದ ಕನ್ನಡ ಅಧ್ಯಯನ ವಿಭಾಗ ಈ ನಿಟ್ಟಿನಲ್ಲಿ ಕಾರ್ಯನಿರತವಾಗಿದೆ. ಶಿಕ್ಷಣ ಮಾಧ್ಯಮ ಪ್ರಾದೇಶಿಕ ಭಾಷೆಗಳಲ್ಲಿ ನಡೆಯಬೇಕೆಂಬ 1964ರ ಸಂಸತ್ತಿನ ತೀರ್ಮಾನದಂತೆ, ಕೃಷಿಯಲ್ಲಿ ಕನ್ನಡ ಜಾರಿಗೆ ತರುವ ಪ್ರಥಮ ಹೆಜ್ಜೆಯಾಗಿ ಕೃಷಿ ವಿಜ್ಞಾನದ ವಿವಿಧ ವಿಷಯಗಳಲ್ಲಿ ಕನ್ನಡ ಪಠ್ಯಪುಸ್ತಕಗಳ ಪ್ರಕಟಣಾ ಕಾರ್ಯ ನಡೆದಿದೆ. ಪಠ್ಯವಿಷಯವಾಗಿ ಅಲ್ಲದೆ ಈ ಪುಸ್ತಕಗಳು ಕೃಷಿ ವಿಜ್ಞಾನ ಪ್ರಸರಣೆಯ ಮಾಧ್ಯಮವೂ ಆಗಿವೆ. ವಿದ್ಯಾರ್ಥಿಗಳಿಗೆ, ರೈತರಿಗೆ, ಬೋಧಕರಿಗೆ, ಸಂಶೋಧಕರಿಗೆ, ವಿಸ್ತರಣಾ ಕಾರ್ಯಕರ್ತರಿಗೆ ಹಾಗೂ ಆಸಕ್ತರಿಗೂ ಸಹ ಉಪಯುಕ್ತವಾಗುವ ಹಲವಾರು ಕೃತಿಗಳು ಕನ್ನಡ ಅಧ್ಯಯನ ವಿಭಾಗದಿಂದ ಪ್ರಕಟವಾಗಿವೆ.

ಇದುವರೆಗೆ ಕೃಷಿ ವಿಜ್ಞಾನದ ವಿವಿಧ ವಿಷಯಗಳಾದ ವ್ಯವಸಾಯ, ಪಶುಸಂಗೋಪನೆ, ತೋಟಗಾರಿಕೆ, ಗೃಹವಿಜ್ಞಾನ, ಅರಣ್ಯ, ರೇಷ್ಮೆ ಕೃಷಿ, ಜೇನುಸಾಕಣೆ, ಹೈನುವಿಜ್ಞಾನ, ಕೃಷಿ ಇಂಜಿನಿಯರಿಂಗ್ ಹಾಗೂ ಮೂಲ ವಿಜ್ಞಾನ ವಿಷಯಗಳಲ್ಲಿ ಮುನ್ನೂರಕ್ಕೂ ಹೆಚ್ಚು ಕೃತಿಗಳನ್ನು ಹೊರತರಲಾಗಿದ್ದು, ಇವು ಆಯಾ ವಿಷಯಗಳಲ್ಲಿ ಪಠ್ಯ ಪೂರಕ ಹಾಗೂ ಆಕರ ಗ್ರಂಥಗಳಾಗಿವೆ. ಅಲ್ಲದೆ, 2003ನೇ ವರ್ಷದಿಂದ ಕನ್ನಡ ಅಧ್ಯಯನ ವಿಭಾಗವು 'ಕೃಷಿ ಜ್ಞಾನ ಭಂಡಾರ' ಹಾಗೂ 2012-13ರಿಂದ ಕನ್ನಡ ಶಾಸ್ತ್ರೀಯ ಭಾಷೆ ಅನುದಾನದಡಿ 'ಭಾಷಾಭಿವೃದ್ಧಿ ಯೋಜನೆ' ಎಂಬ ವಿನೂತನ ಮಾಲಿಕೆಯನ್ನು ಪ್ರಾರಂಭಿಸಿದ್ದು, ಈ ಯೋಜನೆಗಳಡಿಯಲ್ಲಿ ಈಗಾಗಲೇ 57 ಪುಸ್ತಕಗಳನ್ನು ಪ್ರಕಟಿಸಲಾಗಿದೆ. ರೈತರ ಜನಮನವನ್ನು ತಲುಪುವ ಉನ್ನತ ಉದ್ದೇಶದಿಂದ ರೈತರಿಗೆಂದೇ ವಿಶೇಷವಾಗಿ ವಿನ್ಯಾಸಗೊಳಿಸಿರುವ ಈ ಕೃತಿಗಳನ್ನು ಸರಳ ಭಾಷೆ ಹಾಗೂ ಸುಂದರರೂಪದಲ್ಲಿ ಹೊರತರಲಾಗುತ್ತಿದೆ. ಈ ಉದ್ದೇಶದ ಸಾಧನೆಗಾಗಿ

ಹೆಚ್ಚು ಕೃಷಿ ಬೋಧಕರು, ವಿಜ್ಞಾನಿಗಳು ಹಾಗೂ ಲೇಖಕರು ಕನ್ನಡದಲ್ಲಿ ಕೃತಿಗಳನ್ನು ರಚಿಸಿ ಕೃಷಿ ವಿಜ್ಞಾನದ ಆಧುನಿಕ ಆವಿಷ್ಕಾರ, ತಂತ್ರಜ್ಞಾನ ಹಾಗೂ ಚಿಂತನೆಗಳನ್ನು ರೈತಾಪಿ ವರ್ಗಕ್ಕೆ ತಲುಪಿಸಲು ಸಹಕರಿಸಬೇಕಾಗಿದೆ. ಪಠ್ಯಪುಸ್ತಕ ಹಾಗೂ ಇತರ ಕೃತಿಗಳ ಜೊತೆಗೆ ಕನ್ನಡದಲ್ಲಿ ಅಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ, ಲೇಖಕರಿಗೆ ಹಾಗೂ ಬೋಧಕರಿಗೆ ಅನುವಾಗಲೆಂದು ಕೃಷಿವಿಜ್ಞಾನ, ಪಶುವೈದ್ಯಕೀಯ ವಿಜ್ಞಾನ ಹಾಗೂ ಇತರ ಸಂಬಂಧಿತ ಕ್ಷೇತ್ರಗಳ ವಿಷಯಗಳ ಈ ತಾಂತ್ರಿಕ ಪಾರಿಭಾಷಿಕ ಪದಕೋಶವನ್ನು ಪ್ರಕಟಿಸಲಾಗಿದೆ.

ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಉನ್ನತ ಶಿಕ್ಷಣ ಇಲಾಖೆಯ ವೈಜ್ಞಾನಿಕ ಮತ್ತು ತಾಂತ್ರಿಕ ಶಬ್ದಾವಳಿ ಆಯೋಗವು ಈ ಕೃತಿಯ ಪ್ರಕಟಣೆಗೆ ಧನಸಹಾಯವನ್ನು ಒದಗಿಸಿದ್ದು ಆಯೋಗಕ್ಕೆ ವಿಶ್ವವಿದ್ಯಾನಿಲಯವು ಆಭಾರಿಯಾಗಿದೆ. **ಕೃಷಿವಿಜ್ಞಾನಿ–ಕೀಟಶಾಸ್ತ್ರಜ್ಞ ಡಾ. ಎಂ.ಪುಟ್ಟರುದ್ರಯ್ಯ** ಕೃತಿಯು ರೈತರಿಗೆ, ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ ಹಾಗೂ ಇತರ ಆಸಕ್ತರಿಗೆ ಉಪಯುಕ್ತವಾಗುವುದೆಂದು ಆಶಿಸುತ್ತೇನೆ.

ಕೆ. ನಾರಾಯಣಗೌಡ

**(ಡಾ. ಕೆ. ನಾರಾಯಣಗೌಡ)**

# ಸಂಪಾದಕರ ಮಾತು

ಡಾ. ಎಂ.ಪುಟ್ಟರುದ್ರಯ್ಯನವರು ಈ ನಾಡು ಕಂಡ ಅಪರೂಪದ ವಿಜ್ಞಾನಿ. ಮಾಗಡಿಯ ಒಂದು ಕುಗ್ರಾಮದಲ್ಲಿ ಹುಟ್ಟಿದ ಅವರು ಕೀಟವಿಜ್ಞಾನಕ್ಕೆ ನೀಡಿದ ತಮ್ಮ ಕೊಡುಗೆಗಾಗಿ ಒಂದು ಕೀಟಕ್ಕೆ ಅವರದೇ ಹೆಸರನ್ನು ಇರಿಸಿ ವಿಜ್ಞಾನ ಜಗತ್ತು ಅವರ ನೆನಪನ್ನು ಅಜರಾಮರಗೊಳಿಸಿದೆ. ಅವರು ರೈತರ ಬಗೆಗೆ ಅತೀವ ಕಾಳಜಿ ಹೊಂದಿದ್ದ ವಿಜ್ಞಾನಿಯಷ್ಟೇ ಅಲ್ಲ ವಿದ್ಯಾರ್ಥಿಗಳ ಬಗೆಗೂ, ಬೋಧನೆಯ ಬಗೆಗೂ ಸಹ ವಿಪರೀತದ ಕಾಳಜಿ ಹೊಂದಿದ್ದವರು.

ಇಂದು ಕೀಟ-ರೋಗಗಳ ನಿಯಂತ್ರಣಕ್ಕೆ ರಾಸಾಯನಿಕ ವಿವೇಚನಾರಹಿತ ಬಳಕೆಯಿಂದ ಪರಿಸರದ ಮೇಲೆ ಉಂಟಾಗುತ್ತಿರುವ ಪ್ರತಿಕೂಲ ಪರಿಣಾಮಗಳಿಂದಾಗಿ ವಿಜ್ಞಾನಿಗಳು 'ಸಮಗ್ರ ವಿಧಾನ'ಗಳ ಮೊರೆಹೋಗುತ್ತಿರುವಾಗ 'ಹಸಿರು ಕ್ರಾಂತಿ'ಯ ಪ್ರಾರಂಭಿಕ ಹಂತದಲ್ಲೇ ಈ ವಿಧಾನಗಳನ್ನು ಬೋಧಿಸಿದ ದಾರ್ಶನಿಕರು ಪುಟ್ಟರುದ್ರಯ್ಯನವರು.

'ಕೀಟಗಳ ಹಾವಳಿಯನ್ನು ತಡೆಗಟ್ಟಲು ಕೀಟನಾಶಕಗಳಿಂದ ಮಾತ್ರ ಸಾಧ್ಯ ಎಂದು ರೈತರು ತಿಳಿದಿದ್ದಾರೆ. ರಾಸಾಯನಿಕ ಕೀಟನಾಶಕಗಳ ಬಳಕೆಯಿಂದಾಗಿ ಪರಿಸರದಲ್ಲಿ ಅನೇಕ ದುಷ್ಪರಿಣಾಮಗಳುಂಟಾಗುತ್ತವೆ, ಅನೇಕ ಉಪಯುಕ್ತ ಮಿತ್ರ ಕೀಟಗಳಾದ ಪರೋಪಜೀವಿಗಳು, ಪರಭಕ್ಷಕ ಕೀಟಗಳು ಹಾಗೂ ಉತ್ಪಾದಕ ಕೀಟಗಳಾದ ಪರಾಗಸ್ಪರ್ಶಕ ಜೇನುನೊಣಗಳ ಸಂಖ್ಯೆ ನಾಶವಾಗುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ಸತತವಾಗಿ ಬಳಸುವ ಕೀಟನಾಶಕಗಳಿಂದ ಕೀಟ ನಿರೋಧಕತೆ ಹೆಚ್ಚಾಗುತ್ತದೆ' ಎಂಬ ಆತಂಕದಿಂದ ರಾಸಾಯನಿಕ ನಿಯಂತ್ರಣ ವಿಧಾನ ಕಟ್ಟಕಡೆಯ ಅನಿವಾರ್ಯ ವಿಧಾನವಾಗಬೇಕೆಂದು ತಿಳಿಸುತ್ತಿದ್ದರು. ಅಷ್ಟಲ್ಲದೆ ಈ ಮಾಹಿತಿ ರೈತರಿಗೆ ತಲುಪಬೇಕೆನ್ನುವ ಆಕಾಂಕ್ಷೆ ಹೊಂದಿದ್ದ ಅವರು ಹಲವಾರು ಕೃತಿಗಳನ್ನು ರಚಿಸಿದ್ದಾರೆ. ನಮ್ಮ ಕನ್ನಡ ಅಧ್ಯಯನ ವಿಭಾಗವು ಅವರ ಇಪ್ಪತ್ಮೂರು ಕನ್ನಡ ಕೃತಿಗಳನ್ನು ಈ ಹಿಂದೆ ಪ್ರಕಟಿಸಿದ್ದು ಅವುಗಳ ಒಟ್ಟು ಪುಟ ಸಂಖ್ಯೆ ಸುಮಾರು ಆರು ಸಾವಿರ ಪುಟಗಳಷ್ಟಾಗುತ್ತದೆ ಹಾಗೂ 'ಬೆಳೆ ಕೀಟಗಳು ಹಾಗೂ ಅವುಗಳ ಹತೋಟಿ' ಎಂಬ ಬೃಹದ್‌ಗ್ರಂಥವೇ 1702 ಪುಟಗಳಷ್ಟಿದೆ.

ನಾಡಿನ ಕೃಷಿ ಕ್ಷೇತ್ರಕ್ಕೆ ಗಣನೀಯ ಹಾಗೂ ನಿಸ್ವಾರ್ಥ ಸೇವೆ ಸಲ್ಲಿಸಿರುವ ವಿಜ್ಞಾನಿಗಳನ್ನು ಹಾಗೂ ಮಹನೀಯರನ್ನು ಪರಿಚಯಿಸುವ ಮಾಲಿಕೆಯಲ್ಲಿ ಕನ್ನಡ

ಅಧ್ಯಯನ ವಿಭಾಗ ಪ್ರಕಟಿಸುತ್ತಿರುವ ಇದು ಮೊಟ್ಟ ಮೊದಲ ಕೃತಿಯಾಗಿದೆ. ಈ ಕೃತಿಯನ್ನು ಡಾ. ಎಂ.ಪುಟ್ಟರುದ್ರಯ್ಯನವರ ವಿದ್ಯಾರ್ಥಿಗಳು ಹಾಗೂ ಕೆಲ ಕಾಲ ಅವರ ಸಹೋದ್ಯೋಗಿಗಳಾಗಿದ್ದ ಕೀಟಶಾಸ್ತ್ರಜ್ಞರು ಮತ್ತು ಡೀನ್ (ಸ್ನಾತಕೋತ್ತರ) (ನಿವೃತ್ತ), ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಹಾಗೂ ಪ್ರಸ್ತುತ ಧಾರವಾಡ ಕೃಷಿ ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿಯ ಸದಸ್ಯರಾಗಿರುವ ಡಾ.ಡಿ.ರಾಜಗೋಪಾಲ್‌ರವರು ರಚಿಸಿದ್ದಾರೆ. ಇದರ ಹಸ್ತಪ್ರತಿಯ ತಾಂತ್ರಿಕ ಪರಿಶೀಲನೆಯನ್ನು ಡಾ. ಎಂ.ಪುಟ್ಟರುದ್ರಯ್ಯನವರ ಮೊಟ್ಟಮೊದಲ ಡಾಕ್ಟೊರಲ್ ವಿದ್ಯಾರ್ಥಿ, ನಂತರ ಅವರ ಸಹೋದ್ಯೋಗಿ ಹಾಗೂ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಡಾ. ಜಿ.ಕೆ.ವೀರೇಶ್‌ರವರು ನೆರವೇರಿಸಿಕೊಟ್ಟಿದ್ದಾರೆ.

ಈ ಕೃತಿಯು ಡಾ. ಎಂ.ಪುಟ್ಟರುದ್ರಯ್ಯನವರ ಬದುಕು-ಸಾಧನೆ ಕುರಿತು ತಿಳಿದುಕೊಳ್ಳಬಯಸುವ ಎಲ್ಲ ಆಸಕ್ತರಿಗೆ ಉಪಯುಕ್ತವಾಗುವುದೆಂದು ಆಶಿಸಲಾಗಿದೆ.

**ಡಾ. ಜೆ.ಬಾಲಕೃಷ್ಣ**
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಹಾಗೂ
ಕನ್ನಡ ಅಭಿವೃದ್ಧಿ ಸಮಿತಿ ಕಾರ್ಯದರ್ಶಿ

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ
ಜಿ.ಕೆ.ವಿ.ಕೆ., ಬೆಂಗಳೂರು-560065

# ಲೇಖಕರ ಮಾತು

ಡಾ. ಪುಟ್ಟರುದ್ರಯ್ಯರವರು ಕರ್ನಾಟಕ ರಾಜ್ಯ ಕಂಡಂತಹ ಅಪರೂಪದ ಅತ್ಯುತ್ತಮ ಶಿಕ್ಷಕರು, ಸಂಶೋಧಕರು, ವಿಸ್ತರಣಾ ತಂತ್ರಜ್ಞರು, ಆಡಳಿತಾಧಿಕಾರಿ ಹಾಗೂ ಹೆಸರಾಂತ ಕೃಷಿ ವಿಜ್ಞಾನಿಗಳು. ಇವರು ಸುಮಾರು 38 ವರ್ಷಗಳ ಕಾಲ ರಾಜ್ಯ ಸರ್ಕಾರದ ಕೃಷಿ ವಿಜ್ಞಾನ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುತ್ತಾರೆ. ಡಾ. ಪುಟ್ಟರುದ್ರಯ್ಯರವರು ದೃಢ ಮನಸ್ಸಿನವರು. ವಿದ್ಯಾರ್ಥಿಗಳ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸುತ್ತಿದ್ದರು. ಅವರ ಜ್ಞಾನವೇ ಒಂದು ಶಾಶ್ವತ ಆಸ್ತಿ. ತಮ್ಮ ವೃತ್ತಿ ಜೀವನದಲ್ಲಾಗಲಿ ಮತ್ತು ಖಾಸಗಿ ಬದುಕಿನಲ್ಲಾಗಲಿ ಅವರು ತಮ್ಮ ತತ್ವ, ಸಿದ್ಧಾಂತ ಮತ್ತು ಆದರ್ಶಗಳನ್ನು ಮೀರಿದವರಲ್ಲ. ನನಗಂತೂ ಅವರ ಆಶೀರ್ವಾದ, ಮಾರ್ಗದರ್ಶನ ಸ್ನಾತಕ ಪದವಿಯಿಂದ ಸ್ನಾತಕೋತ್ತರ ಪದವಿಯಪಾಠ ಪ್ರವಚನಗಳಲ್ಲಿ ಆ ನಂತರ ಉದ್ಯೋಗವನ್ನು ಕೀಟಶಾಸ್ತ್ರ ವಿಭಾಗದಲ್ಲಿ ಬೋಧಕನಾಗಿ ಪ್ರಾರಂಭಿಸುವವರೆವಿಗೂ ದೊರಕಿದೆ ಹಾಗೂ ಮಹಾ ಛೇತನ ಮತ್ತು ಸ್ಫೂರ್ತಿಯನ್ನು ನೀಡಿದವರು.

ಡಾ. ಪುಟ್ಟರುದ್ರಯ್ಯನವರ ಸವಿನೆನಪಿಗಾಗಿ ಈ ಕಿರು ಹೊತ್ತಿಗೆಯನ್ನು ರಚಿಸುವ ಪ್ರಯತ್ನ ಮಾಡಿದ್ದೇನೆ. ನಾನು ಸ್ನಾತಕೋತ್ತರ ಕೀಟಶಾಸ್ತ್ರ ಅಧ್ಯಯನ ಮಾಡುವಾಗ ನಾನೊಬ್ಬ ಕೀಟಶಾಸ್ತ್ರ ವಿಜ್ಞಾನದಲ್ಲಿ ಸಾಮಾನ್ಯ ಸಂಶೋಧಕನೆಂದು ಗುರ್ತಿಸಿದ್ದರು. ಡಾ. ಪುಟ್ಟರುದ್ರಯ್ಯರವರು ಮೃದು ಸ್ವಭಾವ, ಸರಳ ಜೀವನದ ಕುರಿತು ಅವರ ಸಾವಿರಾರು ಹಿರಿಯ ವಿದ್ಯಾರ್ಥಿಗಳು, ಸಹಪಾಠಿಗಳು, ಕೃಷಿಕರು, ಅಭಿಮಾನಿಗಳು ಈ ಪುಸ್ತಕದ ಮುಖಾಂತರ ತಿಳಿಯಬೇಕೆಂಬುದೇ ನನ್ನ ಬಯಕೆ. ಅವರು ಯಾವುದೇ ಟೀಕೆಗಳಿಗೆ ಒಳಗಾದವರಲ್ಲ. ಯುವಕರಿಗೆ ಮತ್ತು ಸಹಪಾಠಿಗಳಿಗೆ ಉತ್ಸಾಹ ಆಸಕ್ತಿ, ಪ್ರೋತ್ಸಾಹಗಳನ್ನು ನೀಡಿದಂತ ಮಹಾನ್ ವ್ಯಕ್ತಿ. ಯಾವುದೇ ಬಗೆಯ ಮೆಚ್ಚುಗೆಗೆ ಅಥವಾ ಹೊಗಳಿಕೆಗೆ ಉಬ್ಬಿ ಮೆರೆದವರಲ್ಲ ಹಾಗೂ ಸನ್ಮಾನ ಪುರಸ್ಕಾರಗಳನ್ನು ತಿರಸ್ಕರಿಸಿ ಅವುಗಳಿಂದ ದೂರ ಉಳಿದವರು.

ಈ ಕೃತಿ ರಚನೆಯ ನನ್ನ ಪ್ರಯತ್ನದಲ್ಲಿ ಡಾ. ಪುಟ್ಟರುದ್ರಯ್ಯನವರ ಮಗಳಾದ ಡಾ. ಎಂ.ಪಿ.ಶ್ರೀ, ಅವರ ಪತಿ ಹರೀಶ್ ಮತ್ತು ಅವರ ಮಗಳು ಪ್ರಮೋದಿನಿ ಹರೀಶ್‌ರವರು ಸಾಕಷ್ಟು ಮಾಹಿತಿ ಹಾಗೂ ಭಾವಚಿತ್ರಗಳನ್ನು ಒದಗಿಸಿದ್ದಾರೆ. ಡಾ. ಪುಟ್ಟರುದ್ರಯ್ಯನವರ ತಮ್ಮನ ಮಗ ಡಾ.ಶ್ರೀನಿವಾಸಮೂರ್ತಿ ಮತ್ತು ಅವರ ಷಡ್ಡಕರಾದ ಶ್ರೀ ರಂಗೇಗೌಡರು ಮತ್ತು ಅವರ ಪತ್ನಿ ಶ್ರೀಮತಿ ಸಾವಿತ್ರಮ್ಮನವರು ಸಹ ಉತ್ತಮ ಮಾಹಿತಿ ಒದಗಿಸಿದ್ದಾರೆ. ಅದೇ ರೀತಿ ಪುಟ್ಟರುದ್ರಯ್ಯನವರ ಇತರ ಮಕ್ಕಳಾದ

ಡಾ.ಎಂ.ಪಿ.ಸತ್ಯವತಿ, ಡಾ.ಎಂ.ಪಿ.ವೈದೇಹಿ ಹಾಗೂ ಶ್ರೀಮತಿ ಎಂ.ಪಿ.ಮಂಜುಳಾರವರನ್ನು ಸಹ ದೂರವಾಣಿ ಮೂಲಕ ಸಂಪರ್ಕಿಸಿ ಮಾಹಿತಿ ಪಡೆದಿದ್ದೇನೆ. ಇವರೆಲ್ಲರಿಗೂ ನನ್ನ ಧನ್ಯವಾದಗಳು.

ಡಾ. ಪುಟ್ಟರುದ್ರಯ್ಯಯವರ ನೂರಾರು ವಿದ್ಯಾರ್ಥಿಗಳು ರಾಜ್ಯದಲ್ಲಿ, ರಾಷ್ಟ್ರದಲ್ಲಿ, ಹೊರದೇಶಗಳಲ್ಲಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಅತ್ಯುನ್ನತ ಹುದ್ದೆಯಲ್ಲಿದ್ದು, ಶಿಕ್ಷಕರಾಗಿ, ವಿಜ್ಞಾನಿಗಳಾಗಿ, ವಿಸ್ತರಣಾ ಕಾರ್ಯಕರ್ತರಾಗಿ, ಅಧಿಕಾರಿಗಳಾಗಿ, ಸರ್ಕಾರಿ ಇಲಾಖೆಗಳ ನಿರ್ದೇಶಕರಾಗಿ ಮತ್ತು ಕೃಷಿ ವಿಶ್ವವಿದ್ಯಾಲಯಗಳ ಕುಲಪತಿಗಳಾಗಿ ಸೇವೆ ಸಲ್ಲಿಸಿರುತ್ತಾರೆ.

ಡಾ. ಪುಟ್ಟರುದ್ರಯ್ಯರವರು ಸಾರ್ವಜನಿಕ ಬದುಕಿನಲ್ಲಿ ಹೆಚ್ಚಿನ ಪ್ರೀತಿಗಳಿಸಿದವರು. ಕೃಷಿ ಕೀಟವಿಜ್ಞಾನ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು ಕೃಷಿ ಕ್ಷೇತ್ರಕ್ಕೆ ತಮ್ಮ ಪ್ರತಿಭೆಯಿಂದ ಅತ್ಯದ್ಭುತ ಕೊಡುಗೆ ನೀಡಿದ ಮಹಾನ್ ವ್ಯಕ್ತಿಯೆಂದರೆ ತಪ್ಪಾಗಲಾರದು. ಅವರು ಪ್ರಾಮಾಣಿಕತೆಗೆ ಹಾಗೂ ವಿನಯಶೀಲತೆಗೆ ಸಂಕೇತವಾಗಿದ್ದರು. ಅವರಿಗೆ ಗೌರವ ಸಲ್ಲಿಸಲು ನನಗೆ ಈ ಪ್ರಕಟಣೆಯನ್ನು ಹೊರತರುವುದಕ್ಕಿಂತ ಬೇರಾವ ದಾರಿ ಕಾಣಲಿಲ್ಲ. ಈ ಕೃತಿಯನ್ನು ಪ್ರಕಟಿಸುತ್ತಿರುವ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ನನ್ನ ಕೃತಜ್ಞತೆಗಳು.

**ಡಾ. ಡಿ.ರಾಜಗೋಪಾಲ್**
#136/5, 'ವಲ್ಮೀಕ'
ಅಮೃತಹಳ್ಳಿ ಮುಖ್ಯ ರಸ್ತೆ
ಸಹಕಾರನಗರ ಅಂಚೆ
ಬೆಂಗಳೂರು-560092
ದೂರವಾಣಿ: 9448055514

# ಪರಿವಿಡಿ


ಕುಲಪತಿಗಳ ಹಾರೈಕೆ iii

ಸಂಪಾದಕರ ಮಾತು v

ಲೇಖಕರ ಮಾತು vii

1. ಪರಿಚಯ 1
2. ಬಾಲ್ಯ ಹಾಗೂ ವಿದ್ಯಾಭ್ಯಾಸ 3
3. ಕುಟುಂಬ 10
4. ವೃತ್ತಿ ಜೀವನ 15
5. ಆಡಳಿತ 28
6. ಡಾ. ಎಂ.ಪುಟ್ಟರುದ್ರಯ್ಯನವರ ಬರಹಗಳು 33
7. ಡಾ. ಪುಟ್ಟರುದ್ರಯ್ಯನವರ ಹೆಸರಿನಲ್ಲಿ ಕೀಟ ಪ್ರಭೇದ 36
8. ಡಾ. ಪುಟ್ಟರುದ್ರಯ್ಯನವರ ಸ್ಮಾರಕ ದತ್ತಿ ಸಮಿತಿ 39
9. ನಿವೃತ್ತಿಯಲ್ಲಿಯೂ ವೃತ್ತಿಪರತೆ 41
10. ಲೋಕದ ಕಣ್ಣಲ್ಲಿ ಡಾ.ಎಂ.ಪುಟ್ಟರುದ್ರಯ್ಯನವರು 44

ಅನುಬಂಧ-1- ಡಾ. ಪುಟ್ಟರುದ್ರಯ್ಯನವರು ರಚಿಸಿದ ಪುಸ್ತಕಗಳು 68

ಅನುಬಂಧ-2 - ಡಾ. ಪುಟ್ಟರುದ್ರಯ್ಯನವರ ಕಿರು ಹೊತ್ತಿಗೆಗಳು 70

# ಕನ್ನಡ ಅಭಿವೃದ್ಧಿ ಸಮಿತಿ

**ಅಧ್ಯಕ್ಷರು**

**ಡಾ. ಡಿ.ಪಿ. ಕುಮಾರ್**

ಶಿಕ್ಷಣ ನಿರ್ದೇಶಕರು

**ಸದಸ್ಯರು**

**ಡಾ. ಎನ್. ನಾಗರಾಜ್**

ವಿಸ್ತರಣಾ ನಿರ್ದೇಶಕರು

**ಡಾ. ಎಂ.ಎ. ಶಂಕರ್**

ಸಂಶೋಧನಾ ನಿರ್ದೇಶಕರು

**ಡಾ. ಎಲ್.ಮಂಜುನಾಥ್**

ಡೀನ್, ಕೃಷಿ ಕಾಲೇಜು, ಹಾಸನ

**ಶ್ರೀ ದೇವರಾಜು**

ಗ್ರಂಥಪಾಲಕರು, ಜಿಕೆವಿಕೆ ಗ್ರಂಥಾಲಯ

**ಡಾ. ಟಿ.ಎನ್. ಆನಂದ್**

ಸಂಪಾದಕರು, ಸಂವಹನ ಕೇಂದ್ರ

**ಕಾರ್ಯದರ್ಶಿ**

**ಡಾ. ಜೆ. ಬಾಲಕೃಷ್ಣ**

ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ಕನ್ನಡ ಅಧ್ಯಯನ ವಿಭಾಗ

ಕೃಷಿವಿಜ್ಞಾನಿ–ಕೀಟಶಾಸ್ತ್ರಜ್ಞ

# ಡಾ. ಎಂ.ಪುಟ್ಟರುದ್ರಯ್ಯ

# 1. ಪರಿಚಯ

ಡಾ. ಎಂ. ಪುಟ್ಟರುದ್ರ ಯ್ಯರವರು ಕರ್ನಾಟಕ ಕೃಷಿವಿಜ್ಞಾನ ಕ್ಷೇತ್ರದಲ್ಲಿ ಅಪರೂಪದ ಸೇವೆಸಲ್ಲಿಸಿದ ಮೇಧಾವಿಗಳಲ್ಲಿ ಒಬ್ಬರು. ಕರ್ನಾಟಕ ರಾಜ್ಯದ ಕೃಷಿ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗಾಗಿ, ರಾಜ್ಯ ಕೃಷಿ ಇಲಾಖೆ ಮತ್ತು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಹಾಗೂ ಕೃಷಿ ವಿದ್ಯಾರ್ಥಿಗಳ ಏಳಿಗೆಗಾಗಿ ತಮ್ಮ ಸಮಯ, ಶ್ರಮವನ್ನೆಲ್ಲ ಮುಡುಪಾಗಿಟ್ಟು ನಿರ್ಮೋಹ, ನಿಷ್ಕಾಮ ರೀತಿಯಲ್ಲಿ ಸೇವೆ ಸಲ್ಲಿಸಿದವರು. ಕೀಟಶಾಸ್ತ್ರದಲ್ಲಿ ವಿಶೇಷ ಪಾಂಡಿತ್ಯವನ್ನು ಸಂಪಾದಿಸಿದ ಇವರು ಜಾಗತಿಕ ಮೇರು ಕೀಟಶಾಸ್ತ್ರಜ್ಞರಲ್ಲಿ ಒಬ್ಬರಾಗಿರುವುದು ಕರ್ನಾಟಕದ ಹೆಮ್ಮೆಯೇ ಸರಿ.

ಕರ್ನಾಟಕ ರಾಜ್ಯದ ಕೃಷಿ ಇಲಾಖೆಯ ಕೀಟಶಾಸ್ತ್ರ ವಿಭಾಗದಲ್ಲಿ ಸಂಶೋಧಕರಾಗಿ, ಅಂದಿನ ಹೆಬ್ಬಾಳ ಕೃಷಿ ಕಾಲೇಜಿನಲ್ಲಿ ಅಧ್ಯಾಪಕ, ಪ್ರಾಧ್ಯಾಪಕ, ಪ್ರಾಂಶುಪಾಲರಾಗಿ ಮತ್ತು ಕೃಷಿ ವಿಶ್ವವಿದ್ಯಾಲಯದಲ್ಲಿ ದಕ್ಷ ಆಡಳಿತಗಾರರಾಗಿ ಕಾರ್ಯ ನಿರ್ವಹಿಸಿದವರು. ಕೃಷಿ ಕಾಲೇಜಿನ ಶಿಕ್ಷಣ, ಸಂಶೋಧನೆ ಹಾಗೂ ವಿಸ್ತರಣಾ ವಿಭಾಗಗಳಿಗೆ ತಮ್ಮ ಆಡಳಿತಾವಧಿಯಲ್ಲಿ ಅಗತ್ಯ ವಿಶೇಷ ಆದ್ಯತೆಗಳನ್ನು ನೀಡಿ, ಆ ವಿಭಾಗಗಳ ಸರ್ವತೋಮುಖ ವಿಕಾಸಕ್ಕೆ ಕಾರಣರಾದವರು. ಸಾವಿರಾರು ಕೃಷಿ ವಿದ್ಯಾರ್ಥಿಗಳ ಮೆಚ್ಚಿನ ಪ್ರಾಧ್ಯಾಪಕರಾಗಿದ್ದ ಇವರು ಕೃಷಿ ವಿಶ್ವವಿದ್ಯಾಲಯದ ಸರ್ವತೋಮುಖ ಅಭಿವೃದ್ಧಿಗೆ ತಮ್ಮ ಬದುಕನ್ನು ಮುಡುಪಾಗಿಟ್ಟು, ಅನುಕರಣೀಯ ಸಾರ್ಥಕ ಜೀವನ ನಡೆಸಿದಂತ ಧೀಮಂತರು.

ಕೃಷಿ ಶಿಕ್ಷಣ, ಕೀಟ ಪೀಡೆಗಳ ಸಂಶೋಧನೆ ಡಾ. ಪುಟ್ಟರುದ್ರಯ್ಯನವರ ಉಭಯ ಶಕ್ತಿಕೋಶಗಳು. ಇವುಗಳನ್ನು ಪೂರಕವಾಗಿಸಿಕೊಂಡು, ಅವರು 74 ವಸಂತಗಳನ್ನು ಬಾಳಿರುವುದೊಂದು ಇತಿಹಾಸ. ಇತಿಹಾಸವೆಂಬುದೊಂದು ಕಡಲು, ಅದರಲ್ಲಿ ಉಪ್ಪು ಇದೆ ಹಾಗೂ ಮುತ್ತು ಸಹ ಇದೆ. ಉಪ್ಪು ಕರಗುವಂಥದು ಆದರೆ ಮುತ್ತು ಕರಗುವಂಥದಲ್ಲ. ಪುಟ್ಟರುದ್ರಯ್ಯನವರದು ಕರಗಿಹೋಗುವಂಥ ವ್ಯಕ್ತಿತ್ವವಲ್ಲ. ಕೃಷಿ ಇಲಾಖೆ ಹಾಗೂ ಕೃಷಿ ಕಾಲೇಜು ಮತ್ತು ಕೃಷಿ ವಿಶ್ವವಿದ್ಯಾಲಯ ಬೆಳೆಸುವಲ್ಲಿ ಅವರು ಮಾಡಿದ ತ್ಯಾಗ, ಪಟ್ಟ ಶ್ರಮಗಳು, ಮತ್ತೊಂದೆಡೆ ಕೀಟ ಸಂಶೋಧನೆ, ಕೃಷಿ ಸಾಹಿತ್ಯ ರಚನೆ ಹೀಗೆ ಬಹುಮುಖಿ ಸಾಧನಾ ವ್ಯಕ್ತಿತ್ವವು, ರಾಜ್ಯ ಕೃಷಿ ಇಲಾಖೆ ಮತ್ತು ಕೃಷಿ ಶಿಕ್ಷಣ ಹಾಗೂ ಸಂಶೋಧನೆಗಳ ಚರಿತ್ರೆಯಲ್ಲಿ ಗುಪ್ತಗಾಮಿನಿಯಾಗಿ ಹರಿದು ಲೀನವಾಗಿದೆ.

ಮಾದರಿ ಕೃಷಿ ಅಧಿಕಾರಿ ಹಾಗೂ ಪ್ರಾಧ್ಯಾಪಕರಾಗಿದ್ದ ಡಾ. ಪುಟ್ಟರುದ್ರಯ್ಯನವರ ಬದುಕು ನಮ್ಮ ದೇಶದ ಯುವ ಪೀಳಿಗೆ ಒಂದು ಅಗತ್ಯ ಅವಲೋಕನವೆಂದು ಭಾವಿಸಬೇಕಾಗುತ್ತದೆ. ಯಾಕೆಂದರೆ ಇವರ ಬದುಕೊಂದು ಕಾಲಮಾನದ ಅಗತ್ಯಾಂಶದ ಸತ್ಯದ ಸಾಕ್ಷಾತ್ಕಾರವಾಗಿದೆ. ಅಂದರೆ; ಜಗತ್ತು ಆಧುನಿಕತೆಯ ಬಲದಿಂದ ವಿಕಾಸವಾಗುತ್ತಿರುವಾಗ, ಆ ಗಾಳಿ ಭಾರತಕ್ಕೂ ತಾಕಿ ಬದಲಾವಣೆಗಳ ಅಗತ್ಯವನ್ನು ಸೂಚಿಸಿದ ಕಾಲ ಸಂದರ್ಭದಲ್ಲಿ, ಒಬ್ಬ ಸಾಮಾನ್ಯ ಕೃಷಿಕನ ಮಗ ಅಪ್ರತಿಮ ಕೃಷಿವಿಜ್ಞಾನಿಯಾದದ್ದು ಮತ್ತು ಕೃಷಿ ಕ್ಷೇತ್ರಕ್ಕೆ ಸಮರ್ಪಣ ಭಾವದಿಂದ ಸೇವೆ ಸಲ್ಲಿಸಿದ್ದು. ಸಂಪ್ರದಾಯದ ಛಾಯೆಯಿಂದ ಹೊರಬಾರದ ಹಾಗೂ ಬಾರಲು ಶಕ್ತಿಗಳಿಲ್ಲದ ಕಾಲದಲ್ಲಿ, ಅನಿವಾರ್ಯತೆಯನ್ನು ಲೆಕ್ಕಿಸದೇ ಅಗತ್ಯವನ್ನು ಬೆನ್ನತ್ತಿಕೊಂಡು ಅನುಪಮ ಜ್ಞಾನ ಸಂಪಾದಿಸಿ ಅಮೂಲ್ಯ ಸೇವೆಗೈದವರಾಗಿದ್ದಾರೆ. ಕಾಲದ ಬದುಕಿನ ಸಮಸ್ಯೆಗಳಿಗೆ ಬಲಿಯಾಗದೆ, ಲಭ್ಯ ಅವಕಾಶಗಳನ್ನು ಸದುಪಯೋಗ ಮಾಡಿಕೊಂಡು, ಸಂದರ್ಭದ ಕಾರ್ಯಗಳನ್ನು ಫಲಪ್ರದವಾಗಿ ಪೂರೈಸುತ್ತಾ, ಯಶಸ್ಸನ್ನು ಕಂಡಂತಹ ಡಾ. ಎಂ. ಪುಟ್ಟರುದ್ರಯ್ಯನವರನ್ನು ಹಾಗೂ ಅವರ ಸಾಧನೆಯನ್ನು ಪರಿಚಯಿಸುವ ಗಮ್ಯವು ಈ ಕಿರು ಹೊತ್ತಿಗೆಯ ತಿರುಳಾಗಿದೆ.

## 2. ಬಾಲ್ಯ ಹಾಗೂ ವಿದ್ಯಾಭ್ಯಾಸ

ಡಾ.ಪುಟ್ಟರುದ್ರಯ್ಯನವರು ಮಾಗಡಿ ತಾಲ್ಲೂಕಿನ ಕುದೂರು ಗ್ರಾಮದ ಮೂಲದವರು. ಮೂಲತಃ ಕೃಷಿಕ ಮನೆತನದವರು. ಇವರ ತಂದೆ ಶ್ರೀ ಮುನಿಯಪ್ಪ. ಕೃಷಿ ವೃತ್ತಿಯನ್ನೇ ಅವಲಂಬಿಸಿ ಬಾಳಿದವರು. ಇವರ ತಾಯಿ ಶ್ರೀಮತಿ ಪುಟ್ಟಮ್ಮ. ಇವರು ಮಾಗಡಿಯ ಗಾರೆಮನೆ ರಂಗಣ್ಣನವರ ಮಗಳು.

ಕುದೂರಿನ ಶ್ರೀ ಮುನಿಯಪ್ಪ ಹಾಗೂ ಶ್ರೀಮತಿ ಪುಟ್ಟಮ್ಮ ದಂಪತಿಗಳಿಗೆ ಐದು ಜನ ಮಕ್ಕಳು. ನಾಲ್ಕು ಜನ ಗಂಡು ಮಕ್ಕಳು. ಒಂದು ಹೆಣ್ಣು ಮಗು. ಡಾ. ಪುಟ್ಟರುದ್ರಯ್ಯನವರು ಈ ದಂಪತಿಗಳಿಗೆ ಎರಡನೆಯ ಮಗನಾಗಿ ದಿನಾಂಕ 16.12.1909ರಲ್ಲಿ ಜನಿಸಿದರು. ಇವರಿಗೆ ದೊಡ್ಡರುದ್ರಪ್ಪನವರು ಹಿರಿಯ ಸಹೋದರರು. ಹೊಸಳಪ್ಪ ಮತ್ತು ಗಂಗಪ್ಪನವರು ಕಿರಿಯ ಸಹೋದರರು. ಸಾಕಮ್ಮ ಎಂಬುವವರು ಕಿರಿಯ ಸಹೋದರಿಯಾಗಿದ್ದರು.

ಡಾ. ಪುಟ್ಟರುದ್ರಯ್ಯನವರ ಅಜ್ಜನ ಮನೆಯಲ್ಲಿ, ತಾಯಿಯ ಸಹೋದರಿ ಶ್ರೀಮತಿ ಗಿರಿಜಮ್ಮನವರು, ಚಿಕ್ಕ ಪ್ರಾಯದಲ್ಲಿ ಗಂಡನನ್ನು ಕಳೆದುಕೊಂಡು ವೈಧವ್ಯವನ್ನು ಹೊತ್ತು ತವರನ್ನು ಆಶ್ರಯಿಸಿದ್ದರು. ಗಿರಿಜಮ್ಮನವರಿಗೆ ಮಕ್ಕಳಿರಲಿಲ್ಲ. ಹಾಗಾಗಿ ಸಹೋದರಿ ಶ್ರೀಮತಿ ಪುಟ್ಟಮ್ಮನವರ (ಚಿತ್ರ 10) ಎರಡನೆಯ ಮಗುವಾದ ಪುಟ್ಟರುದ್ರಯ್ಯರವರನ್ನು ದತ್ತುಪುತ್ರನನ್ನಾಗಿ ಮಾಡಿಕೊಂಡರು. ಈ ಕಾರಣವಾಗಿ ಬಾಲಕ ಪುಟ್ಟರುದ್ರಯ್ಯ ಅಜ್ಜನ ಮನೆಯಲ್ಲಿ ದತ್ತುತಾಯಿಯಾದ ಚಿಕ್ಕಮ್ಮನ ವಾತ್ಸಲ್ಯದ ಆಶ್ರಯದಲ್ಲಿ ಬಾಲ್ಯವನ್ನು ಕಳೆಯಬೇಕಾಯಿತು.

ಡಾ. ಪುಟ್ಟರುದ್ರಯ್ಯನವರು ಬಾಲ್ಯದಲ್ಲಿ ಮಾಗಡಿಯಲ್ಲಿ ಇದ್ದುದರಿಂದ ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಅಲ್ಲಿಯೇ ಆರಂಭಿಸಿದರು. ಪಾಠಶಾಲೆಯಲ್ಲಿ ಕಲಿಕಾ ಚಟುವಟಿಕೆಗಳಲ್ಲಿ ತುಂಬಾ ಚುರುಕಾಗಿ ಭಾಗವಹಿಸುತ್ತಿದ್ದ ವಿದ್ಯಾರ್ಥಿಯಾಗಿ ಅಧ್ಯಾಪಕರ ಮೆಚ್ಚುಗೆಯನ್ನು ಸಂಪಾದಿಸಿದ್ದರು. ಇವರು ಚಿಕ್ಕ ಪ್ರಾಯದಲ್ಲಿ ಲೀಲಾಜಾಲವಾಗಿ ಈಜಾಡುವ ಸಾಮರ್ಥ್ಯವನ್ನು ಸಹ ಹೊಂದಿದ್ದರು. ಮಾಗಡಿಯಲ್ಲಿ ಕರಣಿಕರ ಕಲ್ಯಾಣಿ ಎಂದು ಇಂದಿಗೂ ಪ್ರಖ್ಯಾತಿಯಾಗಿರುವ ವಿಶಾಲ ಮತ್ತು ಆಳವಾದ ಬಾವಿಯಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಅತಿ ವೇಗವಾಗಿ ಈಜುತ್ತಿದ್ದರಂತೆ. ಇದು ಪುಟ್ಟರುದ್ರಯ್ಯನವರ ಬಾಲ್ಯದ ಮನಸ್ಸು ಹಾಗೂ ಶರೀರಗಳ ಸದೃಢತೆಯನ್ನು ಸೂಚಿಸುತ್ತದೆ ಎನ್ನಬಹುದು.

ಡಾ. ಪುಟ್ಟರುದ್ರಯ್ಯನವರು 8ನೇ ತರಗತಿಯವರೆಗೆ ಮಾಗಡಿಯಲ್ಲಿಯೇ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿದರು. ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಮುಂದುವರಿಸಲು ಮಾಗಡಿಯಲ್ಲಿ ಆಗ ಪ್ರೌಢಶಾಲೆ ಇರಲಿಲ್ಲ. ಆಸಕ್ತರು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಹತ್ತಿರದ ಬೆಂಗಳೂರಿಗೆ ಹೋಗುವುದು ಅಂದಿನ ದಿನಗಳಲ್ಲಿ ಅನಿವಾರ್ಯವಾಗಿತ್ತು. ಡಾ. ಪುಟ್ಟರುದ್ರಯ್ಯನವರ ತಾತ (ತಾಯಿಯ ತಂದೆ) ಶ್ರೀ ಗಾರೆಮನೆ ರಂಗಣ್ಣನವರು ಸರ್ಕಾರದ ಕಡಿಮೆ ಸಂಬಳದ ಉದ್ಯೋಗದಿಂದ ನಿವೃತ್ತಿ ಹೊಂದಿ, ನಿವೃತ್ತಿ ಜೀವನ ನಡೆಸುತ್ತಿದ್ದರು. ಅವರಿಗೆ ಆಗ ಕೇವಲ ಮೂರು ರೂಪಾಯಿ ಪಿಂಚಣಿ ಬರುತ್ತಿತ್ತು. ಹೇಳಿಕೊಳ್ಳುವ ಆರ್ಥಿಕ ಸ್ಥಿತಿವಂತರಾಗಿರಲಿಲ್ಲ. ಆದರೆ ಪುಟ್ಟರುದ್ರಯ್ಯನವರ ಪ್ರಾಥಮಿಕ ಹಾಗೂ ಮಾಧ್ಯಮಿಕ ಪಾಠಶಾಲೆಯಲ್ಲಿರುವಾಗ ಓದಿನಲ್ಲಿಯ ಆಸಕ್ತಿ, ಶ್ರದ್ಧೆ, ಉತ್ಸಾಹಗಳಿಂದ ಶಾಲೆಯ ಅಧ್ಯಾಪಕರುಗಳ ಪ್ರೀತಿಗೆ ಪಾತ್ರರಾಗಿದ್ದರು. ಅವರ ಓದಿನ ಆಸಕ್ತಿ ಸಾಮರ್ಥ್ಯಗಳನ್ನು ಕೇಳಿ ತಿಳಿದ ಅಜ್ಜ ಶ್ರೀ ರಂಗಣ್ಣ ಹಾಗೂ ದತ್ತು ತಾಯಿ ಗಿರಿಜಮ್ಮನವರು ಸಹ ಬಾಲಕ ಪುಟ್ಟರುದ್ರಯ್ಯನವರಿಗೆ ಹೆಚ್ಚಿನ ವಿದ್ಯಾಭ್ಯಾಸವನ್ನು ಕೊಡಿಸಬೇಕೆಂಬ ನಿರ್ಣಯವನ್ನು ತೆಗೆದುಕೊಂಡರು.

ಇವರ ತಂದೆಯ ಸೋದರ ಸಂಬಂಧಿಯಾದ ಶ್ರೀ ಮುನಿಯಪ್ಪ ಎಂಬುವರು ಮಾಗಡಿಯಲ್ಲಿ ಉಪಾಧ್ಯಾಯರಾಗಿದ್ದರು. ಇವರ ಸಹಾಯ ಮಾರ್ಗದರ್ಶನದಿಂದ ಬಾಲಕ ಪುಟ್ಟರುದ್ರಯ್ಯನವರು ತಮ್ಮ ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಬೆಂಗಳೂರಿನಲ್ಲಿ ಮುಂದುವರಿಸಲು ಸಿದ್ಧರಾದರು. ಆ ಕಾಲದಲ್ಲಿ ಬೆಂಗಳೂರಿಗೆ ಹೋಗಲು ವಾಹನ ಸೌಕರ್ಯಗಳಿರಲಿಲ್ಲ. ಪ್ರಯಾಣ ಬಹುತೇಕವಾಗಿ ಕಾಲು ನಡಿಗೆಯಾಗಿತ್ತು. ಸ್ಥಿತಿವಂತರು ಹಾಗೂ ವೃದ್ಧರಿದ್ದರೆ, ಎತ್ತಿನ ಗಾಡಿಗಳನ್ನು ಬಳಸುತ್ತಿದ್ದರು. ಪ್ರಯಾಣವೆಂದರೆ ಜೊತೆಗೆ ಅಗತ್ಯ ಊಟದ ವ್ಯವಸ್ಥೆಗಾಗಿ ಬುತ್ತಿಯನ್ನು ಕಟ್ಟಿಕೊಂಡು ಹೋಗಬೇಕಾಗಿತ್ತು. ದಾರಿಯಲ್ಲಿ ಹಸಿವಾದಾಗ, ನೀರು ಇದ್ದೆಡೆಯಲ್ಲಿ ಉಂಡು, ತಮ್ಮ ಪ್ರಯಾಣ ಮುಂದುವರೆಸುತ್ತಿದ್ದರು. ಕಾಲುನಡಿಗೆಯಲ್ಲಿ ಅಂದಿನ ದಿನಗಳಲ್ಲಿ ಅಸ್ತವ್ಯಸ್ತ ರಸ್ತೆಗಳಿಂದ ಬೆಂಗಳೂರಿನ ತಲುಪಲು ಸುಮಾರು ಎರಡು ಮೂರು ದಿನಗಳ ಕಾಲ ನಡೆಯಬೇಕಾಗುತ್ತಿತ್ತು. ಬಾಲಕ ಪುಟ್ಟರುದ್ರಯ್ಯ ವಿದ್ಯಾಭ್ಯಾಸಕ್ಕೆಂದು ಮೊದಲ ಸಾರಿ ಬೆಂಗಳೂರಿಗೆ ಹೋಗಬೇಕಾದಾಗ, ತಮ್ಮ ಸಾಕು ತಾಯಿಯಿಂದ ಕೇವಲ ಐದು ರೂಪಾಯಿಗಳನ್ನು ಪಡೆದು, ಕಾಲು ನಡಿಗೆಯಲ್ಲಿಯೇ ಪ್ರಯಾಣ ಆರಂಭಿಸಿದರು. 30 ಮೈಲಿಗಳ ದೂರವನ್ನು 2–3 ದಿನಗಳು ನಡೆದು, ತಾಯಿ ಗಿರಿಜಮ್ಮನವರು ಕಟ್ಟಿಕೊಟ್ಟ ರಾಗಿರೊಟ್ಟಿ ಚಟ್ನಿ ಬುತ್ತಿಯನ್ನು ಹಸಿವಿಗೆ ಬಳಸಿಕೊಂಡು ಬೆಂಗಳೂರನ್ನು ತಲುಪಿದರು.

ಇವರ ಉಪಾಧ್ಯಾಯರಾದ ಶ್ರೀ ಮುನಿಯಪ್ಪನವರು ಯಾವುದೋ ಕಾರ್ಯ ನಿಮಿತ್ತ ಮೊದಲೇ ಬೆಂಗಳೂರಿಗೆ ತೆರಳಿದ್ದರು. ಪ್ರೌಢಶಾಲಾ ಪ್ರವೇಶಕ್ಕಾಗಿ ಬರುವ ಪುಟ್ಟರುದ್ರಯ್ಯನಿಗೆ ಬೆಂಗಳೂರಿನಲ್ಲಿ ಒಂದು ಸ್ಥಳದಲ್ಲಿ ಭೇಟಿಯಾಗಲು ಮೊದಲೇ ತಿಳಿಸಿದ್ದರು. ಪುಟ್ಟರುದ್ರಯ್ಯರವರಿಗೆ ಬೆಂಗಳೂರು ಹೊಸ ಜಾಗವಾಗಿದ್ದರೂ ಪ್ರಯಾಸದಿಂದ ಆ ಸ್ಥಳವನ್ನು ಹುಡುಕಿಕೊಂಡು ಹೋದರು. ಬೆಂಗಳೂರಿಗೆ ಬರಲು

ತಿಳಿಸಿದ ಉಪಾಧ್ಯಾಯ ಶ್ರೀ ಮುನಿಯಪ್ಪನವರು ಅಲ್ಲಿರಲಿಲ್ಲ. ಆ ಸಂದರ್ಭಕ್ಕೆ ವಿಚಲಿತರಾಗದೆ ಕಾದು ಕುಳಿತು, ಅವರು ತಡವಾಗಿ ಬಂದು ಭೇಟಿಯಾದ ಮೇಲೆ, ಉಪ್ಯಾಧ್ಯಾಯರ ಸಲಹೆಯಂತೆ, ನಗರದ ತೋಂಟದಪ್ಪ ಛತ್ರದಲ್ಲಿ ತಾತ್ಕಾಲಿಕವಾಗಿ ಆಶ್ರಯ ಪಡೆದು, ಸರ್ಕಾರಿ ಕೋಟೆ (ಫೋರ್ಟ್) ಪ್ರೌಢಶಾಲೆಯಲ್ಲಿ ಪ್ರವೇಶ ಪಡೆದರು. ಪ್ರವೇಶ ಪಡೆದ ಬಳಿಕ ಊಟ-ವಸತಿ ಒಂದು ಸಮಸ್ಯೆಯೇ ಆಗಿತ್ತು. ಅಂದಿನ ಕಾಲದ ಸಮಾಜದಲ್ಲಿ ಈ ರೀತಿ ಪರ ಊರಿನಿಂದ ವಿದ್ಯಾಭ್ಯಾಸಕ್ಕಾಗಿ ಬರುವಂತಹ ವಿದ್ಯಾರ್ಥಿಗಳಿಗೆ, ಆಯಾ ಊರಿನ ಕುಟುಂಬಗಳು ವಸತಿ ಸೌಕರ್ಯ, ಊಟದ ಸೌಕರ್ಯಗಳನ್ನು ಕಲ್ಪಿಸುವ ಕೆಲವು ಪದ್ಧತಿಗಳು ಇದ್ದವು. ಅಂತ ಪದ್ಧತಿಗಳಲ್ಲಿ ವಾರಾನ್ನದ ಪದ್ಧತಿ ಒಂದು. ವಿದ್ಯಾರ್ಥಿ ಪುಟ್ಟರುದ್ರಯ್ಯ ತಮ್ಮ ಗುರುಗಳ ಸಲಹೆ ಮೇರೆಗೆ, ಗವಿಪುರಂ ಗುಟ್ಟಹಳ್ಳಿ ಗವಿಗಂಗಾಧರೇಶ್ವರ ದೇವಸ್ಥಾನದ ಹತ್ತಿರವಿದ್ದ ಸಾಕಮ್ಮನವರ ಮನೆಯಲ್ಲಿ ವಸತಿಗಾಗಿ ತಂಗಿ, ವಾರಾನ್ನದ ವಿದ್ಯಾರ್ಥಿಯಾಗಿ ಪ್ರೌಢಶಾಲಾ ಅಭ್ಯಾಸವನ್ನು ಕೈಗೊಂಡರು. ಅನಾನುಕೂಲತೆಯಿಂದ ರಾತ್ರಿ ವೇಳೆಯಲ್ಲಿ ಬೀದಿ ದೀಪದ ಕೆಳಗೆ ಕುಳಿತೇ ಅಭ್ಯಾಸ ಮಾಡುತ್ತಿದ್ದರು. ಇಂಥ ಸಂದರ್ಭಗಳು ಆ ಕಾಲದಲ್ಲಿ ಸಹಜವಾಗಿರುತ್ತಿದ್ದವು ಎನಿಸುತ್ತದೆ.

ಪ್ರೌಢಶಾಲೆಯಲ್ಲೂ ಸಹ ಅಭ್ಯಾಸದ ಶ್ರದ್ಧೆ ನಿಷ್ಠೆಗಳಿಂದ ಉಪಾಧ್ಯಾಯರ ಮೆಚ್ಚುಗೆಯನ್ನು ಸಂಪಾದಿಸಿ, ಉಪಾಧ್ಯಾಯರಿಂದ ಕಾಳಜಿಯನ್ನು ಸಹ ಹೆಚ್ಚಿಸಿಕೊಂಡಿದ್ದರು. ಇವರ ಉಪಾಧ್ಯಾಯರು ಪುಟ್ಟರುದ್ರಯ್ಯನವರ ಸ್ವಭಾವ ಹಾಗೂ ಅಭ್ಯಾಸಕ್ಕೆ ಹೊಂದಿಕೊಂಡ ರೀತಿಯನ್ನು ಗಮನಿಸಿ ವಿದ್ಯಾರ್ಥಿಗೆ ವಸತಿ ವ್ಯವಸ್ಥೆಯ ಅನುಕೂಲ ಮಾಡಬೇಕೆಂದುಕೊಂಡರು. ಅವರು ನಗರದ ಕಾಟನ್‌ಪೇಟೆಯ ನಿವಾಸಿಯಾದ ಶ್ರೀ ಬಿ.ಸಿ.ಹನುಮಯ್ಯರವರ ಶಿಫಾರಸ್ಸನ್ನು ಉಪಯೋಗಿಸಿಕೊಂಡು, ವಿದ್ಯಾರ್ಥಿ ಪುಟ್ಟರುದ್ರಯ್ಯನವರಿಗೆ ಒಕ್ಕಲಿಗರ ಸಂಘದ ಉಚಿತ ವಿದ್ಯಾರ್ಥಿ ನಿಲಯದಲ್ಲಿ ಪ್ರವೇಶಾವಕಾಶವನ್ನು ಕಲ್ಪಿಸಿಕೊಡಬೇಕೆಂದು ಇಚ್ಛಿಸಿ, ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರು. ವಿದ್ಯಾರ್ಥಿ ನಿಲಯಕ್ಕೆ ಸಂಬಂಧಿಸಿದ ಪದಾಧಿಕಾರಿಗಳು ಹಾಗೂ ನಿಯಮ ಪಾಲಕರು ಆಗಲೇ ವಿದ್ಯಾರ್ಥಿನಿಲಯದಲ್ಲಿ ಪ್ರವೇಶ ಪ್ರಕ್ರಿಯೆ ಮುಗಿದಿದ್ದರೂ ಸಹ, ಈ ಬಡ ವಿದ್ಯಾರ್ಥಿಯ ಪ್ರತಿಭೆಯನ್ನು ಮತ್ತು ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳನ್ನು ಪರಿಶೀಲಿಸಿ ವಿದ್ಯಾರ್ಥಿನಿಲಯದಲ್ಲಿ ವಸತಿ ಅವಕಾಶವನ್ನು ಕಲ್ಪಿಸಿಕೊಟ್ಟರು. ಅಂದಿನ ಒಕ್ಕಲಿಗರ ಸಂಘದ ಅಧ್ಯಕ್ಷರಾದ ಶ್ರೀ ಕೆ.ಹೆಚ್.ರಾಮಯ್ಯನವರು ವಿದ್ಯಾರ್ಥಿ ಪುಟ್ಟರುದ್ರಯ್ಯನವರ ಪ್ರತಿಭಾಸಂಪನ್ನತೆಯನ್ನು ಕೇಳಿ ತಿಳಿದಾಗ, ತಡಮಾಡದೆ ತಕ್ಷಣವೇ ಕೋಟೆ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರಿಗೆ ಈ ವಿದ್ಯಾರ್ಥಿಗೆ ವಿದ್ಯಾರ್ಥಿವೇತನ ಸೌಕರ್ಯವನ್ನು ನೀಡಬೇಕೆಂದು ಒಂದು ಶಿಫಾರಸ್ಸಿನ ಪತ್ರವನ್ನು ಸಹ ರವಾನಿಸಿದರು. ಇದರಿಂದಾಗಿ ವಿದ್ಯಾರ್ಥಿ ಪುಟ್ಟರುದ್ರಯ್ಯನವರಿಗೆ ಪ್ರೌಢಶಾಲಾ ವಿದ್ಯಾಭ್ಯಾಸ ಮುಗಿಯುವವರೆಗೂ ವಿದ್ಯಾರ್ಥಿ ವೇತನ ದೊರಕುವಂತಾಯಿತು.

ರಜಾ ದಿನಗಳಲ್ಲಿ ಪುಟ್ಟರುದ್ರಯ್ಯನವರು ಮಾಗಡಿಯಲ್ಲಿರುವ ಅವರ ತಾತ ಮತ್ತು ದತ್ತುತಾಯಿ ಹಾಗೂ ಕುದೂರಿನಲ್ಲಿರುವ ತಂದೆ ತಾಯಿ ಮತ್ತು ಇತರ ಸಂಬಂಧಿಗಳ ಮನೆಯಲ್ಲಿ ಕಳೆಯುತ್ತಿದ್ದರು. ಆ ಸಂದರ್ಭದಲ್ಲಿ ತಮ್ಮ ವಿದ್ಯಾಭ್ಯಾಸದ ಚಟುವಟಿಕೆಗಳ ಬಗ್ಗೆ ಹಿರಿಯರೊಂದಿಗೆ ವಿಚಾರವಿನಿಮಯ ಮಾಡಿಕೊಳ್ಳುತ್ತಿದ್ದರು. ಹಿರಿಯರಲ್ಲಿ ಗೌರವ, ದೇವರಲ್ಲಿ ಭಕ್ತಿಯನ್ನು ಹೊಂದಿದ ಇವರು, ಉತ್ತಮ ಹವ್ಯಾಸಗಳನ್ನು ರೂಢಿಸಿಕೊಂಡಿದ್ದರು ಎಂಬುದನ್ನು ಅವರ ಸಂಬಂಧಿಗಳೊಬ್ಬರು ಸಾಂದರ್ಭಿಕವಾಗಿ ಹಂಚಿಕೊಂಡ ನೆನಪು. ಪುಟ್ಟರುದ್ರಯ್ಯನವರು ಬೆಂಗಳೂರಿನ ಕೋಟೆ ಶಾಲೆಯಲ್ಲಿ ಓದುತ್ತಿರುವಾಗ ಸಮಯ ಮಾಡಿಕೊಂಡು ಕೋಟೆ ತುಪ್ಪದ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಹೋಗಿ ಭಕ್ತಿಯಿಂದ ದರ್ಶನ ಪಡೆಯುವ ರೂಢಿಯನ್ನು ಹೊಂದಿದ್ದರು. ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲೇಬೇಕೆಂಬ ಅಭಿಲಾಷೆಯಿಂದ ಎಷ್ಟೇ ಕಷ್ಟಗಳು ಬಂದಿದ್ದರೂ ಸಹ ಅವೆಲ್ಲವನ್ನು ಸಹಿಸಿಕೊಂಡು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿದರೆಂದು ಪುಟ್ಟರುದ್ರಯ್ಯರವರ ಕೊನೆಯ ಷಡ್ಡಕರಾದ ಕರ್ನಾಟಕ ಸರ್ಕಾರದಲ್ಲಿ ಅಧೀನ ಕಾರ್ಯದರ್ಶಿಯಾಗಿ ನಿವೃತ್ತಿ ಹೊಂದಿರುವ ಶ್ರೀ ರಂಗೇಗೌಡರು ಸಂದರ್ಶನ ಸಂದರ್ಭದಲ್ಲಿ ನೀಡಿದ ಮಾಹಿತಿಯಾಗಿದೆ.

ಪ್ರೌಢ ಶಾಲಾ ಶಿಕ್ಷಣ ಮುಗಿದ ಮೇಲೆ 2 ವರ್ಷ ಇಂಟರ್ ಮೀಡಿಯಟ್ ಓದಲು ಸರ್ಕಾರಿ ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ಪ್ರವೇಶ ಪಡೆದರು. 1929ರಲ್ಲಿ ಇಂಟರ್ ಮೀಡಿಯಟ್ ಮುಗಿಸಿದ ತರುವಾಯ, ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎಸ್ಸಿ (ಆನರ್ಸ್) ಪದವಿಯನ್ನು ಪ್ರಾಣಿಶಾಸ್ತ್ರ ವಿಷಯದಲ್ಲಿ 1932ರಲ್ಲಿ ಪೂರ್ಣಗೊಳಿಸಿದರು. ಪುಟ್ಟರುದ್ರಯ್ಯನವರು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಅನೇಕ ಕಷ್ಟಗಳನ್ನು ಎದುರಿಸಬೇಕಾಗಿತ್ತು. ಆದರೆ ವಿದ್ಯೆ ಕಲಿಯುವಾಗ ತೋರಿಸಿದಂತಹ ಆತ್ಮವಿಶ್ವಾಸ, ಉತ್ತಮ ನಡವಳಿಕೆ, ಹಿರಿಯರಲ್ಲಿ ಮತ್ತು ಶಿಕ್ಷಕರಲ್ಲಿ ಇಟ್ಟಂತಹ ಗೌರವ ಹಾಗೂ ವಿಧೇಯತೆಯಿಂದ ಬೆರೆಯುತ್ತಿದ್ದ ನಡತೆಯ ಅವರ ಜೀವನ ಶೈಲಿಯಿಂದಾಗಿ ಅವರು ನಿರೀಕ್ಷಿಸಿದ ವಿದ್ಯಾಭ್ಯಾಸವನ್ನು ಪೂರೈಸಲು ಅನುಕೂಲವಾಯಿತು. ಇವರ ನಡತೆ ಹಾಗೂ ಪ್ರಯತ್ನಶೀಲತೆಯನ್ನು ಕಂಡು ಒಕ್ಕಲಿಗರ ಸಂಘದ ಅಧ್ಯಕ್ಷರಿಗೆ ಮತ್ತು ಪದಾಧಿಕಾರಿಗಳಿಗೆ ಹಾಗೂ ಅವರ ತಂದೆ-ತಾಯಿ, ತಾತ ಮತ್ತು ಸಾಕುತಾಯಿಗೆ ಬಹಳ ಸಂತೋಷವಾಗುತಿತ್ತಂತೆ. ಸಾಮಾನ್ಯ ಕುಟುಂಬದ ವಿದ್ಯಾರ್ಥಿಯಾಗಿರುವ ಪುಟ್ಟರುದ್ರಯ್ಯನವರು ವಿದ್ಯಾಭ್ಯಾಸದ ಹಾದಿಯಲ್ಲಿ ಎದುರಾದ ಸಂಕಷ್ಟಗಳನ್ನು ಗುರಿಯ ಸೋಪಾನಗಳನ್ನಾಗಿಸಿಕೊಂಡವರು. ಓದಬೇಕು, ಓದಿ ಮುಂದೆ ಬರಬೇಕು ಎಂಬ ಹಠಗಳಿದ್ದರೆ ಏನೂ ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ಪುಟ್ಟರುದ್ರಯ್ಯನವರು ಒಂದು ಸಾಕ್ಷಿ.

ರೈತ ಕುಟುಂಬದಲ್ಲಿ ಜನಿಸಿದ ಪುಟ್ಟರುದ್ರಯ್ಯನವರು ಗ್ರಾಮೀಣ ಜೀವನಕ್ಕೆ ಹೊಂದಿಕೊಂಡಿದ್ದವರು. ಹಳ್ಳಿಗಳಲ್ಲಿ ಕೃಷಿಗೆ ಪೂರಕವಾದ ಕಾರ್ಯಗಳಾದ ಸಗಣಿ

ಬಾಚುವುದರಿಂದ ಹಿಡಿದು ಕೆಸರ ಗದ್ದೆಯಲ್ಲಿ ತೆವಡೆ ಹಾಕಿ, ಸಸಿ ನಾಟಿ ಮಾಡುವ ಮುಂತಾದ ಕೃಷಿ ಕಾರ್ಯಗಳ ಅನುಭವ ಹೊಂದಿದ್ದವರು. ರಜಾದಿನಗಳಲ್ಲಿ ಊರಿಗೆ ಹೋದಾಗ ತಂದೆಮನೆಯಲ್ಲಿ ಇಂಥ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಇಂಥ ಅನುಭವ ಹಿನ್ನೆಲೆಯುಳ್ಳ ಅವರು; 'ರೈತರು ಹಳ್ಳಿಗಳಲ್ಲಿ ವಾಸಿಸುತ್ತಾರೆ, ಆದರೆ ಅವರಿಗೆ ಅನುಕೂಲಗಳು ಕಡಿಮೆ. ಅವರ ಸಮಸ್ಯೆಗಳಿಗೆ ಸ್ಪಂದಿಸಬೇಕು' ಎಂಬ ಅನುಕಂಪ ಮಾತ್ರ ಹೊಂದಿರದೆ, ಅವರಿಗೆ ಕೃಷಿ ಸಂಬಂಧಿ ಅಗತ್ಯ ಮಾಹಿತಿಯನ್ನು ನೀಡುವ ರೂಢಿಯನ್ನು ಬೆಳಸಿಕೊಂಡಿದ್ದರು. ಮುಂದೆ ಸರಕಾರದ ಕೃಷಿ ಇಲಾಖೆಯಲ್ಲಿ ಕೀಟತಜ್ಞರಾಗಿ ಸೇವೆಗೆ ಸೇರಿದ ಮೇಲೆ ಈ ರೂಢಿಯನ್ನು ವ್ರತವೆಂಬಂತೆ ಪಾಲಿಸಿ ಸ್ಥಳೀಯ ರೈತರಿಗೆ ಮೆಚ್ಚಿನ ಅಧಿಕಾರಿಯಾಗಿದ್ದರು. ಇವರು ಬೆಂಗಳೂರು, ಮಂಡ್ಯ ಮುಂತಾದ ಪ್ರಾಂತಗಳಲ್ಲಿ ಸೇವೆಯನ್ನು ಪೂರೈಸಿ ಇಲಾಖೆ ಹಾಗೂ ರೈತರ ಮೆಚ್ಚುಗೆಗೆ ಪಾತ್ರರಾಗಿದ್ದರು. ನಂತರ ಇಲಾಖಾ ಆದೇಶದ ಮೇರೆಗೆ ಚಿಕ್ಕಮಗಳೂರು ಜಿಲ್ಲೆಗೆ ವರ್ಗಾವಣೆಯಾಯಿತು. ಅಲ್ಲಿ ಕಾಫಿ ಬೆಳೆಗೆ ಸಂಬಂಧಿಸಿದ ಕಾಂಡ ಕೊರೆಯುವ ಕೀಟದ ನಿವಾರಣೆಗೆ ಇವರು ಕೈಗೊಂಡ ಸಂಶೋಧನೆ ಹಾಗೂ ನಿವಾರಣಾ ಕ್ರಮಗಳು ರೈತರಿಗೂ ಹಾಗೂ ಸರಕಾರಕ್ಕೂ ಮೆಚ್ಚುಗೆಯಾಗಿತ್ತು. ಅವರ ವೃತ್ತಿ ಪ್ರಜ್ಞೆ ಹಾಗೂ ಜ್ಞಾನದಿಂದ ನಾಡಿನ ಸಮಸ್ಯೆ ಸರಳವಾಗಿ ಪರಿಹಾರವಾದ ಕಾರಣ ಅಂದಿನ ಸರಕಾರ ಅವರನ್ನು ಉನ್ನತ ವ್ಯಾಸಂಗಕ್ಕೆ ಅಮೇರಿಕಾಕ್ಕೆ ಕಳುಹಿಸಿತು.

## ವಿದೇಶದಲ್ಲಿ ಉನ್ನತ ವಿದ್ಯಾಭ್ಯಾಸ


ವೃತ್ತಿ ಶ್ರದ್ಧೆ ಹಾಗೂ ಪಾಂಡಿತ್ಯವನ್ನು ಮೆಚ್ಚಿ ಇವರ ಸಂಪನ್ಮೂಲ ಸಾಮರ್ಥ್ಯದ ಬಳಕೆಗಾಗಿ, ಆಗಿನ ಮೈಸೂರು ರಾಜ್ಯ ಸರ್ಕಾರವು ಇವರನ್ನು ಕೀಟಶಾಸ್ತ್ರದಲ್ಲಿ ಹೆಚ್ಚಿನ ಜ್ಞಾನ ಸಂಪಾದನೆಗಾಗಿ ಉನ್ನತ ವ್ಯಾಸಂಗ ಮಾಡಲು, 1948ರಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನಕ್ಕೆ ನಿಯೋಜಿಸಿತು. ಅಮೇರಿಕಾದ ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದಲ್ಲಿ ಕೃಷಿ ಸಂಬಂಧಿತ ಸಂಶೋಧನೆಗಳಲ್ಲಿ, ಪೀಡೆ ನಿಯಂತ್ರಣ ಮತ್ತು ವಿಶೇಷವಾಗಿ ಜೈವಿಕ ನಿಯಂತ್ರಣ ಅದರಲ್ಲಿಯೂ ಪರಭಕ್ಷಕ ಕೀಟ ಮತ್ತು ಪರೋಪಜೀವಿಗಳನ್ನು ಉತ್ತೇಜಿಸುವುದು ಅವರ ಪ್ರಧಾನ ಸಂಶೋಧನೆಯಾಗಿತ್ತು. ಅಮೇರಿಕಾದಲ್ಲಿ ಜೈವಿಕಕೀಟ ಹತೋಟಿಯ ಕುರಿತಾಗಿ ಹೆಚ್ಚಿನ ಶ್ರದ್ಧೆ ಉತ್ಸಾಹವನ್ನು ತಾಳಿ, ಇವರು ತಮ್ಮ ಡಾಕ್ಟರೇಟ್ ಪದವಿಗಾಗಿ ಮುಸುಕಿನ ಜೋಳದಲ್ಲಿ ತೆನೆಕೊರೆಯುವ ಹುಳು *ಹಿಲಿಯೋಥಿಸ್ ಜೆಯಾ* ಮತ್ತು *ಹಿಲಿಯೋಥಿಸ್ ಫ್ಲಾಕ್ಸಿಫೇಗ* ಎಂಬ ಐತಿಹಾಸಿಕವಾಗಿ ಪ್ರಸಿದ್ಧವಾಗಿದ್ದ ಹಾಗೂ ಸರ್ವಭಕ್ಷಕ ಪೀಡೆ ಎಂದು ಹೆಸರು ವಾಸಿಯಾಗಿದ್ದ ಈ ಕೀಟದ ಜೀವನ ಚರಿತ್ರೆ, ಸ್ವಭಾವ, ಬೆಳೆಗಳ ಮೇಲೆ ಉಂಟುಮಾಡುವ ಹಾನಿ ಹಾಗೂ ನಿಯಂತ್ರಣ ಕ್ರಮ ಮುಂತಾದ ವಿಷಯಗಳ ಕುರಿತು ಅಧ್ಯಯನ ಕೈಗೊಂಡರು. ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದಲಿ ಕೇವಲ 2 ವರ್ಷಗಳಲ್ಲಿ ಎಂ.ಎಸ್. ಮತ್ತು ಡಾಕ್ಟರೇಟ್ ಪದವಿಯನ್ನು ಸಂಪಾದಿಸಿದರು (ಚಿತ್ರ 2 ಮತ್ತು 3).

ಪ್ರೊ. ಇ.ಒ.ಎಸ್ಸಿಗ್, ಪ್ರೊ. ಎ.ಇ.ಮಿಚೆಲ್ ಬಾಚೆರ್, ಪ್ರೊ. ರೊಡೆರಿಕ್ ಕ್ರೇಗ್, ಪ್ರೊ. ಆರ್.ಎಲ್.ಉಸಿಂಗರ್, ಪ್ರೊ. ಆರ್.ಎಲ್.ಡೌಟ್, ಪ್ರೊ. ಇ.ಎ.ಸ್ಟೇನ್‌ಹೌಸ್, ಪ್ರೊ. ಎ.ಇ.ಪ್ರಿಟ್‌ಚಾರ್ಡ್, ಪ್ರೊ. ಇ.ಜಿ.ಲಿನ್ಸ್‌ಲೆ, ಪ್ರೊ. ಸಿ.ಇ.ಯಾರ್‌ವುಡ್, ಪ್ರೊ. ಮೋರ್ಗಾನ್ ಹ್ಯಾರಿಸ್ ಮುಂತಾದ ವಿದ್ವಾಂಸರು ಡಾ. ಪುಟ್ಟರುದ್ರಯ್ಯನವರಿಗೆ ವಿವಿಧ ಪಠ್ಯವಿಷಯಗಳನ್ನು ಬೋಧಿಸಿ, ವಿಚಾರ ಸಂಕಿರಣ ಹಾಗೂ ಸಂಶೋಧನಾ ಪ್ರಕ್ರಿಯೆಗಳ ಮಾರ್ಗದರ್ಶಕರು ಹಾಗೂ ಪದವಿಗಳ ಮೌಲ್ಯಮಾಪಕರಾಗಿದ್ದರು. ಅಮೇರಿಕಾದಲ್ಲಿ ಇರುವಾಗ ಡಾ. ಪುಟ್ಟರುದ್ರಯ್ಯನವರು ಈ ಎಲ್ಲಾ ಪ್ರಾಧ್ಯಾಪಕರ ಪ್ರೀತಿ ವಿಶ್ವಾಸದ ಮೆಚ್ಚುಗೆಗೆ ಪಾತ್ರರಾಗಿದ್ದರು.

ಪ್ರೊ. ಇ.ಎ.ಸ್ಟೇನ್‌ಹೌಸ್ ಮತ್ತು ಪ್ರೊ. ಎ.ಆರ್.ಮಿಚೆಲ್ ಬ್ಯಾಚೆರ್‌ರವರು ಪುಟ್ಟರುದ್ರಯ್ಯನವರ ಸಂಶೋಧನೆಗೆ ಮಾರ್ಗದರ್ಶನ ನೀಡಿದ ಪ್ರಾಧ್ಯಾಪಕರು. ಇವರು ಪುಟ್ಟರುದ್ರಯ್ಯನವರ ಕಾರ್ಯತತ್ಪರತೆ ಹಾಗೂ ಉತ್ತಮ ನಿರ್ವಹಣೆಯಿಂದ ಕೂಡಿದ ನಡತೆಯನ್ನು ಅತ್ಯುನ್ನತ ಮಟ್ಟದ್ದು ಎಂದು ಮುಕ್ತಕಂಠದಿಂದ ಮೆಚ್ಚುಗೆಯನ್ನು ಸೂಚಿಸಿದ್ದಾರೆ. ಕೇವಲ ಎರಡು ವರ್ಷಗಳಲ್ಲಿ ಅತ್ಯಂತ ಯಶಸ್ವಿ ಸಂಶೋಧನಾ ಫಲಿತಾಂಶದೊಂದಿಗೆ ಮುಗಿಸಿರುವುದು ಒಂದು ದೊಡ್ಡ ಸಾಧನೆಯೇ ಸರಿ. ಇದಕ್ಕೆ ಮುಖ್ಯ ಕಾರಣ ಈ ಪ್ರಾಧ್ಯಾಪಕರೇ ಎಂದು ಅವರು ತಮ್ಮ ಸಂಶೋಧನಾ ಪ್ರಬಂಧದಲ್ಲಿ ಸ್ಮರಿಸಿದ್ದಾರೆ.

ಪುಟ್ಟರುದ್ರಯ್ಯನವರು ತಮ್ಮ ವ್ಯಾಸಂಗವನ್ನು ಮುಗಿಸಿ ಹಿಂತಿರುಗಿ ತಾಯ್ನಾಡಿಗೆ ಬರುವಾಗ, ಕೆಲವು ಹೆಸರಾಂತ ಅಂತರರಾಷ್ಟ್ರೀಯ ಕೀಟಶಾಸ್ತ್ರ ಪ್ರಯೋಗಾಲಯಗಳಿಗೆ ಭೇಟಿ ನೀಡಿದರು. ಅವು; Commonwealth Institute of Biological Control, Bellevolle in Canada, Citrus Experimental Station at Riverside USA, Gilltract Laboratory at Alabany for Bio control ಮತ್ತು ಅಮೇರಿಕಾದ ಇತರ ವಿಶ್ವವಿದ್ಯಾಲಯಗಳ ಸಂಶೋಧನಾಲಯಗಳು ಮತ್ತು ಫೆಡರಲ್ ಸಂಶೋಧನಾ ಕೇಂದ್ರಗಳು. ಇವುಗಳಲ್ಲದೆ ವಿಶ್ವವಿಖ್ಯಾತ ಇಂಗ್ಲೆಂಡಿನ ರೊಥಮ್‌ಸ್ಟೆಡ್ ಕ್ಷೇತ್ರ ಪ್ರಯೋಗಾಲಯ ಹಾಗೂ ಎಡಿನ್‌ಬರೊ ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡಿ, ಅಲ್ಲಿನ ಕೀಟಶಾಸ್ತ್ರ ಸಂಶೋಧನಾ ಚಟುವಟಿಕೆಗಳನ್ನು ವೀಕ್ಷಿಸಿ ಮರಳಿದರು. ಇವರ ಭೇಟಿಯು ವಿಶ್ವದ ವಿವಿಧೆಡೆ ಕೀಟಶಾಸ್ತ್ರ ಸಂಶೋಧನೆಯ ಅಭಿವೃದ್ಧಿ ಅದರಲ್ಲಿಯೂ ಜೈವಿಕ ನಿಯಂತ್ರಣದಲ್ಲಿ ಇವರಿಗಿದ್ದ ಆಸಕ್ತಿಯನ್ನು ಎತ್ತಿ ತೋರಿಸುತ್ತದೆ.

ಪುಟ್ಟರುದ್ರಯ್ಯರವರು ಅಮೇರಿಕಾ ಸಂಯುಕ್ತ ಸಂಸ್ಥಾನದ ಕ್ಯಾಲಿಫೋರ್ನಿಯ ಸ್ಟೇಟ್ ವಿಶ್ವವಿದ್ಯಾಲಯದಲ್ಲಿ ಎರಡು ವರ್ಷದಲ್ಲಿಯೇ ಮಾಸ್ಟರ್ ಮತ್ತು ಡಾಕ್ಟರೇಟ್ ಪದವಿಯನ್ನು ಪಡೆದಾಗ ಒಳ್ಳೆಯ ಹುದ್ದೆಯನ್ನು ಪಡೆಯುವ ಅರ್ಹತೆ, ಅವಕಾಶಗಳು ಹೇರಳವಾಗಿದ್ದವು. ವ್ಯಾಸಂಗ ಮುಗಿದ ಮೇಲೆ ಅವರ ಕೆಲವು ಪ್ರಾಧ್ಯಾಪಕರುಗಳು ಇವರನ್ನು ಅಲ್ಲಿಯೇ ವೃತ್ತಿಯನ್ನು ಕೈಗೊಳ್ಳುವಂತೆ ಒತ್ತಾಯಿಸಿದರು. ಎಷ್ಟೋ ಜನ



THE REGENTS OF THE UNIVERSITY OF CALIFORNIA

ON THE NOMINATION OF THE
COUNCIL OF THE GRADUATE DIVISION, NORTHERN SECTION
HAVE CONFERRED UPON

MAGADI PUTTARUDRIAH

WHO HAS PROVED HIS ABILITY BY ORIGINAL RESEARCH IN ENTOMOLOGY
THE DEGREE OF DOCTOR OF PHILOSOPHY
WITH ALL THE RIGHTS AND PRIVILEGES THERETO PERTAINING

GIVEN AT BERKELEY THIS TWENTY-SIXTH DAY OF JANUARY IN THE YEAR
NINETEEN HUNDRED AND FIFTY

Robert G. Sproul
PRESIDENT OF THE UNIVERSITY

Earl Warren
GOVERNOR OF CALIFORNIA AND PRESIDENT OF THE REGENTS

William R. Dennes
DEAN OF THE GRADUATE DIVISION

**ಡಾ. ಪುಟ್ಟರುದ್ರಯ್ಯನವರ ಪಿಎಚ್.ಡಿ. ಘಟಿಕೋತ್ಸವ ಪ್ರಮಾಣಪತ್ರ**

ಭಾರತೀಯರು ಸರ್ಕಾರದ ವಿದ್ಯಾರ್ಥಿವೇತನಗಳನ್ನು ಪಡೆದು ಹೊರದೇಶದಲ್ಲಿ ಓದಿ ಮುಗಿಸಿದ ನಂತರ ಹಿಂದಿರುಗದೆ ಅಲ್ಲಿಯೇ ಉಳಿದಿರುವ ಅನೇಕರಿದ್ದಾರೆ. ಕೆಲವರು ನಿಬಂಧನೆಗೊಳಗಾಗಿ ವಾಪಸ್ಸು ಬಂದರೂ ಹೆಚ್ಚಿನ ಸಂಭಾವನೆಗೋಸ್ಕರ ಸರ್ಕಾರದ ಕೆಲಸ ಬಿಟ್ಟು ಖಾಸಗಿ ಕೆಲಸಕ್ಕೆ ಹೋಗಿರುವವರೇ ಹೆಚ್ಚು. ಆದರೆ ಪುಟ್ಟರುದ್ರಯ್ಯನವರು ಆ ಗುಂಪಿಗೆ ಸೇರಿದವರಲ್ಲ; ಅವರ ನೀತಿ ನಿಯಮಗಳೇ ಬೇರೆ. ಅತ್ತ ಲಕ್ಷಿಸದೆ ತಮ್ಮ ಸೇವಾರಂಭದ ಮಾತೃ ವಿಭಾಗಗಳಾದ ಕರ್ನಾಟಕ ರಾಜ್ಯ ಕೃಷಿ ಇಲಾಖೆ ಹಾಗೂ ಕೃಷಿ ಕಾಲೇಜುಗಳನ್ನೇ ಕೇಂದ್ರವಾಗಿಟ್ಟುಕೊಂಡು ಸೇವೆಸಲ್ಲಿಸಲು ಆಸಕ್ತಿಯನ್ನು ತೋರಿದರು.

ತಮ್ಮ ಕೀರ್ತಿ ಹಾಗೂ ಹಣಗಳಿಕೆಗಿಂತ ತಮ್ಮ ದೇಶದ ಮಣ್ಣು ಮತ್ತು ರೈತರ ಸೇವೆ ಅವರಿಗೆ ಮುಖ್ಯವಾಗಿತ್ತು. ಆದುದರಿಂದ ಅವರು ಅಮೆರಿಕಾದಲ್ಲಿ ವೃತ್ತಿಯನ್ನು ಕೈಗೊಳ್ಳಲು ಇಷ್ಟಪಡದೇ ತಮ್ಮ ವ್ಯಾಸಂಗ ಮುಗಿಸಿದೊಡನೆ ಬೆಂಗಳೂರಿಗೆ ಹಿಂತಿರುಗಿದರು.

## 3. ಕುಟುಂಬ

ಸ್ನಾತಕ ಪದವಿ(ಬಿ.ಎಸ್ಸಿ.)ಯನ್ನು ಪೂರೈಸಿ, ಕೃಷಿ ಇಲಾಖೆಯಲ್ಲಿ ತಮ್ಮ ವೃತ್ತಿಯನ್ನು ಆರಂಭಿಸಿದ ತರುವಾಯದ ದಿನಗಳಲ್ಲಿ ಕುಟುಂಬದ ಹಿರಿಯರು ಹಾಗೂ ಸಂಬಂಧಿಗಳ ಸಲಹೆ ಮೇರೆಗೆ ಗುಬ್ಬಿ ತಾಲ್ಲೂಕಿನ ತೊರೆಹಳ್ಳಿ ಗ್ರಾಮದ ಶ್ರೀ ಹನುಮಂತೇಗೌಡರ ಮಗಳಾದ ಶ್ರೀಮತಿ ಸರಸ್ವತಮ್ಮನವರೊಂದಿಗೆ 1936ರ ಫೆಬ್ರವರಿ 14ರಂದು ವೈವಾಹಿಕ ಜೀವನಕ್ಕೆ ಕಾಲಿಟ್ಟರು. ಇವರ ಮಾವನವರಾದ ಶ್ರೀ ಹನುಮಂತೇಗೌಡರು ಗುಬ್ಬಿ ತಾಲ್ಲೂಕಿನಲ್ಲಿ ಶಾಲಾ ಶಿಕ್ಷಕರಾಗಿದ್ದರೂ ಬೇಸಾಯದಲ್ಲಿ ಆಸಕ್ತಿಯಿಂದ ತಮ್ಮನ್ನು ತೊಡಗಿಸಿಕೊಂಡವರಾಗಿದ್ದರು. ಅಲ್ಲದೆ ಬೆಂಗಳೂರಿನಲ್ಲಿ ಶ್ರೀ ಹನುಮಂತೇಗೌಡರು 'ಒಕ್ಕಲಿಗರ ಪತ್ರಿಕೆ'ಯ ಸಂಪಾದಕರಾಗಿದ್ದರು. ಕೃಷಿಯಲ್ಲಿ ಅಪಾರ ಪಾಂಡಿತ್ಯವನ್ನು ಸಂಪಾದಿಸಿಕೊಂಡ ಅಳಿಯ ಡಾ. ಪುಟ್ಟರುದ್ರಯ್ಯನವರ ಬಗ್ಗೆ ಅಭಿಮಾನ ಹಾಗೂ ಗೌರವಗಳನ್ನು ಹೊಂದಿದ್ದರು.

ಶ್ರೀಯುತ ಹನುಮಂತೇಗೌಡರಿಗೆ ಒಟ್ಟು ಐದು ಜನ ಹೆಣ್ಣು ಮಕ್ಕಳಿದ್ದರು. ಅವರ ಎರಡನೆಯ ಮಗಳೇ ಡಾ. ಪುಟ್ಟರುದ್ರಯ್ಯನವರ ಧರ್ಮಪತ್ನಿ ಸರಸ್ವತಮ್ಮನವರು (ಚಿತ್ರ 9). ಇವರು ವಿಶಾಲ ಮನೋಭಾವದವರಾಗಿದ್ದರು. ಡಾ. ಪುಟ್ಟರುದ್ರಯ್ಯನವರ ಸಾಧನೆಗೆ ಧರ್ಮಪತ್ನಿಯಾಗಿ ಪೂರ್ಣ ಸಹಕಾರ ತೋರುತ್ತಿದ್ದರು. ಆ ತಾಯಿಗೆ ಓದುವ ಮಕ್ಕಳೆಂದರೆ ತುಂಬಾ ಪ್ರೀತಿ. ತನ್ನಿಂದ ಸಾಧ್ಯವಾದಷ್ಟು ಪ್ರೋತ್ಸಾಹವನ್ನು ನೀಡುತ್ತಿದ್ದರು. ಕುಟುಂಬದ ಮಕ್ಕಳ ಮತ್ತು ಇತರೇ ಹತ್ತಿರ ಸಂಬಂಧಿಗಳ ಮಕ್ಕಳ ವಿದ್ಯಾಭ್ಯಾಸ ಹಾಗೂ ಸಂಸಾರವನ್ನು ನೋಡಿಕೊಳ್ಳುವ ಎಲ್ಲಾ ಜವಾಬ್ದಾರಿಗಳನ್ನು ನಿಭಾಯಿಸುತ್ತಿದ್ದರು. ಡಾ. ಪುಟ್ಟರುದ್ರಯ್ಯನವರು ಸಂಶೋಧನೆ ಹಾಗೂ ವೃತ್ತಿಯಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳಲು ಪೂರಕವಾಗಿ ಕಾರಣರಾಗಿದ್ದರು. ಕುಟುಂಬದ ಬಹುತೇಕ ಕಾರ್ಯಗಳನ್ನು ಹಾಗೂ ಸಣ್ಣ ಪುಟ್ಟ ಸಮಸ್ಯೆಗಳನ್ನು ಪುಟ್ಟರುದ್ರಯ್ಯನವರ ಗಮನಕ್ಕೆ ತರದೇ ಅವರೇ ನಿಭಾಯಿಸುತ್ತಿದ್ದರು. ಇವರು ಪುಟ್ಟರುದ್ರಯ್ಯನವರ ಎಲ್ಲ ಕಾರ್ಯಗಳಿಗೆ ಪೂರಕವಾಗಿ ಸಹಕಾರವನ್ನು ತೋರುತ್ತಿದ್ದರು.

ಡಾ. ಪುಟ್ಟರುದ್ರಯ್ಯ ಹಾಗೂ ಶ್ರೀಮತಿ ಸರಸ್ವತಮ್ಮ ದಂಪತಿಗಳಿಗೆ ನಾಲ್ಕು ಜನ ಹೆಣ್ಣು ಮಕ್ಕಳು. ಮೂರು ಜನ ಉನ್ನತ ವ್ಯಾಸಂಗವನ್ನು ಕೈಗೊಂಡು ಡಾಕ್ಟರೇಟ್ ಪದವಿಯನ್ನು ಪಡೆದಿರುತ್ತಾರೆ. ಮೊದಲನೆಯ ಮಗಳು ಡಾ. ಸತ್ಯವತಿಯವರು. ಇವರು ಫುಲ್‌ಬ್ರೈಟ್ ಫೆಲೋಷಿಪ್ ಪಡೆದು ಅಮೆರಿಕಾದ ಒಹಾಯೊ ವಿಶ್ವವಿದ್ಯಾಲಯದಲ್ಲಿ ಅಣು ಭೌತಶಾಸ್ತ್ರದಲ್ಲಿ (Nuclear Physics) ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ.

ಡಾ. ಸತ್ಯವತಿಯವರು ಬೆಂಗಳೂರು ವಿಶ್ವವಿದ್ಯಾಲಯದ ಭೌತಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದರು. ಅವರ ಪತಿ ಸಿದ್ದೇಗೌಡರು ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯಲ್ಲಿ, ಅಪರ ನಿರ್ದೇಶಕರಾಗಿ ಸೇವೆ ಪೂರೈಸಿ ನಿವೃತ್ತಿ ಜೀವನ ನಡೆಸುತ್ತಿದ್ದಾರೆ.

ಎರಡನೆಯ ಮಗಳು ಡಾ. ಎಂ. ಪಿ. ವೈದೇಹಿಯವರು. ಇವರು ಅಂತರರಾಷ್ಟ್ರೀಯ ಅಭಿವೃದ್ಧಿಗೆ ಸಂಯುಕ್ತ ರಾಷ್ಟ್ರಗಳ ನಿಯೋಗ(USAID)ದವರ ಸಹಕಾರದಿಂದ ಅಮೇರಿಕಾದ ಕ್ಯಾನ್ಸಾಸ್ ಸ್ಟೇಟ್ ಯೂನಿವರ್ಸಿಟಿಯಲ್ಲಿ ಗೃಹ ವಿಜ್ಞಾನದಲ್ಲಿ ಡಾಕ್ಟರೇಟ್ ಪದವಿ ಪಡೆದು, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಗೃಹ ವಿಜ್ಞಾನ ವಿಭಾಗದಲ್ಲಿ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾಗಿ ಹಾಗೂ ಕೃಷಿ ಕಾಲೇಜಿನಲ್ಲಿ ಶಿಕ್ಷಣ ನಿರ್ದೇಶಕರಾಗಿ ಸೇವೆ ನಿರ್ವಹಿಸಿದರು. ಇವರು ಸಂಯುಕ್ತ ರಾಷ್ಟ್ರಗಳ ವಿಶ್ವವಿದ್ಯಾಲಯಗಳ ಫೆಲೊ ವೇತನ ಪಡೆದು ಇಂಡೋನೇಷಿಯಾದಲ್ಲಿ ಹುದುಗುವಿಕೆಯ ತಂತ್ರಜ್ಞಾನ ತರಬೇತಿಯನ್ನು ಪಡೆದಿದ್ದಾರೆ. ಗೃಹವಿಜ್ಞಾನ ಕ್ಷೇತ್ರದಲ್ಲಿ ಇವರ ಸೇವೆ ಸಾಧನೆಯನ್ನು ಗಮನಿಸಿ ಭಾರತೀಯ ಗೃಹ ವಿಜ್ಞಾನಿಗಳ ಸಂಘವು ಇವರಿಗೆ 'ಅತ್ಯುತ್ತಮ ಗೃಹವಿಜ್ಞಾನಿ' ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಇವರು ರಚಿಸಿದ *'ವೈವಿಧ್ಯಮಯ ಊಟ'* ಎಂಬ ನವಕರ್ನಾಟಕ ಪ್ರಕಾಶನ ಪ್ರಕಟಿಸಿದ ಕೃತಿಗೆ, ಕರ್ನಾಟಕದ ಪ್ರತಿಷ್ಠಿತ ಪ್ರಶಸ್ತಿಗಳಲ್ಲಿ ಒಂದಾದ ಅತ್ತಿಮಬ್ಬೆ ಪ್ರಶಸ್ತಿ ಲಭಿಸಿದೆ. ಇವರ ಪತಿ ಶ್ರೀ. ವೆಂಕಟಸ್ವಾಮಿಯವರು ಇಂಜಿನಿಯರ್ ಪದವೀಧರರಾಗಿದ್ದು, ಸಹಾಯಕ ಇಂಜಿನಿಯರಾಗಿ ವೃತ್ತಿಯನ್ನು ಆರಂಭಿಸಿ ನಂತರ ಡಿಫೆನ್ಸ್ ಇಂಜಿನಿಯರಿಂಗ್ ಸರ್ವೀಸ್ ಸಂಸ್ಥೆಯಲ್ಲಿ ಸೇವೆ ಕೈಗೊಂಡಿದ್ದರು.

ಇವರ ಮೂರನೇ ಮಗಳು ಶ್ರೀಮತಿ. ಎಂ.ಪಿ. ಮಂಜುಳಾರವರು ಬಿ.ಎಸ್ಸಿ. ಮತ್ತು ಎಂ.ಇಡಿ. ಮಾಡಿ ಬೆಂಗಳೂರಿನ ಜಯನಗರದ ರಾಣಿ ಸರಳಾದೇವಿ ವಿದ್ಯಾಸಂಸ್ಥೆಯಲ್ಲಿ ಶಿಕ್ಷಕಿಯಾಗಿ, ಪ್ರಭಾರಿ ಮುಖ್ಯೋಪಾಧ್ಯಾಯಿನಿಯಾಗಿ ನಿವೃತ್ತಿ ಹೊಂದಿದವರು ಹಾಗೂ ಇವರ ಪತಿ ಶ್ರೀ. ಪ್ರಕಾಶ್‌ರವರು ಖಾಸಗಿ ಪೀಡೆ ನಿಯಂತ್ರಣದ ಸಂಸ್ಥೆಯೊಂದನ್ನು ಕಟ್ಟಿ ಅದರ ನಿರ್ವಹಣೆಯನ್ನು ಮಾಡುತ್ತಿದ್ದರು.

ಇವರ ನಾಲ್ಕನೆಯ ಮಗಳು ಡಾ. ಎಂ.ಪಿ. ಶ್ರೀ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಸ್ಯಶಾಸ್ತ್ರ ವಿಷಯದಲ್ಲಿ ಎಂ.ಎಸ್ಸಿ. ಪದವಿಯನ್ನು 2ನೇ ರ್‍ಯಾಂಕಿನೊಂದಿಗೆ ಉತ್ತೀರ್ಣರಾಗಿ ನಂತರ ಡಾಕ್ಟರೇಟ್ ಪದವಿಯನ್ನು ಪೂರೈಸಿ ರೇಷ್ಮೆಕೃಷಿ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಪತಿ ಶ್ರೀ. ಹರೀಶ್‌ರವರು ಕೇಂದ್ರ ಸರ್ಕಾರದ ಅಬಕಾರಿ ಇಲಾಖೆಯಲ್ಲಿ ಪರಿವೀಕ್ಷಣಾಧಿಕಾರಿಯಾಗಿ ಸೇವೆಸಲ್ಲಿಸಿ ಸ್ವಯಂ ನಿವೃತ್ತಿ ಹೊಂದಿ ನಿವೃತ್ತ ಜೀವನ ನಡೆಸುತ್ತಿದ್ದಾರೆ. ಡಾ. ಎಂ.ಪಿ. ಶ್ರೀಯವರಿಗೆ ನವದೆಹಲಿಯಲ್ಲಿರುವ ಸಿ.ವಿ. ಕಪೂರ್ ವಿದ್ಯಾ ಸ್ಥಾಪನಾ ಸಂಸ್ಥೆಯವರು ಶಿಕ್ಷಣ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆಯನ್ನು ಗುರುತಿಸಿ 'ಅಸಾಧಾರಣ ಶಿಕ್ಷಕ ಪ್ರಶಸ್ತಿ'ಯನ್ನು 2000ರಲ್ಲಿ ನೀಡಿ ಗೌರವಿಸಿದೆ.

ಪುಟ್ಟರುದ್ರಯ್ಯನವರು ತಮ್ಮ ನಾಲ್ಕು ಜನ ಹೆಣ್ಣು ಮಕ್ಕಳನ್ನು ಉನ್ನತ ಶಿಕ್ಷಣ ಪಡೆಯಲು ವಾತಾವರಣವನ್ನು ಕಲ್ಪಿಸಿ ಪ್ರೋತ್ಸಾಹಿಸಿದ್ದಾರೆ. ತಂದೆಯಂತೆ ಮಕ್ಕಳು ಸಹ ಶಿಕ್ಷಣ ಕ್ಷೇತ್ರದಲ್ಲಿ ತಮ್ಮ ಅಸಕ್ತಿಯನ್ನು ತೋರಿದ್ದಾರೆ. ಡಾ. ಪುಟ್ಟರುದ್ರಯ್ಯ ನಾಲ್ಕು ಜನ ಹೆಣ್ಣುಮಕ್ಕಳ ತಂದೆಯಾಗಿದ್ದರೂ ಅವರ ವೈಯಕ್ತಿಕ ವಿಚಾರಗಳನ್ನಾಗಲಿ ಅಥವಾ ಯಾವುದೇ ತೊಂದರೆಗಳನ್ನಾಗಲಿ ಯಾರಿಗೂ ಹೇಳಿಕೊಳ್ಳುವ ಪ್ರಸಂಗಗಳೇ ಬರಲಿಲ್ಲ.

ಡಾ. ಪುಟ್ಟರುದ್ರಯ್ಯನವರ ತಂದೆ ತೀರಿಕೊಂಡ ಮೇಲೆ ಅವರ ತಾಯಿ ಶ್ರೀಮತಿ ಪುಟ್ಟಮ್ಮನವರನ್ನು ಬೆಂಗಳೂರಿಗೆ ಕರೆಯಿಸಿಕೊಂಡರು. ಅವರ ಕಡೆಗಾಲದವರೆಗ ಮಗ ಡಾ. ಪುಟ್ಟರುದ್ರಯ್ಯ ಹಾಗೂ ಸೊಸೆ ಸರಸ್ವತಮ್ಮನವರೊಂದಿಗೆ ಕಳೆದರು.

'ನನ್ನ ಅಕ್ಕ ಮತ್ತು ಭಾವ ನಮ್ಮ ಕುಟುಂಬಕ್ಕೆ ಆಲದಮರ ಇದ್ದ ಹಾಗೆ. ನಮ್ಮೆಲ್ಲರನ್ನು ತಮ್ಮ ಸ್ವಂತ ಮಕ್ಕಳಂತೆ ನೋಡಿಕೊಳ್ಳುತ್ತಿದ್ದರು. ಬಹುತೇಕ ನಮ್ಮ ಬಂಧುಬಳಗದಲ್ಲಿಯ, ಕಿರಿಯರಿಗೆ ಶಿಕ್ಷಣ ಪಡೆಯಲು ನೆರವಾಗಿದ್ದಾರೆ. ಈ ವಿಚಾರವನ್ನು ಗಮನಿಸಿದಾಗ ಡಾ. ಎಂ. ಪುಟ್ಟರುದ್ರಯ್ಯನವರದು ವಿಭಕ್ತ ಕುಟುಂಬವಲ್ಲ, ಅವಿಭಕ್ತ ಕುಟುಂಬವೂ ಅಲ್ಲ. ಒಂದು ರೀತಿಯಲ್ಲಿ ಸಮುದಾಯ ಕುಟುಂಬವೇ ಅನ್ನಬಹುದೇನೋ. ಏಕೆಂದರೆ ಇವರ ಕುಟುಂಬವೆಂದರೆ ಅವರು ಹಾಗೂ ಅವರ ಮಕ್ಕಳು ಮಾತ್ರವಾಗಿರದೆ, ಇವರ ಮನೆಯಲ್ಲಿ ಆಶ್ರಯ ಪಡೆದು ಹಾಗೂ ಅವಲಂಬನೆಯಾಗಿ ವಿದ್ಯಾಭ್ಯಾಸವನ್ನು ಕೈಗೊಂಡ ಬಂಧುಗಳ ಮಕ್ಕಳೆಲ್ಲರನ್ನೂ ಒಳಗೊಳ್ಳುತ್ತದೆ' ಎಂದಿದ್ದಾರೆ ಅವರ ನಾದಿನಿಯವರಾದ ಶ್ರೀಮತಿ ಸಾವಿತ್ರಮ್ಮನವರು.

ಇವರ ಮನೆಯಲ್ಲಿ ಅವರ ಖಾಸಾ ಷಡ್ಡಕರಾದಂತಹ ರಂಗೇಗೌಡರು, ಮತ್ತೋರ್ವ ಷಡ್ಡಕರಾದ ಲಕ್ಷ್ಮಣಗೌಡರ ಪುತ್ರ ಶ್ರೀ. ವೆಂಕಟೇಶ, ಭಾವಮೈದುನ ಸತ್ಯನಾರಾಯಣ ಪ್ರಸಾದ ಮತ್ತು ಅವರ ಮಗ ಕೃಷ್ಣಪ್ರಸಾದ, ಅವರ ತಮ್ಮನ ಮಗ ಶ್ರೀ ಕೆ.ಜಿ.ಶ್ರೀನಿವಾಸಮೂರ್ತಿಯವರು, ಅವರ ನಾದಿನಿ ಶ್ರೀಮತಿ ಜಯಮ್ಮನವರ ಮಗನಾದ ಶ್ರೀ ನಾಗರಾಜ ಇವರೆಲ್ಲರೂ ಪುಟ್ಟರುದ್ರಯ್ಯನವರ ಕುಟುಂಬದ ಆಶ್ರಯದಲ್ಲಿದ್ದು ವಿದ್ಯಾಭ್ಯಾಸವನ್ನು ಪೂರೈಸಿದವರು.

ಶ್ರೀ. ವೆಂಕಟೇಶ್‌ರವರು ಇಂಜಿನಿಯರಿಂಗ್ ಪದವಿ ವಿದ್ಯಾಭ್ಯಾಸವನ್ನು ಪೂರೈಸಿ ಹೆಚ್.ಎಂ.ಟಿ. ಕಾರ್ಖಾನೆಯಲ್ಲಿ ಉಪ ಮುಖ್ಯ ಇಂಜಿನಿಯರ್ ಆಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದಾರೆ. ಶ್ರೀ. ವೆಂಕಟೇಶರವರಿಗೆ ಎಲೆಕ್ಟ್ರಾನಿಕ್ಸ್ ವಿಭಾಗದಲ್ಲಿ ಟ್ರಾನ್ಸಿಸ್ಟರ್ ತಂತ್ರಜ್ಞಾನದಲ್ಲಿ ಇದ್ದ ಆಸಕ್ತಿ ಮತ್ತು ಉತ್ಸಾಹವನ್ನು ಡಾ. ಪುಟ್ಟರುದ್ರಯ್ಯನವರು ಮೆಚ್ಚಿ ಅವರನ್ನು ಹಲವಾರು ಸಂದರ್ಭಗಳಲ್ಲಿ ಪ್ರೋತ್ಸಾಹಿಸುತ್ತಾ ಸದಾ ಆತ್ಮವಿಶ್ವಾಸವನ್ನು ತುಂಬುತ್ತಿದ್ದರು. ಕಿರಿಯರಿಗೆ ಈ ರೀತಿಯ ಇವರ ಪ್ರೋತ್ಸಾಹವು ಅವರ ಸಾಮಾನ್ಯ ಸ್ವಭಾವವಾಗಿಸಿಕೊಂಡಿದ್ದರೆಂದು ಹೇಳುತ್ತಾ, ಶ್ರೀ. ವೆಂಕಟೇಶರವರು, ನಮ್ಮ ಸಂಬಂಧಿಕರ ಬಹುತೇಕ ಕುಟುಂಬಗಳಿಗೆ ಪುಟ್ಟರುದ್ರಯ್ಯನವರ ಸಹಕಾರ ಪ್ರೋತ್ಸಾಹ ಸದಾ ಸ್ಮರಣೀಯವಾದದ್ದು ಎಂದು ಗೌರವಭಾವದಿಂದ ಹೇಳಿಕೊಳ್ಳುತ್ತಾರೆ.

ಇವರ ನಾಲ್ಕನೆಯ ಷಡ್ಡಕರಾದ ಶ್ರೀ. ರಂಗೇಗೌಡರು ಡಾ.ಪುಟ್ಟರುದ್ರಯ್ಯರವರ ಹತ್ತಿರದ ಸಂಬಂಧಿಗಳು. ಇವರು ತಮ್ಮ ವಿದ್ಯಾರ್ಥಿ ಜೀವನವನ್ನು ಪುಟ್ಟರುದ್ರಯ್ಯನವರ ಮನೆಯಲ್ಲಿಯೇ ಪೂರೈಸಿ, ಡಿಗ್ರಿ ಪಡೆದ ನಂತರ ಸರಕಾರಿ ಉದ್ಯೋಗಿಯಾಗಿ ನೇಮಕಗೊಂಡರು. ಅವರು ಸೇವೆಗೆ ಸೇರುವಾಗ ಯಾವುದೇ ಆಮಿಷಕ್ಕೆ ಒಳಗಾಗದೆ ಕುಟುಂಬಕ್ಕೆ ಒಳ್ಳೆ ಹೆಸರು ತರಬೇಕೆಂದು ಕಾಳಜಿಯಿಂದ ತಿಳಿಸುತ್ತಿದ್ದರೆಂದು ಅವರ ಮಾರ್ಗದರ್ಶನದಂತೆ ನಾನು ಸೇವೆ ನಿರ್ವಹಿಸಿದ್ದೇನೆಂದು ಹೇಳಿಕೊಳ್ಳುತ್ತಾರೆ.

ಶ್ರೀ ರಂಗೇಗೌಡರ ಪುತ್ರ ಡಾ. ರಘುನಾಥ್‌ರವರು ಪ್ರಸ್ತುತ ಹೆಸರಘಟ್ಟದಲ್ಲಿರುವ ಭಾರತೀಯ ಅನುಸಂಧಾನ ಪರಿಷತ್ತಿನ ಕೇಂದ್ರೀಯ ಸಿಹಿ ನೀರು ಜೀವಪಾಲನ ಸಂಶೋಧನಾ ಸಂಸ್ಥೆಯಲ್ಲಿ ಪ್ರಧಾನ ವಿಜ್ಞಾನಿಯಾಗಿ ಕೆಲಸ ಮಾಡುತ್ತಿದ್ದಾರೆ. ಇವರು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ 1974ರಲ್ಲಿ ಬಿ.ಎಸ್ಸಿ(ಅಗ್ರಿ.) ಪದವಿಯಲ್ಲಿ ಚಿನ್ನದ ಪದಕ ಹಾಗೂ ಪ್ರಶಸ್ತಿ ಪಡೆದು ನಂತರ ಮೈಸೂರಿನಲ್ಲಿರುವ ಕೇಂದ್ರೀಯ ಆಹಾರ ಮತ್ತು ತಂತ್ರಜ್ಞಾನ ಸಂಶೋಧನಾ ಸಂಸ್ಥೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಹಾಗೂ ಕೆನಡಾದ ಸಾಸ್ಕಚೆವಾನ್ ವಿಶ್ವವಿದ್ಯಾನಿಲಯದಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ. ಆಹಾರ ತಂತ್ರಜ್ಞಾನದಲ್ಲಿ ವಿಶೇಷ ಸಂಶೋಧನೆ ಕೈಗೊಂಡ ಇವರು ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನಲ್ಲಿ ವಿಜ್ಞಾನಿಯಾಗಿ ಸೇವಾನಿರತರಾದರು. ಡಾ. ರಘುನಾಥ್‌ರವರು ಡಾ. ಪುಟ್ಟರುದ್ರಯ್ಯನವರನ್ನು, ಅವರು ನಮಗೆ ಸದಾ ಪೂಜ್ಯನೀಯರು ಎಂದು ಅವರನ್ನು ಸ್ಮರಿಸಿಕೊಳ್ಳುತ್ತಾರೆ. 'ಬಾಲ್ಯದಿಂದ ಹಿಡಿದು ವಿಜ್ಞಾನಿಯಾಗಿ ಸೇವೆಗೆ ಸೇರಿಕೊಂಡ ಮೇಲೂ ಸಹ ನನ್ನ ಬೆಳವಣಿಗೆಯ ಪ್ರತಿ ಹಂತದಲ್ಲಿಯೂ ನನ್ನ ಪ್ರಗತಿಯನ್ನು ವಿಚಾರಿಸಿ ಮಾರ್ಗದರ್ಶನ ನೀಡುತ್ತಿದ್ದರು. ನನ್ನ ದೊಡ್ಡಪ್ಪ ಡಾ. ಪುಟ್ಟರುದ್ರಯ್ಯರವರ ಉತ್ತೇಜನ, ಸ್ಫೂರ್ತಿಯೇ ನಮ್ಮ ಬೆಳವಣಿಗೆ' ಎಂದು ಹೇಳಿಕೊಳ್ಳುತ್ತಾರೆ.

ಇವರ ಮತ್ತೊಬ್ಬ ಷಡ್ಡಕರಾದ ಹಾಸನದ ಅಣ್ಣೇಗೌಡರ ಪುತ್ರರಾದ ಡಾ. ಎಚ್.ಎ.ರಂಗನಾಥ್‌ರವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರಾಣಿಶಾಸ್ತ್ರ ವಿಭಾಗದಲ್ಲಿ ಸಂಶೋಧನೆ ಮಾಡಿ, ಚಿಕ್ಕವಯಸ್ಸಿನಲ್ಲಿಯೇ ಪ್ರಾಧ್ಯಾಪಕರಾಗಿ ಶಿಕ್ಷಣ ಹಾಗೂ ಸಂಶೋಧನೆಯಲ್ಲಿ ಗುರುತರವಾದ ಕೀರ್ತಿಯನ್ನು ಸಂಪಾದಿಸಿದ್ದಾರೆ. ಇವರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕುಲಪತಿಗಳಾಗಿ, ನಂತರದಲ್ಲಿ ನ್ಯಾಕ್- ರಾಷ್ಟ್ರೀಯ ಮೌಲ್ಯೀಕರಣ ಮತ್ತು ಮಾನ್ಯತಾ ಪರಿಷತ್ ನಿರ್ದೇಶಕರಾಗಿ ನಿವೃತ್ತಿ ಹೊಂದಿದರು. ಇವರು ಡಾ. ಪುಟ್ಟರುದ್ರಯ್ಯರವರನ್ನು 'ಅತ್ಯುನ್ನತ ಕೃಷಿವಿಜ್ಞಾನಿ ಮಾತ್ರವಾಗಿರದೆ ಸಮಾಜದ ಬಗ್ಗೆ, ವಿದ್ಯಾರ್ಥಿ ಹಾಗೂ ಯುವಕರ ಬಗ್ಗೆ ಅಪಾರವಾದ ಕಾಳಜಿ ಕನಸುಗಳನ್ನು ಹೊಂದಿದ್ದರು. ತರುಣರ ಪ್ರತಿಭೆಯನ್ನು ಸೂಕ್ತವಾದ ರೀತಿಯಲ್ಲಿ ಪ್ರೋತ್ಸಾಹಿಸಿ ಸಂತೋಷಪಡುತ್ತಿದ್ದರು. ನನಗಂತೂ ಅನೇಕ ಸಂದರ್ಭಗಳಲ್ಲಿ ನನ್ನ ವಿದ್ಯಾಭ್ಯಾಸ ಹಾಗೂ ವೃತ್ತಿಯ ಸಂದರ್ಭದಲ್ಲಿ ಸೂಕ್ತ ಮಾರ್ಗದರ್ಶನ ನೀಡುತ್ತಿದ್ದರು' ಎಂದು ಹೇಳಿಕೊಳ್ಳುತ್ತಾರೆ.

ಡಾ. ಪುಟ್ಟರುದ್ರಯ್ಯನವರ ತಮ್ಮನ ಮಗ, ಡಾ. ಕೆ. ಜಿ.ಶ್ರೀನಿವಾಸಮೂರ್ತಿಯವರು ಪ್ರಿಯೂನಿವರ್ಸಿಟಿಯಿಂದ ಪಿಎಚ್.ಡಿವರೆಗೆ ದೊಡ್ಡಪ್ಪನ ಆಶ್ರಯ ಹಾಗೂ ಮಾರ್ಗದರ್ಶನದಲ್ಲಿ ವಿದ್ಯಾಭ್ಯಾಸ ಪೂರೈಸಿದ್ದಾರೆ. ರಾಸಾಯನಶಾಸ್ತ್ರದಲ್ಲಿ ವಿಶೇಷ ಪರಿಣತಿಯನ್ನು ಸಂಪಾದಿಸಿ, ಬೆಂಗಳೂರಿನ ವಿಶ್ವೇಶ್ವರಪುರಂ ವಿಜ್ಞಾನ ಕಾಲೇಜಿನಲ್ಲಿ; ಉಪನ್ಯಾಸಕ, ಪ್ರಾಧ್ಯಾಪಕರಾಗಿ ಹಾಗೂ ಅದೇ ಕಾಲೇಜಿನ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದಾರೆ. ಡಾ. ಪುಟ್ಟರುದ್ರಯ್ಯನವರ ಸಹಾಯ ಸಂದರ್ಭಗಳ ಬಗ್ಗೆ ಮಾತನಾಡುತ್ತಿದ್ದರೆ, 'ನನ್ನ ವಿದ್ಯಾಭ್ಯಾಸ ಮತ್ತು ವೃತ್ತಿಗೆ, ಸ್ಫೂರ್ತಿದಾಯಕರಾಗಿ, ಮಾರ್ಗದರ್ಶಕ ಹಾಗೂ ಆಶ್ರಯದಾತರಾಗಿದ್ದ ನನ್ನ ದೊಡ್ಡಪ್ಪರವರನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ' ಎಂದು ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿರುತ್ತಾರೆ.

ಡಾ. ಪುಟ್ಟರುದ್ರಯ್ಯನವರು ಬಾಲ್ಯದಿಂದಲೂ ತಮ್ಮ ಕುಟುಂಬ ಪರಿವಾರ ಹಿತಚಿಂತಕರ ಮತ್ತು ಸಮಾಜದ ಬೆಂಬಲದಿಂದ ತಮ್ಮ ವಿಶಿಷ್ಟ ಸ್ವರೂಪದ ವ್ಯಕ್ತಿತ್ವವನ್ನು ರೂಪಿಸಿಕೊಂಡವರು. ತತ್ಫಲವಾಗಿ ವ್ಯಕ್ತಿ ಹಿತಕ್ಕಿಂತ ಸಮುದಾಯದ, ಸಮಾಜದ, ಸಂಸ್ಥೆಗಳ ಹಿತಗಳು ಮಿಗಿಲಾದವೆಂದು ಭಾವಿಸುವಂತಹ ಹಾಗೂ ನಡೆಯುವ ಮನೋಗತವನ್ನು ಹೊಂದಿದ್ದರು. ಕಾರಣ ಬಂಧುಗಳ ಮಕ್ಕಳನ್ನು ತಮ್ಮ ಮಕ್ಕಳಂತೆ ಪಾಲನೆಮಾಡಿ, ಕಾಳಜಿ ನಿರ್ವಹಿಸಿ ಪ್ರಭಾವ, ಪ್ರೇರಣೆ ಬೀರಿದವರು. ಅವರ ಬದುಕು ವಿಭಕ್ತ ಕುಟುಂಬದ ಮನಸ್ಸಿನದಾಗಿರದೆ ಸಮುದಾಯ, ಸಮಾಜ, ನಾಡು, ಸಂಬಂಧಗಳು ದೊಡ್ಡವೆಂದು ಗ್ರಹಿಸಿದ್ದು, ಅವರ ಸಂಪರ್ಕ ಪ್ರಭಾವಕ್ಕೆ ಒಳಗಾದವರು ಅವರನ್ನು ಸದಾ ಸ್ಮರಿಸಿಕೊಳ್ಳುವಂಥ ಶಕ್ತಿದಾಯಕ ವ್ಯಕ್ತಿತ್ವ. ಇಂಥ ವ್ಯಕ್ತಿತ್ವದ ಕುಟುಂಬದ ಪರಿಕಲ್ಪನೆ ಸಾಮಾನ್ಯ ಅರ್ಥಗಳ ಎಲ್ಲೆಯನ್ನು ಮೀರುವಂಥದ್ದಾಗಿರುತ್ತದೆ.

ತಾವು ಹುಟ್ಟಿ ಬೆಳೆದ ಪರಿಸರಗಳಲ್ಲಿ ಸಾಂಪ್ರದಾಯಕವಾಗಿ ಮಾಡಬೇಕಾದಂತಹ ಕಾರ್ಯಗಳಲ್ಲಿ ಭಾಗವಹಿಸಿ ಬಂಧು ಬಾಂಧವರ ಸಂತೋಷಕ್ಕೆ ಕಾರಣರಾಗುತ್ತಿದ್ದರು. ಸ್ಥಿತಿವಂತ, ವಿದ್ಯಾವಂತ ಎಂಬ ಹಮ್ಮು ಬಿಮ್ಮುಗಳನ್ನು ತೋರದೆ ಬಂಧು ಬಾಂಧವರನ್ನು ಗೌರವದಿಂದ ಕಾಣುತ್ತಿದ್ದರು. ತಮ್ಮ ಸಂಬಂಧಿಗಳಲ್ಲಿ ಅಥವಾ ಸ್ನೇಹಿತರುಗಳಲ್ಲಿ ಅತಿ ಹೆಚ್ಚಾಗಿ ಬೆರೆಯಲು ಸಮಯವಿರುತ್ತಿರಲಿಲ್ಲವಾದರೂ ಅನಿವಾರ್ಯ ಅಗತ್ಯ ಸಂದರ್ಭಗಳಿದ್ದರೆ ವಿಚಾರ ವಿನಿಮಯದಲ್ಲಿ ಪೂರ್ಣ ಭಾಗಿಯಾಗಿ ಸಲಹೆ ಹಾಗೂ ವಿವರಗಳನ್ನು ನೀಡುತ್ತಿದ್ದರು.

# 4. ವೃತ್ತಿ ಜೀವನ

ಡಾ॥ ಪುಟ್ಟರುದ್ರಯ್ಯನವರು 1933ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ (ಮೈಸೂರು ವಿಶ್ವವಿದ್ಯಾಲಯ) ತಮ್ಮ ಬಿ.ಎಸ್ಸಿ(ಆನರ್ಸ್) ಪದವಿಯನ್ನು ಪಡೆದಾಗ, ದೇಶವು ಸ್ವಾತಂತ್ರ ಹೋರಾಟದಲ್ಲಿ ನಿರತವಾಗಿದ್ದ ಕಾಲವದು. ಅದೇ ಸಂದರ್ಭದಲ್ಲಿ ಮೈಸೂರು ರಾಜ್ಯ ಸರ್ಕಾರದ ಕೃಷಿ ಇಲಾಖೆಯಲ್ಲಿ ಸಹಾಯಕ ಕೀಟಶಾಸ್ತ್ರಜ್ಞರಾಗಿ ತಮ್ಮ ವೃತ್ತಿಯನ್ನು ಪ್ರಾರಂಭಿಸಿದರು. ತರುವಾಯದಲ್ಲಿ ಕೆಲವು ದಿನಗಳವರೆಗೆ ಅವರು ಬೆಂಗಳೂರು ಮತ್ತು ಮಂಡ್ಯದಲ್ಲಿ ಸೇವೆ ನಿರ್ವಹಿಸಿದರು. 1940ರಲ್ಲಿ ಅಂದಿನ ಸರಕಾರವು ಅವರನ್ನು ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾಫಿ ಕಾಂಡ ಕೊರೆಯುವ ಹುಳುವಿನ ಹತೋಟಿ ಮಾಡಲು ಪೀಡೆ ನಿಯಂತ್ರಣಾ ಕಾಯಿದೆಯನ್ನು ಜಾರಿಗೊಳಿಸುವ ಜವಾಬ್ದಾರಿಯುತ ಹುದ್ದೆಗೆ ನೇಮಿಸಲಾಯಿತು. 1940ರಿಂದ 1944ರವರೆಗೆ, ನಾಲ್ಕು ವರ್ಷಗಳ ಕಾಲದ ಕಾರ್ಯಾನುಭವ, ಅಧ್ಯಯನಗಳ ಫಲವಾಗಿ, ಅವರು ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾಫಿ ಬೆಳೆಯ ಕಾಂಡಕೊರೆಯುವ ಹುಳುವಿನ ಹತೋಟಿಗಾಗಿ, 'ಪೀಡೆ ಹತೋಟಿ ಕಾಯಿದೆ'ಯನ್ನು ಜಾರಿಗೆ ತಂದರು. ದೇಶದ ಸ್ವಾತಂತ್ರ್ಯ ಪೂರ್ವದಲ್ಲಿಯೇ ಡಾ. ಪುಟ್ಟರುದ್ರಯ್ಯನವರು ಕಾಫಿ ಕಾಂಡ ಕೊರೆಯುವ ಹುಳುವನ್ನು ತಡೆಗಟ್ಟಲು, ಕಡ್ಡಾಯ ಪೀಡೆನಿಯಂತ್ರಣಾ ಕಾರ್ಯಕ್ರಮದ ಜವಾಬ್ದಾರಿಯನ್ನು ತೆಗೆದುಕೊಂಡು ಕಾರ್ಯನಿರ್ವಹಿಸಿದರು. ಚಿಕ್ಕಮಗಳೂರು, ಸಕಲೇಶಪುರ ಮೂಡಿಗೆರೆ ಮುಂತಾದೆಡೆಗಳಲ್ಲಿ ಕಾಫಿ ಕಾಂಡ ಕೊರೆಯುವ ಹುಳು ಕಂಡರೆ ಗಿಡಗಳನ್ನು ಕಡಿದು ಸುಡಿಸುತ್ತಿದ್ದರು. ಇವರ ವಿಸ್ತರಣಾ ಕಾರ್ಯ ಪ್ರಾರಂಭ ಮಾಡಿದ ನಂತರ ಬಿ.ಎಚ್.ಸಿ. 50 ಡಬ್ಲ್ಯು.ಪಿ. (ನೀರಿನಲ್ಲಿ ಕರಗುವ) ಕಾಂಡಕ್ಕೆ ಬಳಿಯಲು ಶಿಫಾರಸ್ಸು ಮಾಡಿದ್ದರು. ಇಂಥ ವಿವಿಧ ಪ್ರಕ್ರಿಯೆಗಳಿಂದ ಕಾಂಡಕೊರೆಯುವ ಹುಳುವನ್ನು ಸಮಗ್ರ ಪೀಡೆ ನಿರ್ವಹಣಾ ತತ್ವದ ಆಧಾರದ ಮೇಲೆ ರೈತರಿಗೆ ಸಲಹೆ ಸೂಚನೆಗಳನ್ನು ನೀಡುತ್ತಿದ್ದರು. ಇವರ ಸ್ನೇಹಮಯ ಕಾಳಜಿಪೂರ್ಣ ಸಲಹೆಗಳು ನಾಲ್ಕು ವರ್ಷಗಳ ಕಾಲದಲ್ಲಿ ಜಿಲ್ಲೆಯ ಕಾಫಿ ಬೆಳೆಗಾರರಿಗೆ ಕೃಷಿ ಕಾರ್ಯದಲ್ಲಿ ಉತ್ಸಾಹ ತೋರುವಂತೆ ಪ್ರೇರಣೆಯಾಗಿ ರೈತರಿಗೆ ಹಾಗೂ ಸರಕಾರಕ್ಕೆ ಒಳ್ಳೆಯ ಕೀಟಶಾಸ್ತ್ರಜ್ಞರೆಂದು ಸಾಬೀತಾದರು.

ಡಾ. ಪುಟ್ಟರುದ್ರಯ್ಯನವರು ಕೃಷಿ ಇಲಾಖೆಯಲ್ಲಿ ತಮ್ಮ ಸೇವೆಯನ್ನು ಆರಂಭಿಸಿದಾಗ, ಕೃಷಿ ಶಿಕ್ಷಣ ಮತ್ತು ಸಂಶೋಧನೆಗಳು ರಾಜ್ಯ ಸರ್ಕಾರದ ಕೃಷಿ ಇಲಾಖೆಯ ಕಕ್ಷೆಗೆ ಒಳಪಟ್ಟಿದ್ದವು. ಆ ಕಾಲದಲ್ಲಿ ಕೀಟಶಾಸ್ತ್ರ ವಿಭಾಗದಲ್ಲಿ ಡಾ. ಲೆಸ್ಲಿ ಕೋಲ್‌ಮನ್ ಮತ್ತು ಡಾ. ಕುನ್ಹಿಕಣ್ಣನ್‌ರವರು ಕೀಟಶಾಸ್ತ್ರಜ್ಞರಾಗಿ

ಹೆಸರುವಾಸಿಯಾಗಿದ್ದರು. ಡಾ. ಪುಟ್ಟರುದ್ರಯ್ಯನವರು ತಮ್ಮ ಪ್ರಾಯೋಗಿಕ ಸಂಶೋಧನಾ ಮಾಹಿತಿಯನ್ನು ಒದಗಿಸುವಂತಹ ಪಾಂಡಿತ್ಯವನ್ನು ಸಂಪಾದಿಸಿ, ರಾಜ್ಯದ ಹಾಗೂ ನೆರೆ ರಾಜ್ಯಗಳಲ್ಲಿ ಒಬ್ಬ ಉತ್ತಮ ಕೀಟಶಾಸ್ತ್ರಜ್ಞರೆಂಬ ಕೀರ್ತಿಗೆ ಭಾಜನರಾಗಿದ್ದರು. ಕೃಷಿಯಲ್ಲಿ, ವಿಶೇಷವಾಗಿ ಸಸ್ಯ ಸಂರಕ್ಷಣಾ ಕ್ಷೇತ್ರದಲ್ಲಿ ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿ, ರಾಜ್ಯದ ಕೃಷಿ ಇಲಾಖೆಯ ಕ್ರಿಯಾಶೀಲತೆಗೆ ಕಾರಣರಾದವರಲ್ಲಿ ಒಬ್ಬರಾಗಿದ್ದರು.

1944ರಲ್ಲಿ ಡಾ. ಪುಟ್ಟರುದ್ರಯ್ಯನವರಿಗೆ ಸರ್ಕಾರದ ಕೃಷಿ ಇಲಾಖೆಯಲ್ಲಿ ಹಿರಿಯ ಸಹಾಯಕ ಕೀಟಶಾಸ್ತ್ರಜ್ಞರಾಗಿ ಚಿಕ್ಕಮಗಳೂರಿನಿಂದ ಬೆಂಗಳೂರು ಕೇಂದ್ರ ಕೀಟಶಾಸ್ತ್ರ ವಿಭಾಗಕ್ಕೆ ವರ್ಗಾವಣೆಯಾಯಿತು. ಇವರ ಮುಖ್ಯವಾದ ಕಾರ್ಯ ಹೆಬ್ಬಾಳದ ಕೃಷಿ ಪಾಠಶಾಲೆಯಲ್ಲಿ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಕೀಟಶಾಸ್ತ್ರ ಬೋಧನೆ ಹಾಗೂ ಸಂಶೋಧನೆಯಾಗಿತ್ತು. ಈ ಪಾಠಶಾಲೆಯಲ್ಲಿ ಮುಖ್ಯವಾಗಿ ಸಮಸ್ಯೆ ಆಧಾರಿತ ಅನ್ವಯಿಕ ಸಂಶೋಧನೆಯನ್ನು ಕೈಗೊಂಡಿದ್ದರು. ಸೂಕ್ತ ನಿಯಂತ್ರಣಾ ಕ್ರಮವನ್ನು ಆಯಾ ಪ್ರಾಂತ್ಯಕ್ಕೆ ಹೊಂದಿಕೊಂಡು ಅನುಕೂಲವಾಗುವಂತೆ ಸಂಶೋಧನಾ ಫಲಿತಾಂಶಗಳನ್ನು ಒದಗಿಸುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಅಗತ್ಯವನ್ನು ಮನಗಂಡು ರೈತರ ಜಮೀನುಗಳಲ್ಲಿ ಪೀಡೆ ನಿಯಂತ್ರಣ ಆಂದೋಲನಗಳನ್ನು ಏರ್ಪಡಿಸಿ, ಕೀಟಶಾಸ್ತ್ರ ವಿಭಾಗದಲ್ಲಿರುವ ಎಲ್ಲಾ ಸಿಬ್ಬಂದಿಗಳು ಭಾಗವಹಿಸುವಂತೆ ನಿರ್ದೇಶನ ನೀಡುತ್ತಿದ್ದರು. ಇಂತಹ ಕಾರ್ಯಕ್ರಮಗಳಲ್ಲಿ ಶಿಕ್ಷಕರು, ಸಂಶೋಧಕರು ಮತ್ತು ವಿಸ್ತರಣಾ ಕಾರ್ಯಕರ್ತರು ಸಮಗ್ರವಾಗಿ ಭಾಗವಹಿಸಿ ತಮ್ಮ ತಮ್ಮ ಪಾಲಿನ ಕಾರ್ಯವನ್ನು ಪೂರೈಸುವಂಥ ಮುಖಂಡತ್ವ ವಹಿಸಿದ್ದರು.

1946ರಲ್ಲಿ ಹೆಬ್ಬಾಳದಲ್ಲಿ ಕೃಷಿ ಕಾಲೇಜು ಪ್ರಾರಂಭವಾಗಿ ಬಿ.ಎಸ್‌ಸಿ. (ಕೃಷಿ) ಪದವಿ ಪ್ರಾರಂಭಿಸಿದಾಗ ಕೃಷಿ ಪಾಠಶಾಲೆಯ ಡಿಪ್ಲೊಮೊ(ಕೃಷಿ)ವನ್ನು ನಿಲ್ಲಿಸಬೇಕಾಯಿತು. ಕೃಷಿ ಕಾಲೇಜಿನಲ್ಲಿ ಪಠ್ಯಕ್ರಮ ಬೋಧಕರ ಸಂಖ್ಯೆ ಆಗ ಬಹಳ ಕಡಿಮೆ ಇತ್ತು. ಕಾಲೇಜಿಗೆ ಬೇಕಾದಂತ ಕಟ್ಟಡಗಳ ಸಮಸ್ಯೆಯೂ ಸಹ ಇತ್ತು. ಆಡಳಿತಗಾರರಿಗೆ ಮತ್ತು ಬೋಧಕರಿಗೆ ಒಂದು ಬಗೆಯ ದ್ವಂದ್ವ ಯುದ್ಧದ ಕಾರ್ಯಚರಣೆ ಮಾಡಬೇಕಿತ್ತು. ಅಂಥ ಸಂದರ್ಭಗಳಿಗೆ ಸೂಕ್ತ ಪರಿಹಾರಗಳನ್ನು ಕಂಡುಕೊಂಡು, ಪುಟ್ಟರುದ್ರಯ್ಯನವರು ಒಬ್ಬರೇ ಪದವಿ ವಿದ್ಯಾರ್ಥಿಗಳಿಗೆ ಮೊದಲ ವರ್ಷ ಪ್ರಾಣಿಶಾಸ್ತ್ರ ಮತ್ತು ನಂತರದ ವರ್ಷಗಳಲ್ಲಿ ಕೃಷಿ ಕೀಟಶಾಸ್ತ್ರದ ಪಠ್ಯಕ್ರಮವನ್ನು ಬೋಧಿಸುತ್ತಿದ್ದರು. ಆಡಳಿತ ಹಾಗೂ ಸಿಬ್ಬಂದಿಗಳ ಮಧ್ಯೆ ಸಮಸ್ಯೆಗಳಿದ್ದರೂ ಅವುಗಳಿಂದ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ತೊಂದರೆಗಳಾಗದಂತೆ ನೋಡಿಕೊಳ್ಳುತ್ತಿದ್ದರು.

1948ರಿಂದ ಎರಡು ವರ್ಷ ಕಾಲ ಸರಕಾರದ ಆದೇಶದ ಮೇರೆಗೆ ಉನ್ನತ ವ್ಯಾಸಂಗ ಕೈಗೊಳ್ಳಲು ಅಮೇರಿಕಾಕ್ಕೆ ಹೋಗಿ, ಕೇವಲ ಎರಡು ವರ್ಷಗಳ ಕಾಲದಲ್ಲಿ ಎಂ.ಎಸ್ಸಿ. ಹಾಗೂ ಪಿಎಚ್.ಡಿ. ಪದವಿಯನ್ನು ಪೂರ್ಣಗೊಳಿಸಿದರು. ಅಮೇರಿಕಾದಿಂದ

ಹಿಂದಿರುಗಿದ ನಂತರ 1951ರಲ್ಲಿ ಅಂದಿನ ಸರಕಾರ ಮೈಸೂರು ರಾಜ್ಯ ಸರ್ಕಾರದ ಕೃಷಿ ಇಲಾಖೆಯ ಜಂಟಿ ಕೀಟಶಾಸ್ತ್ರಜ್ಞರ ಹುದ್ದೆಗೆ ಬಡ್ತಿಯನ್ನು ನೀಡಿತು. ಇದನ್ನು ಅವರು ಕೇಳಿ ಪಡೆದವರಲ್ಲ. ಅವರ ವಿದ್ವತ್ ಸಾಧನೆಗೆ ತಂತಾನೇ ಸಂದದ್ದು. ಅಮೆರಿಕಾದಲ್ಲಿ ಅಧ್ಯಯನವನ್ನು ಕೈಗೊಂಡಾಗ ಅವರ ಶಿಸ್ತು, ಸತತ ಅಧ್ಯಯನಗಳಿಂದ ಅವರ ಪ್ರಾಧ್ಯಾಪಕರಿಂದಲೇ ಅವರೊಬ್ಬ ಸ್ವನಿರ್ಮಿತ ಕೀಟತಜ್ಞರೆಂದು ಪ್ರಶಂಸೆಗೆ ಪಾತ್ರರಾದವರಾಗಿದ್ದರು.

ಅಮೆರಿಕಾದಲ್ಲಿ ಡಾಕ್ಟರೇಟ್ ಮುಗಿಸಿದನಂತರ 1950ರಿಂದ ಮೈಸೂರು ವ್ಯವಸಾಯ ಇಲಾಖೆಯಲ್ಲಿ ಡಾ. ಪುಟ್ಟರುದ್ರಯ್ಯನವರು ಸರ್ಕಾರಿ ಕೀಟಶಾಸ್ತ್ರಜ್ಞರು ಹಾಗೂ ಕೀಟಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ಸಂಶೋಧನೆ ಮತ್ತು ವಿಸ್ತರಣೆಯಲ್ಲಿ ಹೆಚ್ಚಿನ ಪಾತ್ರ ವಹಿಸಿದ್ದರು. ಹೊಸದಾಗಿ ಮಾರುಕಟ್ಟೆಗೆ ಬಂದಿದ್ದ ಅನೇಕ ಬಗೆಯ ರಾಸಾಯನಿಕ ಕೀಟನಾಶಕಗಳನ್ನು ಕೀಟ ನಿಯಂತ್ರಣಕ್ಕಾಗಿ ಪರೀಕ್ಷಿಸಿ ಶಿಫಾರಸ್ಸು ಮಾಡಬೇಕಾಗಿತ್ತು. ಹಾಗೆಯೇ ಹೆಬ್ಬಾಳದ ಕೃಷಿ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಪ್ರಾಣಿಶಾಸ್ತ್ರ ಮತ್ತು ಕೀಟಶಾಸ್ತ್ರದಲ್ಲಿ ಪ್ರಯೋಗಶಾಲೆಯಲ್ಲಿ ಹಾಗೂ ಪಾಠಶಾಲೆಯಲ್ಲಿ ಪಠ್ಯಕ್ರಮವನ್ನು ಅವರೇ ಬೋಧಿಸಬೇಕಾಗಿತ್ತು.

ಘನ ಸರ್ಕಾರವು ಕೀಟಶಾಸ್ತ್ರಜ್ಞರಾದ ಇವರು ಇಲಾಖೆಯ ಕೀಟ ವಿಭಾಗದೊಂದಿಗೆ ಹೆಬ್ಬಾಳದ ಕೃಷಿ ಕಾಲೇಜಿನಲ್ಲಿ ಕೀಟಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿಯೂ ಸಹ ತಮ್ಮ ಕೆಲಸವನ್ನು ನಿರ್ವಹಿಸುತ್ತಿದ್ದರು. 1954ರಲ್ಲಿ ಅವರಿಗೆ ಪುನಃ ಬಡ್ತಿ ನೀಡಿ ಅಂದಿನ ಕೃಷಿ ಕಾಲೇಜಿನಲ್ಲಿ ಕೀಟಶಾಸ್ತ್ರ ವಿಭಾಗದ ಮುಖ್ಯಸ್ಥರು ಹಾಗೂ ಕೃಷಿ ಇಲಾಖೆಯಲ್ಲಿ ಸರ್ಕಾರದ ಕೀಟ ಶಾಸ್ತ್ರಜ್ಞರಾಗಿ ನೇಮಕ ಮಾಡಿದರು. ರಾಜ್ಯ ಸರ್ಕಾರದ ಮಟ್ಟದಲ್ಲಿ ಕೃಷಿ ಕಾಲೇಜಿನಲ್ಲಿ ಅಧ್ಯಾಪಕರಾಗಿ ಹಾಗೂ ಇಲಾಖೆಯಲ್ಲಿ ಸಂಶೋಧನೆ ಹಾಗೂ ವಿಸ್ತರಣೆಯ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರು. ಇವರಿಗಾಗಿ ಅಂದಿನ ಸರ್ಕಾರ ಒಂದು ಹೊಸ ಹುದ್ದೆಯನ್ನು ಸೃಷ್ಟಿ ಮಾಡಿತ್ತು. ಸಸ್ಯಸಂರಕ್ಷಣೆಯ ಸಮಸ್ಯೆಗಳನ್ನು ಅರಿತು ರೈತರಿಗೆ ತಕ್ಷಣ ಪರಿಹಾರವನ್ನು ನೀಡುವ ಸಲುವಾಗಿ ರಾಜ್ಯದ ಮುಖ್ಯ ಸಸ್ಯ ಸಂರಕ್ಷಣಾ ಅಧಿಕಾರಿಯಾಗಿ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿದರು.

ಈ ವಿವಿಧ ಹುದ್ದೆಗಳ ಸ್ಥಾನಗಳಿಂದ ಡಾ. ಪುಟ್ಟರುದ್ರಯ್ಯನವರಿಗೆ ರೈತರ ಕೃಷಿಕ ನೆಲೆಯ ಸಮಸ್ಯೆಗಳನ್ನು ನೇರವಾಗಿ ತಿಳಿಯಲು ಅವಕಾಶವಾಯಿತು. ತಿಳಿದ ತಕ್ಷಣ ಸೂಕ್ತ ಸಂಶೋಧನೆಯ ಫಲಿತಾಂಶಗಳ ಆಧಾರದ ಮೇಲೆ ಪರಿಹಾರ ನೀಡುವಂತಹ ಕಾರ್ಯವನ್ನು ಶ್ರದ್ಧೆಯಿಂದ ಪೂರೈಸುತ್ತಿದ್ದರು. ಸಾಂದರ್ಭಿಕವಾಗಿ ಹಳೆಯ ಮೈಸೂರು ರಾಜ್ಯದ ಎಲ್ಲಾ ಭಾಗಗಳಿಗೆ ಪ್ರವಾಸ ಮಾಡಿ, ರೈತರ ಸಮಸ್ಯೆಗಳನ್ನು ಅರಿತು ತಕ್ಷಣ ಪರಿಹಾರ ಕ್ರಮಗಳನ್ನು ಶಿಫಾರಸ್ಸು ಮಾಡುತ್ತಿದ್ದರು. ಇದರಿಂದಾಗಿ ಅಂದಿನ ದಿನಗಳಲ್ಲಿ ರಾಜ್ಯದ ದಕ್ಷಿಣ ಭಾಗದ ಹಾಗೂ ಉತ್ತರ ಭಾಗದ ರೈತರಿಗೆ ಡಾ. ಪುಟ್ಟರುದ್ರಯ್ಯರವರು ಒಬ್ಬ ಉತ್ತಮ ಸಸ್ಯ ಸಂರಕ್ಷಣಾ ತಜ್ಞರಾಗಿ ಮನೆಮಾತಾಗಿದ್ದರು.

ನಂತರದಲ್ಲಿ ದಿನಾಂಕ 03-09-1962ರಂದು ಹೆಬ್ಬಾಳದ ಕೃಷಿ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಅಧಿಕಾರ ವಹಿಸಿಕೊಂಡರು. ಕೀಟಶಾಸ್ತ್ರಜ್ಞರಾಗಿ ಹಾಗೂ ಹೆಬ್ಬಾಳ ಕೃಷಿ ಕಾಲೇಜಿನಲ್ಲಿ ಕೀಟಶಾಸ್ತ್ರ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಾ ಈ ಉಭಯ ಸಂಸ್ಥೆಗಳ ಅಭಿವೃದ್ಧಿಯಲ್ಲಿ ತಮ್ಮ ಅನುಪಮ ಸೇವೆ ಸಲ್ಲಿಸಿ ಸಾರ್ಥಕರೆನಿಸಿಕೊಂಡರು. ಪ್ರಾಂಶುಪಾಲರಾಗಿ ಅಧಿಕಾರದಲ್ಲಿರುವಾಗ, ಆಡಳಿತದಲ್ಲಿ ಅನೇಕ ಸುಧಾರಣೆಗಳನ್ನು ತಂದರು. ಮಹಾವಿದ್ಯಾಲಯದ ಗುಣಮಟ್ಟದ ಬೆಳವಣಿಗೆಗೆ ಕಾರಣರಾದರು.

ನಂತರ 1964ರಲ್ಲಿ ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯ ಸ್ಥಾಪನೆಯಾದ ಮೇಲೆ ಹೆಬ್ಬಾಳದ ಕೃಷಿ ಕಾಲೇಜಿನ ಶಿಕ್ಷಣ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡರು ಮತ್ತು ಕೀಟಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾಗಿ ಮುಂದುವರೆದರು. ಈ ಸಂದರ್ಭದಲ್ಲಿ ಕೃಷಿ ಪದವಿ ಪಡೆಯುತ್ತಿದ್ದ ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಪದವಿಯನ್ನು ಮುಂದುವರೆಸಲು ಪ್ರೇರಣೆ ನೀಡುತ್ತಿದ್ದರು. ಆಗ ಎಂ.ಎಸ್‌ಸಿ. (ಕೃಷಿ) ಹಾಗೂ ಡಾಕ್ಟರೇಟ್ ವಿದ್ಯಾರ್ಥಿಗಳ ಸಂಶೋಧನೆಯಲ್ಲಿ ಪ್ರಧಾನ ಮಾರ್ಗದರ್ಶಕರಾಗಿ ಹಾಗೂ ಅನೇಕ ಸ್ನಾತಕೋತ್ತರ ವಿದ್ಯಾರ್ಥಿಗಳ ಸಂಶೋಧನಾ ಸಲಹಾ ಮಂಡಳಿಯಲ್ಲಿ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು. ಕೃಷಿ ಕಾಲೇಜಿನಲ್ಲಿ ಸೇವೆ ಸಲ್ಲಿಸುವಾಗ ಸಾವಿರಾರು ಪದವಿ ವಿದ್ಯಾರ್ಥಿಗಳಿಗೆ ಕೀಟಶಾಸ್ತ್ರ ಬೋಧಿಸುವುದರ ಜೊತೆಗೆ ರಾಜ್ಯ ಸರ್ಕಾರದ ಅನೇಕ ಸಂಶೋಧನಾ ಮತ್ತು ವಿಸ್ತರಣಾ ಸಿಬ್ಬಂದಿಗೆ ಮಾರ್ಗದರ್ಶಕರಾಗಿ ಹಾಗೂ ವಿದ್ಯಾರ್ಥಿಗಳಿಗೆ ಸಮಸ್ಯಾತ್ಮಕ ಸಂಶೋಧನೆಗಳನ್ನು ಕೈಗೊಳ್ಳುವ ಪ್ರೇರಣೆಯಾಗಿ ಹಾಗೂ ಸೂಕ್ತ ನಿಯಂತ್ರಣ ಕ್ರಮಗಳನ್ನು ಸಂಶೋಧಿಸಲು ತಂತ್ರಜ್ಞಾನದ ಸಹಕಾರ ನೀಡುತ್ತಿದ್ದರು. ಕೃಷಿ ಅಧ್ಯಯನ, ಸಂಶೋಧನೆ ವಿಸ್ತರಣಾ ಕಾರ್ಯಗಳಿಗೆ ತಮ್ಮ ವೃತ್ತಿ ಜೀವನದುದ್ದಕ್ಕೂ ಹೆಚ್ಚು ಒಲವು ನೀಡುತ್ತಿದ್ದರು. 1965ರಲ್ಲಿ ಕೃಷಿ ವಿಶ್ವವಿದ್ಯಾಲಯದ ಶಿಕ್ಷಣ ನಿರ್ದೇಶಕರಾಗಿ ಕೃಷಿ ಕಾಲೇಜಿನಲ್ಲಿ ಪ್ರಮುಖ ಅಧಿಕಾರಿಗಳಾಗಿ ಅಧಿಕಾರ ವಹಿಸಿಕೊಂಡು ಕಾರ್ಯ ನಿರ್ವಹಿಸುತ್ತಾ 1971ರಲ್ಲಿ ನಿವೃತ್ತಿಯಾದರು.

ಡಾ. ಪುಟ್ಟರುದ್ರಯ್ಯನವರು ಕೃಷಿಪಾಠಶಾಲೆಯಲ್ಲಿ ಕೀಟಶಾಸ್ತ್ರದಲ್ಲಿ ಶಿಕ್ಷಕರಾಗಿ, ಶಿಕ್ಷಣ, ಸಂಶೋಧನೆ ಹಾಗೂ ವಿಸ್ತರಣೆಯನ್ನು ವಿದ್ಯಾರ್ಥಿಗಳಿಗೆ ಬೋಧಿಸುವಾಗ ಕ್ಷೇತ್ರಗಳಿಗೆ ಭೇಟಿ ನೀಡುತ್ತ ವಿದ್ಯಾರ್ಥಿಗಳ ಮೂಲಕ ಕೆಲವು ಪ್ರಾತ್ಯಕ್ಷಿಕೆಗಳಿಗೆ ಭೇಟಿನೀಡಿ ಕ್ಷೇತ್ರದಲ್ಲಿಯೇ ಉತ್ತಮ ಸಲಹೆಗಳನ್ನು ನೀಡುತ್ತಿದ್ದರು.

ಕೃಷಿ ಕಾಲೇಜಿನಲ್ಲಿ ಶಿಕ್ಷಣ ನಿರ್ದೇಶಕರಾಗಿದ್ದಾಗಲೂ ಸಹ ಪದವಿ ಪಡೆಯುವಂತಹ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಉಪನ್ಯಾಸಕರಾಗಿ ಹಾಗೂ ಪ್ರಯೋಗಶಾಲೆಯಲ್ಲಿ ಹಾಗೂ ಕ್ಷೇತ್ರ ಪ್ರಾತ್ಯಕ್ಷಿಕೆಗಳಲ್ಲಿ ಭಾಗವಹಿಸಿ ಅರ್ಥವಾಗುವ ರೀತಿಯಲ್ಲಿ ವಿವರಣೆ ನೀಡುತ್ತಿದ್ದರು. ಅವರ ಉಪನ್ಯಾಸವನ್ನು ಕೇಳಿದ ಎಲ್ಲಾ ವಿದ್ಯಾರ್ಥಿಗಳು ಅವರ ಶಿಸ್ತು, ಶೈಲಿ ಮುಂತಾದವುಗಳನ್ನು ಈಗಲೂ ನೆನೆಪಿಸಿಕೊಳ್ಳುತ್ತಾರೆ.

ಇವರು ವಿಶೇಷವಾಗಿ ಬೋಧಿಸುತ್ತಿದ್ದ ವಿಷಯಗಳೆಂದರೆ ಸ್ನಾತಕ ವಿದ್ಯಾರ್ಥಿಗಳಿಗೆ ಆರ್ಥಿಕ ಕೀಟಶಾಸ್ತ್ರ, ಹಾಗೂ ಸಮಗ್ರ ಪೀಡೆ ನಿರ್ವಹಣೆ, ಸ್ನಾತಕೋತ್ತರ ಪಠ್ಯ ವಿಷಯಗಳಲ್ಲಿ ವಿದ್ಯಾರ್ಥಿಗಳಿಗೆ ಸಸ್ಯ ಸಂರಕ್ಷಣೆ, ಸಮಗ್ರ ಪೀಡೆ ನಿಯಂತ್ರಣ, ಬೆಳೆಗಳ ಪೀಡೆಗಳು ಮತ್ತು ಅವುಗಳ ನಿರ್ವಹಣೆ ಮುಂತಾದ ಪಠ್ಯಕ್ರಮ ವಿಷಯಗಳನ್ನು ಬೋಧಿಸುತ್ತಿದ್ದರು. ಅವರು ಯಾವುದೇ ಪಠ್ಯಕ್ರಮವನ್ನು ಬೋಧಿಸುವಾಗ ವಿದ್ಯಾರ್ಥಿಗಳು ನಿಶ್ಶಬ್ದವಾಗಿರಬೇಕು ಹಾಗೂ ಅವರು ಯಾವುದೇ ರೀತಿಯ ಅಶಿಸ್ತನ್ನು ಅವರು ಸಹಿಸುತ್ತಿರಲಿಲ್ಲ.

ಕೀಟಶಾಸ್ತ್ರ ವಿಭಾಗದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಹಳೆಯ ಮತ್ತು ತ್ರೈಮಾಸಿಕ ಪದ್ಧತಿಗಳಲ್ಲಿ ಪಠ್ಯಕ್ರಮಗಳನ್ನು ಬೋಧಿಸುವ ಅವಧಿಯಲ್ಲಿ ವಿದ್ಯಾರ್ಥಿಗಳು ಪ್ರಾಯೋಗಿಕವಾಗಿ ಕಲಿಯುವ ಸಲುವಾಗಿ ಬೇರೆಬೇರೆ ಬೆಳೆಗಳ ಕ್ಷೇತ್ರಗಳಿಗೆ ಪ್ರವಾಸ ಮಾಡಿ, ಅಧ್ಯಯನ ಮಾಡುವ ಅವಕಾಶವಿತ್ತು. ರಾಜ್ಯದಲ್ಲಿ ಈ ಪ್ರಾಂತ್ಯದಲ್ಲಿ ಕೆಲವು ಪರಿಚಯವಿಲ್ಲದ ಹಣ್ಣಿನ, ಪ್ಲಾಂಟೇಶನ್, ಸಾಂಬಾರ ಪದಾರ್ಥಗಳ ಬೆಳೆಗಳನ್ನು ವಿಶೇಷವಾಗಿ ಬೆಳೆಯುವ ಪ್ರದೇಶಗಳಿಗೆ ಕಡ್ಡಾಯವಾಗಿ ಭೇಟಿ ಮಾಡಬೇಕೆಂದು ವಿದ್ಯಾರ್ಥಿಗಳಿಗೆ ಸಲಹೆ ನೀಡುತ್ತಿದ್ದರು.

ವಿದ್ಯಾರ್ಥಿಗಳು ನೇರವಾಗಿ ಕ್ಷೇತ್ರಗಳಿಗೆ ಭೇಟಿಕೊಟ್ಟು ಬೆಳೆಗಳಲ್ಲಿ ಕೀಟರೋಗದ ಹಾನಿಗಳನ್ನು ಪರೀಕ್ಷಿಸುವ ಸಲುವಾಗಿ ಪ್ರವಾಸ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಪುಟ್ಟರುದ್ರಯ್ಯನವರೇ ವಿದ್ಯಾರ್ಥಿಗಳ ಜೊತೆಯಲ್ಲಿ ಪ್ರವಾಸ ಮಾಡುತ್ತಿದ್ದರು. ಕರ್ನಾಟಕ ರಾಜ್ಯದಲ್ಲಿ ಬೇರೆ ಪ್ರಾಂತಗಳಿಗೆ ಹಾಗೂ ಕೃಷಿ ವಿಶ್ವವಿದ್ಯಾನಿಲಯ ಸಂಶೋಧನಾ ಕೇಂದ್ರಗಳಿಗೆ ಭೇಟಿ ಮಾಡುವ ಸಂದರ್ಭಗಳಲ್ಲಿ ಯಾರಾದರೂ ರಾಜಕಾರಣಿಗಳು ಹಾಗೂ ಹಳೇ ವಿದ್ಯಾರ್ಥಿಗಳೇನಾದರೂ ವಿಶೇಷವಾಗಿ ಅವರನ್ನು ಅತಿಥಿ ಗೃಹಗಳಲ್ಲಿ ತಂಗಲು ಮತ್ತು ಭೋಜನ ವ್ಯವಸ್ಥೆಗಳನ್ನು ಮಾಡಿದರೆ ಅವರು ನೇರವಾಗಿ ತಿರಸ್ಕರಿಸುತ್ತಿದ್ದರು. ಮೇಲಾಗಿ ಪ್ರವಾಸದಲ್ಲಿ ವಿದ್ಯಾರ್ಥಿಗಳಿಗೆ ತಂಗಲು ವ್ಯವಸ್ಥಿತವಾದ ವ್ಯವಸ್ಥೆ ಮಾಡಲು ಕೇಳಿಕೊಳ್ಳುತ್ತಿದ್ದರು ಮತ್ತು ವಿದ್ಯಾರ್ಥಿಗಳು ಉಳಿಯುವ ಸ್ಥಳಗಳಲ್ಲಿಯೇ ವಾಸ್ತವ್ಯ ಹೂಡುತ್ತಿದ್ದರು. ಅವರು ಯಾವುದೇ ರೀತಿಯ ಸುಖಭೋಗದ ಜೀವನವನ್ನು ಇಷ್ಟಪಡುತ್ತಿರಲಿಲ್ಲವೆಂಬುದಕ್ಕೆ ಇದೊಂದು ನಿದರ್ಶನ. ಅವರ ಉದ್ದೇಶ ವಿದ್ಯಾರ್ಥಿಗಳ ಜೊತೆಯಲ್ಲಿಯೇ ವಾಸ್ತವ್ಯ ಹೂಡಿದಾಗ, ಪ್ರವಾಸದಲ್ಲಿ ಪ್ರವಾಸದ ಅಧ್ಯಯನದ ಬಗ್ಗೆ ಅಲ್ಲಿಯೇ ಚರ್ಚಿಸಲು ಅನುಕೂಲವಾಗಬಹುದೆಂಬ ನಂಬಿಕೆ ಅವರದಾಗಿತ್ತು. ವಿದ್ಯಾರ್ಥಿಗಳಿಗೆ ಈ ರೀತಿಯ ಪ್ರವಾಸ ಪಾಠಗಳು ವಿಶಿಷ್ಟವಾಗಿ ವಿಷಯ ಸಾಮರ್ಥ್ಯವನ್ನು ಹೆಚ್ಚಿಸುತ್ತಿದ್ದವು. ಇದರಿಂದಾಗಿ ವಿದ್ಯಾರ್ಥಿಗಳು ಇವರೊಂದಿಗಿನ ಪ್ರವಾಸಗಳನ್ನು ಯಾವುದೇ ಕಾರಣಕ್ಕೂ ತಪ್ಪಿಸಿಕೊಳ್ಳುತ್ತಿರಲಿಲ್ಲ.

ಡಾ॥ ಪುಟ್ಟರುದ್ರಯ್ಯನವರಿಗೆ ರೈತರ ಬಗ್ಗೆ ಅತೀವ ಕಾಳಜಿ; ಅನ್ನದಾತ ಹೊಲದಲ್ಲಿ ಬಿಸಿಲು, ಮಳೆಗೆ ಹೆದರದೇ ಕೃಷಿ ಚಟುವಟಿಕೆಯಲ್ಲಿ ತೊಡಗಿಕೊಳ್ಳುತ್ತಾನೆಂದು ಹೆಚ್ಚಿನ

ಕರುಣೆ. ಅವರು ಯಾವಾಗಲೂ ಕೃಷಿ ಕ್ಷೇತ್ರಗಳಿಗೆ ಸಂಬಂಧಿಸಿದ ಹಾಗೆ ರೈತರು ಬೆಳೆಗಳನ್ನು ಕೀಟ ರೋಗಗಳಿಂದ ರಕ್ಷಿಸಿಕೊಳ್ಳಬೇಕೆಂಬ ಅರಿವು ಬರಬೇಕು ಎಂದು ನಿರೀಕ್ಷಿಸುತ್ತಿದ್ದರು. ಈ ಅರಿವು ರೈತರಿಗೆ ಒಮ್ಮೆಲೇ ಬರುವುದಿಲ್ಲ, ಅವರು ಅರ್ಥಮಾಡಿಕೊಳ್ಳಬೇಕಾದರೆ ಕಾಲಾವಕಾಶ ಬೇಕಾಗುತ್ತದೆ, ಕೀಟರೋಗಗಳನ್ನು ತಡೆಗಟ್ಟಲು ಕೀಟನಾಶಕಗಳಿಂದ ಮಾತ್ರ ಸಾಧ್ಯ, ಇದೊಂದೇ ಹತೋಟಿಕ್ರಮ ಎಂದು ತಿಳಿದಿದ್ದಾರೆ. ಕೆಲವರಂತೂ ವಿವೇಚನೆ ಇಲ್ಲದೇ ಕೀಟನಾಶಕಗಳನ್ನು ಬಳಸುತ್ತಾರೆ. ಇದರಿಂದ ಅನಾಹುತಕ್ಕೆ ಕಾರಣವಾಗಬಹುದು. ರಾಸಾಯನಿಕ ಕೀಟನಾಶಕಗಳ ಬಳಕೆಯಿಂದಾಗಿ ಪರಿಸರದಲ್ಲಿ ಅನೇಕ ದುಷ್ಪರಿಣಾಮಗಳುಂಟಾಗುತ್ತವೆ, ಇದರಿಂದಾಗಿ ಪರಿಸರದಲ್ಲಿ ಅನೇಕ ಉಪಯುಕ್ತ ಮಿತ್ರ ಕೀಟಗಳಾದ ಪರೋಪಜೀವಿಗಳು, ಪರಭಕ್ಷಕ ಕೀಟಗಳು ಹಾಗೂ ಉತ್ಪಾದನಾ ಕೀಟಗಳಾದ ಪರಾಗಸ್ಪರ್ಶಕ ಜೇನುನೊಣಗಳ ಸಂಖ್ಯೆ ನಾಶವಾಗುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ಸತತವಾಗಿ ಬಳಸುವ ಕೀಟನಾಶಕಗಳಿಂದ ಕೀಟ ನಿರೋಧಕತೆ ಹೆಚ್ಚಾಗುತ್ತದೆ. ಕೆಲವು ಬೆಳೆಗಳಲ್ಲಿ ಕೃಷಿ ಕಷ್ಟವಾಗಬಹುದು. ಬೆಳೆಗಳ ರಕ್ಷಣೆಯ ಪ್ರಾಮುಖ್ಯತೆಯು ಅರಿವಾದಂತೆ ಸಮಗ್ರ ಪೀಡೆ ನಿಯಂತ್ರಣ ಕ್ರಮಗಳೆಲ್ಲವೂ ರೈತರಿಗೆ ಮನವರಿಕೆಯಾಗಬೇಕು. ಸಮಗ್ರಪೀಡೆ ನಿರ್ವಹಣಾ ಕ್ರಮಗಳನ್ನು ಸರ್ಕಾರದ ಕೃಷಿ ಇಲಾಖೆಯ ಸಿಬ್ಬಂದಿವರ್ಗದ ವಿಸ್ತರಣಾ ಅಧಿಕಾರಿಗಳು, ತಜ್ಞರು, ವಿದ್ಯಾವಂತರು ಮತ್ತು ಕೀಟನಾಶಕಗಳ ತಯಾರಕರು ಹಾಗೂ ಮಾರಾಟಗಾರರು ರೈತರಿಗೆ ಸರಿಯಾಗಿ ಮನವರಿಕೆಯಾಗುವಂತೆ ಸದಾ ಸಲಹೆ ಸೂಚನೆಗಳನ್ನು ನೀಡಬೇಕಾಗಿದೆ. ಪ್ರತಿಯೊಂದು ಬೆಳೆಗೆ ಸಮಗ್ರ ಪೀಡೆ ನಿರ್ವಹಣೆಯನ್ನು ಅನುಸರಿಸಬೇಕಾಗಿರುವ ವಿಧಾನವನ್ನು ಹಾಗೂ ರಾಸಾಯನಿಕ ಪೀಡೆನಾಶಕಗಳ ಸರಿಯಾದ ವಿವೇಚನೆಯ ಬಳಕೆಯನ್ನು ಪ್ರತಿಯೊಬ್ಬರೂ ತಿಳಿಯಬೇಕೆಂದು ಸೂಚಿಸುತ್ತಿದ್ದರು.

ಕೀಟಶಾಸ್ತ್ರ ವಿಭಾಗಕ್ಕೆ ಭೇಟಿ ನೀಡಿದಾಗ ಪ್ರಯೋಗ ಶಾಲೆಯಲ್ಲಿನ ಮೂಲ ಸೌಕರ್ಯಗಳ ಕೊರತೆ ಕಂಡುಬಂದಲ್ಲಿ ವಿಭಾಗದ ಅಭಿವೃದ್ಧಿಗಾಗಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ಸಂಶೋಧನೆಗಾಗಿ ಅಗತ್ಯವಾದ ಸೌಲಭ್ಯಗಳನ್ನು ಕೃಷಿವಿಶ್ವವಿದ್ಯಾಲಯ ಒದಗಿಸಲೇಬೇಕು ಇದು ತೀರ ಅಗತ್ಯವಾದ ಕಾರ್ಯವೆಂದು ನಿರ್ಣಯತೆಗೆದುಕೊಂಡು ತಕ್ಷಣ ಪೂರೈಸುತ್ತಿದ್ದರು.

ಅವರ ವೃತ್ತಿ ಜೀವನದಲ್ಲಾಗಲೀ, ಖಾಸಗಿ ಜೀವನದಲ್ಲಾಗಲೀ ಯಾವುದೇ ಸಾಧನೆಯ ದೃಢ ಸಂಕಲ್ಪ ಮಾಡಿದರೆ, ಅದರಲ್ಲಿ ಕ್ರಿಯಾಶೀಲವಾಗಿ ತೊಡಗಿಸಿಕೊಳ್ಳುತ್ತಿದ್ದರು. ವಿದ್ಯಾರ್ಥಿಗಳಿಗೆ ಐತಿಹಾಸಿಕ ಪುರುಷರ ಸಾಧನೆಗಳನ್ನು ಹಾಗೂ ಕೊಡುಗೆಗಳನ್ನು ಪರಿಚಯಿಸಿ ಅವರ ಜ್ಞಾನವನ್ನು ಮತ್ತು ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಲು ಕಾರಣರಾಗುತ್ತಿದ್ದರು. ವಿಶೇಷ ಅಭಿವೃದ್ಧಿ ಆಧಾರಿತ ಪಠ್ಯಕ್ರಮ ಬೋಧನೆಯನ್ನು ಅಳವಡಿಸಿಕೊಂಡು ವಿದ್ಯಾರ್ಥಿಗಳ ಜ್ಞಾನವನ್ನು ಹೆಚ್ಚಿಸಲು ನೆರವಾಗುತ್ತಿದ್ದರು. ಇವರ ಸಹಪಾಠಿಗಳಾಗಲಿ, ವಿದ್ಯಾರ್ಥಿಗಳಾಗ್ಗಲಿ ಸಂಕಷ್ಟದಲ್ಲಿ

ಸಿಕ್ಕಿಕೊಂಡಿರುವಾಗ ಅವರಿಗೆ ಸೂಕ್ತ ಸಲಹೆಗಳೊಂದಿಗೆ ಆತ್ಮವಿಶ್ವಾಸವನ್ನು ತುಂಬುವ ಜವಾಬ್ದಾರಿಯನ್ನು ಸಹ ತಮ್ಮ ಕರ್ತವ್ಯವೆಂದು ನೆರವೇರಿಸುತ್ತಿದ್ದರು.

ಮಾನವೀಯತೆಯನ್ನು ಒಂದು ವ್ಯಾವಹಾರಿಕ ಮುದ್ರೆಯನ್ನಾಗಿಸಿಕೊಂಡು, ಜ್ಞಾನವನ್ನು ಒಂದು ಶಾಶ್ವತ ಆಸ್ತಿಯೆಂದು ಭಾವಿಸಿ, ದೀರ್ಘಕಾಲದ ಅನುಭವವೇ ಶಕ್ತಿಯೆಂದು ನಂಬಿದ ಡಾ. ಪುಟ್ಟರುದ್ರಯ್ಯನವರು ತತ್ವಸಿದ್ಧಾಂತದ ಚೌಕಟ್ಟಿಗೆ ಒಳಪಟ್ಟು ತಮ್ಮ ಕರ್ತವ್ಯ ನಿರ್ವಹಿಸುತ್ತಿದ್ದರು. ರಾಜ್ಯ ಕೃಷಿಯ ಸರ್ವಾಂಗೀಣ ಅಭಿವೃದ್ಧಿಗೆ ಇವರ ಪರಿಶ್ರಮ ಮಹತ್ವದ ಕೊಡುಗೆಯಾಗಿದೆ. ಇವರು ಒಬ್ಬ ಕೃಷಿ ಅಧಿಕಾರಿಯಾಗಿ, ಕೀಟತಜ್ಞರಾಗಿ ಕೃಷಿ ಪ್ರಾಧ್ಯಾಪಕರಾಗಿ, ವಿದ್ಯಾರ್ಥಿಗಳ ಹಾಗೂ ಬಡ ರೈತರ ಉದ್ಧಾರಕ್ಕಾಗಿ, ಸದಾ ಹಿತ ಚಿಂತನೆಗೈಯುತ್ತಿದ್ದರು. ಉತ್ತಮ ಸಮಾಜ, ದೇಶದ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಮುಖ್ಯವಾದುದು ಎಂದು ತಮ್ಮ ಸಹೊದ್ಯೋಗಿ ಪ್ರಾಧ್ಯಾಪಕರಿಗೆ ಸದಾ ಎಚ್ಚರಿಸುತ್ತಾ ತಾವು ಚಾಚು ತಪ್ಪದೇ ಪಾಲಿಸಿದವರು.

ಡಾ॥ ಪುಟ್ಟರುದ್ರಯ್ಯನವರು ಒಂದು ದಿನ ತರಗತಿಯಲ್ಲಿ ಪಾಠಮಾಡುವ ಬದಲು ಉಪನ್ಯಾಸ ಕೊಠಡಿಯಲ್ಲಿ ಅತ್ತಿಂದ ಇತ್ತ ಇತ್ತಿಂದ ಅತ್ತ ಓಡಾಡುತ್ತಾ ಚಡಪಡಿಸುತ್ತಾ 'ಮೂರ್ಖರು, ಶತಮೂರ್ಖರು' ಎಂದು ಉಚ್ಚರಿಸುತ್ತಿದ್ದರಂತೆ. ವಿದ್ಯಾರ್ಥಿಗಳಿಗೆ ಇವರ ಮಾತಿನ ತಲೆಬುಡ ಅರ್ಥವಾಗಲಿಲ್ಲ. ಇವರು ಉಪನ್ಯಾಸ ಮಾಡುವಾಗ ಸರಿಯಾಗಿರುತ್ತಿದ್ದರು, ಇವತ್ತು ಏನಾಯ್ತು ಎನ್ನುವ ಸಂಶಯ ಅವರಲ್ಲಿ. ಬಹಳ ಸಮಯದ ನಂತರ ಅವರ ಮಾತಿನ ಮಹತ್ವ ಅರಿವಾಯಿತಂತೆ. ಪುನಃ ಅವರು; 'ಏರಿಯಲ್ ಸ್ಪ್ರೇ ಮಾಡ್ತಾರಂತೆ, ಏರಿಯಲ್ ಸ್ಪ್ರೇ! ಈ ವಿಷಪೂರಿತ ರಾಸಾಯನಿಕ ಪೀಡೆನಾಶಕಗಳ ಜೊತೆಯಲ್ಲಿ ಎಲ್ಲಾನೂ ಸಾಯಿಸ್ತಾರೆ ಒಬ್ಬೊಬ್ಬರಿಗೆ ಎದೆಗೊದ್ದು ಬಿಡಬೇಕು, ಪ್ರಕೃತಿ ಸಮತೋಲನ ಹಾಳು ಮಾಡುತ್ತಾರೆ' ಎಂದು ಗೊಣಗುಟ್ಟಿದರಂತೆ. ಅವರ ತರುವಾಯದ ಉಪನ್ಯಾಸಗಳಲ್ಲಿ ಅವರ ಅಂತಹ ಕೋಪಗಳ ಮಹತ್ವ ವಿದ್ಯಾರ್ಥಿಗಳಿಗೆ ಹೆಚ್ಚು ಸ್ಪಷ್ಟವಾಗುತ್ತಿತ್ತು. ಕಾರಣ ಅವರ ಪಾಠಗಳಲ್ಲಿ ಯಾವುದೇ ವಿಷಯ ಪಠ್ಯಬಾಹ್ಯವಾಗಿ ಇರದೆ ಅದು ಕೃಷಿಕೀಟ ಅಥವಾ ಕೃಷಿ ಕುರಿತು ನಿರ್ಣಯಗಳು ಇರಬಹುದು, ಅವುಗಳ ಆರ್ಥಿಕ, ಐತಿಹಾಸಿಕ ಮುಂತಾದ ಸಂಬಂಧಗಳೊಂದಿಗೆ ಅವರ ವಿಷಯ ವಿಶ್ಲೇಷಣೆ ಹಾಗೂ ವಿವರಣೆಗಳು ನಡೆಯುತ್ತಿದ್ದವು.

ಅಂದು ಸರ್ಕಾರ ಹಾಕಿದ ಯೋಜನೆಯಂತೆ ಮಂಡ್ಯ ಜಿಲ್ಲೆಯಲ್ಲಿ ಭತ್ತದ ಬೆಳೆಗೆ ಬಿದ್ದಿರುವ ಕೀಟಗಳ ನಿವಾರಣೆಗೆ ಏರಿಯಲ್ ಸಿಂಪರಣೆ (ವಿಮಾನದ ಮೂಲಕ ಔಷಧ ಸಿಂಪರಣೆ) ಮಾಡಬೇಕಾದ ಸಂದರ್ಭ ಬಂದಿತು. ಡಾ. ಪುಟ್ಟರುದ್ರಯ್ಯನವರು ರಾಜ್ಯದಲ್ಲಿ ಸಸ್ಯ ಸಂರಕ್ಷಣೆ ಸಲಹೆಗಾರರಾಗಿ ಅವರೇ ಬೇಡವೆಂದು ವಿರೋಧ ವ್ಯಕ್ತಪಡಿಸಿದ್ದರೂ ಸಹ ರಾಜಕಾರಣಿಗಳ ಒತ್ತಡದಿಂದ ಹೆಲಿಕಾಪ್ಟರ್ ಉಪಯೋಗಿಸಿ ಏರಿಯಲ್ ಸಿಂಪರಣೆ ಮಾಡಿಯೇ ಬಿಟ್ಟರು. ಅದರ ಪರಿಣಾಮವಾಗಿ ಕೀಟ ಪೀಡೆಗಳೇನೋ ನಿವಾರಣೆಯಾದವು, ಆದರೆ ಅವುಗಳಷ್ಟೇ ಅಲ್ಲದೇ ಪರೋಪಜೀವಿ

ಕೀಟಗಳು, ಪರಭಕ್ಷಕಗಳು, ಪರಾಗಸ್ಪರ್ಶಿಗಳು ಹಾಗೂ ಸಹಸ್ರ ಸಂಖ್ಯೆಯಲ್ಲಿ ಜಲಚರಗಳು ನಾಶವಾಗಿರುವುದರಲ್ಲಿ ಸಂಶಯವಿಲ್ಲ. ಪರಿಸರದಲ್ಲಿ ಸಮತೋಲನ ಕಾಪಾಡುವಲ್ಲಿ ಕೀಟನಾಶಕ ಸಿಂಪರಣೆಯಿಂದ ಇಡೀ ವಾತಾವರಣವೇ ಸಂಕಷ್ಟ ಅನುಭವಿಸಬೇಕಾಗುತ್ತದೆ ಎಂದು ಅವರು ತಮ್ಮ ಉಪನ್ಯಾಸಗಳಲ್ಲಿ ಒತ್ತಿ ಹೇಳುತ್ತಿದ್ದರು.

ಡಾ.ಪುಟ್ಟರುದ್ರಯ್ಯನವರು ಹಾಗೂ ಕರ್ನಾಟಕ ರಾಜ್ಯದ ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ. ಕೆಂಗಲ್ ಹನುಮಂತಯ್ಯನವರು ಸಹಪಾಠಿಗಳು ಹಾಗೂ ಆತ್ಮೀಯ ಸ್ನೇಹಿತರೂ ಆಗಿದ್ದರು ಮತ್ತು ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ. ಎಚ್.ಡಿ.ದೇವೇಗೌಡರು ಸಹ ಅವರ ಪರಿಚಿತರು ಹಾಗೂ ಆಪ್ತರಾಗಿದ್ದರು. ಆಗ ಶ್ರೀ. ಎಚ್.ಡಿ.ದೇವೇಗೌಡರು ಕರ್ನಾಟಕ ರಾಜ್ಯದ ವಿಧಾನ ಸಭೆಯ ವಿರೋಧ ಪಕ್ಷದ ನಾಯಕರಾಗಿದ್ದರು. ಶ್ರೀ. ಜಿ.ನಾರಾಯಣಗೌಡರು ಪ್ರಭಾವಿ ಕೃಷಿ ಸಚಿವರು, ಶ್ರೀ. ಎಚ್.ಕೆ.ವೀರಣ್ಣಗೌಡರು, ರಾಜ್ಯ ಪಂಚಾಯತ್ ಇಲಾಖೆ ಸಚಿವರು ಹಾಗೂ ಎಚ್.ಹೊಂಬೇಗೌಡರು, ರಾಜ್ಯದ ಮುಖ್ಯ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಮುಂತಾದ ಗಣ್ಯರು ಇವರಿಗೆ ಆಪ್ತರಾಗಿದ್ದರೂ ಸಹ ಯಾವುದೇ ರೀತಿಯಲ್ಲಿ ತಮ್ಮ ಬಡ್ತಿಗಾಗಲಿ ಅಥವಾ ಶಿಫಾರಸ್ಸಿಗಾಗಲಿ ತಮ್ಮ ಮಕ್ಕಳ ಉದ್ಯೋಗಗಳಿಗಾಗಲಿ ಈ ರಾಜಕೀಯ ಅಧಿಕಾರ ಶಕ್ತಿಯನ್ನು ಬಳಸಿಕೊಳ್ಳಲಿಲ್ಲ. ತಾವು ಕೃಷಿ ವಿಶ್ವವಿದ್ಯಾಲಯದಲ್ಲಿ ಸೇವೆಯಲ್ಲಿದ್ದಾಗ ಡೀನ್ ಅಥವಾ ಕುಲಪತಿಗಳು ಒತ್ತಡವೇರುತ್ತಿದ್ದರೂ ಸಹ ಅತ್ತ ಗಮನ ಹರಿಸುತ್ತಿರಲಿಲ್ಲ. ಪರಿಚಿತ ರಾಜಕೀಯ ಹಾಗೂ ಅಧಿಕಾರಿ ಸಹಾಯವನ್ನು ಯಾಕೆ ಬಳಸಿಕೊಳ್ಳಬಾರದೆಂದು ಯಾರಾದರೂ ಕೇಳಿದರೆ 'ಸರ್ಕಾರ ತಾನಾಗಿ ಗುರುತಿಸಿದರೆ ಆ ಕೆಲಸವನ್ನು ಶ್ರದ್ಧೆಯಿಂದ ಮಾಡುವೆ, ಈಗ ಮಾಡುತ್ತಿರುವ ಕೆಲಸ ಬಿಟ್ಟು ಬೇರೆ ಕೆಲಸಕ್ಕೆ ಅವರಿವರನ್ನು ಕೇಳಿ ಮುಲಾಜಿಗೆ ಒಳಗಾಗುವುದೇಕೆ?' ಎಂದು ಸ್ವಾಭಿಮಾನದ ಮಹತ್ವ ಹಾಗೂ ಜೀವನದ ಸರಳತೆಯನ್ನು ಪರೋಕ್ಷವಾಗಿ ತಿಳಿಸಿ ಗೌರವನೀಯರಾಗಿ ಬಿಡುತ್ತಿದ್ದರು. ಪುಟ್ಟರುದ್ರಯ್ಯನವರು ಸಿಬ್ಬಂದಿಗಳಲ್ಲಿ ದ್ವೇಷ, ಅಸೂಯೆಗಳಿಂದ ಬಹು ದೂರವಿದ್ದವರು. ವೃತ್ತಿಯಲ್ಲಿ ಮೋಸ ವಂಚನೆ ಸುಳ್ಳುಗಳನ್ನು ಹಾಗೂ ವಾಮಮಾರ್ಗಗಳನ್ನು ಸಹಿಸದ ಮಾದರಿ ಅಧಿಕಾರಿಯಾಗಿದ್ದರು.

## ಕೀಟಶಾಸ್ತ್ರ ವಿಭಾಗ

ಕೃಷಿ ಇಲಾಖೆಯ ಕೀಟಶಾಸ್ತ್ರ ವಿಭಾಗದಲ್ಲಿ ಡಾ.ಪುಟ್ಟರುದ್ರಯ್ಯನವರು ಮುಖ್ಯಸ್ಥರಾಗಿದ್ದಾಗ ಅಂದು ಡಾಕ್ಟರೇಟ್ ಪದವಿಯನ್ನು ಪಡೆದಿದ್ದವರು ಅವರೊಬ್ಬರೇ ಆಗಿದ್ದರು. ಜಿ.ಪಿ.ಚನ್ನಬಸವಣ್ಣ ಮತ್ತು ಎಸ್.ಉಸ್ಮಾನ್ ಪ್ರಾಣಿಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರು. ಉಳಿದೆಲ್ಲಾ ತಾಂತ್ರಿಕ ಸಿಬ್ಬಂದಿಗಳು ಕೃಷಿ ವಿಜ್ಞಾನದಲ್ಲಿ ಅಥವಾ ಮೂಲ ವಿಜ್ಞಾನದಲ್ಲಿ ಸ್ನಾತಕ (ಬ್ಯಾಚುಲರ್) ಪದವಿಗಳನ್ನು ಪಡೆದವರಾಗಿದ್ದರು. ಇವರಲ್ಲಿ ಪ್ರೊ.ಶೇಷಗಿರಿರಾವ್, ಅಪ್ಪಣ್ಣ, ಮಹೇಶ್ವರಯ್ಯ, ಶಿವಶಂಕರ ಶಾಸ್ತ್ರಿಯವರು ವಿಷಯ ಕ್ಷೇತ್ರದಲ್ಲಿ ಅಪಾರ ಅನುಭವ ಸಂಪಾದಿಸಿದ್ದರು. ಇವರ ಜೊತೆಗೆ ನುರಿತ ಕ್ಷೇತ್ರ ಸಹಾಯಕರು ವಿಭಾಗದಲ್ಲಿದ್ದರು. ಇಂಥ ವಾತಾವರಣದಲ್ಲಿ ಪುಟ್ಟರುದ್ರಯ್ಯನವರು

ಸಿಬ್ಬಂದಿಗಳ ಸಹಕಾರ ಮನೋಭಾವದಿಂದ ವಿಭಾಗದ ಧ್ಯೇಯ ಧೋರಣೆಗಳಿಗೆ ಬದ್ಧರಾಗಿ, ಅಗತ್ಯ ಯೋಜನೆಗಳನ್ನು ನಿರೂಪಿಸುತ್ತಾ ಕಾರ್ಯನಿರ್ವಹಿಸುತ್ತಿದ್ದರು.

ಆಗ ರಾಜ್ಯದಲ್ಲಿ ಎರಡು ಕೃಷಿ ಕಾಲೇಜುಗಳು ಇದ್ದವು. ಒಂದು ಹೆಬ್ಬಾಳದ್ದಾದರೆ, ಮತ್ತೊಂದು ಧಾರವಾಡದ್ದು. ಅಂದು ರಾಜ್ಯದಲ್ಲಿ, ಹೆಬ್ಬಾಳ ಕೃಷಿ ಕಾಲೇಜು ಕೃಷಿ ವಿಜ್ಞಾನ ಕ್ಷೇತ್ರದಲ್ಲಿ ಅತ್ಯಂತ ಹೆಸರುವಾಸಿಯಾಗಿತ್ತು. ಈ ಕಾಲೇಜಿನ ಕೀಟಶಾಸ್ತ್ರ ವಿಭಾಗ ಇತರ ವಿಭಾಗಗಳಿಗಿಂತ ವಿಶಿಷ್ಟವಾಗಿತ್ತು. ಕೀಟಶಾಸ್ತ್ರ ವಿಭಾಗದಲ್ಲಿ ಆಸಕ್ತಿಯಿಂದ ಕಲಿಯುವವರಿಗೆ, ನಿಷ್ಠೆ ಹಾಗೂ ಪ್ರಾಮಾಣಿಕತೆಯಿಂದ ಕೆಲಸ ಮಾಡುವವರಿಗೆ ಒಳ್ಳೆಯ ಪ್ರೋತ್ಸಾಹದಾಯಕ ವಾತಾವರಣವಿತ್ತು. ಆದರೆ ಕಾಲೇಜು ಸುಸಜ್ಜಿತವಾದ ಮೂಲಭೂತ ಸೌಕರ್ಯಗಳನ್ನು ಹೊಂದಿರಲಿಲ್ಲ. ಶಿಕ್ಷಕರಿಗೆ, ಸಂಶೋಧಕರಿಗೆ ಹಲವಾರು ಅನುಕೂಲತೆಗಳ ಕೊರತೆಯಿತ್ತು. ಇಂಥ ಅನಿವಾರ್ಯತೆಗೆ ಕೈ ಕಟ್ಟಿಕೂಡದೆ ಉಪಾಯದಿಂದ ಇಂಥ ಕೊರತೆಗಳನ್ನು ನೀಗಿಸಿಕೊಳ್ಳುತ್ತಿದ್ದರು.

ವಿಭಾಗದ ಪ್ರತಿಯೊಬ್ಬರೂ ರೈತರ ಹೊಲಗಳಿಗೆ ಭೇಟಿ ನೀಡಿ, ಕೀಟಗಳಿಂದ ಹಾನಿಗೊಳಗಾಗಿರುವ ಬೆಳೆಗಳ ಗಿಡಗಳು, ಗರಿಗಳು; ಎಲೆಗಳು ಮುಂತಾದ ಭಾಗಗಳನ್ನು, ಕೀಟಗಳ ಹಂತಗಳನ್ನು ಅಧ್ಯಯನ ಮಾಡಲು ಪ್ರಯೋಗ ಶಾಲೆಗೆ ತಂದು ಅವುಗಳನ್ನು ಪರೀಕ್ಷಿಸಿ, ಕೀಟಗಳನ್ನು ವಿಂಗಡಿಸಿ, ಚಿಹ್ನೆಗಳೊಂದಿಗೆ ಪೂರ್ಣ ವಿವರಗಳನ್ನು ಹಾಗೂ ಹಾನಿಯ ಲಕ್ಷಣಗಳನ್ನು ಮತ್ತು ನಿಯಂತ್ರಿಸುವ ಕ್ರಮವನ್ನು ಬರೆದಿಡುತ್ತಿದ್ದರು. ಕರ್ನಾಟಕದ ಯಾವುದೇ ಭಾಗದಿಂದ ಬೆಳೆಗಳ ಕೀಟ ಬಾಧೆಯ ವಿಷಯ ತಿಳಿದ ತಕ್ಷಣ ಒಬ್ಬಿಬ್ಬರು ಸಿಬ್ಬಂದಿ ಆಯಾ ಪ್ರಾಂತಗಳಿಗೆ ಭೇಟಿ ಇತ್ತು, ಪೂರ್ಣ ಮಾಹಿತಿಯನ್ನು ಪಡೆದು ಕೀಟಶಾಸ್ತ್ರ ಪ್ರಯೋಗಶಾಲೆಯಲ್ಲಿ ಹಿರಿಯ ಕೀಟಶಾಸ್ತ್ರಜ್ಞರೊಡನೆ ಚರ್ಚಿಸಿ ಮುಂದಿನ ಕ್ರಮಕೈಗೊಳ್ಳುವ ಪರಿಪಾಠವನ್ನು ಹಾಕಿದ್ದರು. ಅಧ್ಯಯನದ ನಂತರ ಹಿರಿಯ ತಜ್ಞರು ನೀಡಿದ ನಿರ್ವಹಣೋಪಾಯವನ್ನು ಆಯಾ ಪ್ರಾಂತಗಳ ರೈತರುಗಳಿಗೆ ಕಳುಹಿಸಲಾಗುತ್ತಿತ್ತು. ಅಲ್ಲದೆ ಯಾವುದೇ ಕ್ಷೇತ್ರ ಪರೀಕ್ಷೆಗಳಾಗಲಿ ಪ್ರಯೋಗ ಶಾಲೆಗೆ ಬಂದಂತಹ ಸಮಸ್ಯೆಗಳಾಗಲಿ ಅವುಗಳ ಪೂರ್ಣ ಮಾಹಿತಿಯನ್ನು ವಿಭಾಗದಲ್ಲಿ ದಾಖಲು ಮಾಡಲಾಗುತ್ತಿತ್ತು.

ರಾಜ್ಯದಲ್ಲಿ ಆ ಕಾಲದ ಕೀಟ ಬಾಧೆಗಳೆಂದರೆ, ಉತ್ತರ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಜೋಳದ ಮೇಲೆ ಬಾಧಿಸುತ್ತಿದ್ದ ರೆಕ್ಕೆ ಇಲ್ಲದ ಮಿಡತೆ, *ಕೋಲೆಮೇನಿಯಾ ಸ್ಪಿನರಾಯಿಡಿಸ್*, ತುಮಕೂರು, ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ನೆಲಗಡಲೆ ಕಪ್ಪು ಮತ್ತು ಕೆಂಪುತಲೆ ಕಂಬಳಿ ಹುಳು, ಮಲೆನಾಡಿನಲ್ಲಿ ಕಾಫೀ ಕಾಂಡ ಕೊರೆಯುವ ಹುಳು, ಏಲಕ್ಕಿ ಬೆಳೆಯ ಕಂಬಳಿಹುಳು, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಅಡಿಕೆ ಬೇರು ತಿನ್ನುವ ಹುಳುಗಳು ಮುಂತಾದವು ಹೆಚ್ಚು ಪ್ರಮುಖವಾಗಿ ಕಂಡು ಬರುತ್ತಿದ್ದವು. ಈ ಸಮಸ್ಯೆಗಳಿಗೆ ಕೀಟಶಾಸ್ತ್ರದ ಸಿಬ್ಬಂದಿ ಪ್ರತಿ ವರ್ಷ ಕೀಟಗಳ ಬಾಧೆಗೆ ಅನುಸಾರವಾಗಿ ಆಯಾ ಋತುಗಳಲ್ಲಿ ಭೇಟಿ ನೀಡಿ, ಸಮಸ್ಯೆಗಳನ್ನು ಗುರುತಿಸಿ,

ಅಲ್ಲಿನ ರೈತರಿಗೆ ಪೂರ್ಣ ಮಾಹಿತಿ ಹಾಗೂ ಸೂಕ್ತ ಸಲಹೆಗಳನ್ನು ಕೊಡುವಂತೆ ನೋಡಿಕೊಳ್ಳಲಾಗುತ್ತಿತ್ತು.

ಡಾ. ಪುಟ್ಟರುದ್ರಯ್ಯನವರು ಇಲಾಖೆಯ ಮುಖ್ಯಸ್ಥರಾಗಿದ್ದರೂ ಸಹ ಕೆಲಸ ನಿರ್ವಹಿಸುವಲ್ಲಿ ಸಹ ಮುಖ್ಯಸ್ಥರಾಗಿರುತ್ತಿದ್ದರು. ಅವರು ಎಲ್ಲಾ ಸಿಬ್ಬಂದಿಗಳು ಬರುವುದಕ್ಕಿಂತ ಮುಂಚಿತವಾಗಿ ಇಲಾಖೆಗೆ ಬಂದು, ಸಂಜೆ ತಮ್ಮ ಕಾರ್ಯಗಳನ್ನು ಮುಗಿಸಿ ಎಲ್ಲಾ ಸಿಬ್ಬಂದಿಗಳು ಹೋದಮೇಲೆಯೇ ತೆರಳುತ್ತಿದ್ದರು. ಇದು ಅವರ ಸಮಯಪ್ರಜ್ಞೆ ವೃತ್ತಿ ಪ್ರಜ್ಞೆಯೂ ಆಗಿತ್ತು. ಅವರ ಆಡಳಿತದ ಸಂದರ್ಭದಲ್ಲಿ ಸಿಬ್ಬಂದಿಗಳಾರೂ ಬೇಜವಾಬ್ದಾರಿಯಿಂದ ಇರುತ್ತಿರಲಿಲ್ಲ. ಯಾರಿಗೂ ಏಕೆ ತಡವಾಗಿ ಬಂದಿರಿ ಅಥವಾ ಏಕೆ ಮುಂಚಿತವಾಗಿ ಹೋಗುತ್ತೀರಿ? ಎಂದೂ ಕೇಳಿದವರಲ್ಲ. ಅಂಥದನ್ನು ಕಂಡರೂ ಯಾವುದೇ ಶಿಕ್ಷೆಗೆ ಒಳಪಡಿಸುತ್ತಿರಲಿಲ್ಲ. ಸಿಬ್ಬಂದಿಗಳು ಸಹ ದುರುಪಯೋಗ ಮಾಡಿಕೊಳ್ಳುತ್ತಿರಲಿಲ್ಲ. ಸಿಬ್ಬಂದಿಗಳು ಸಹ ಅವರನ್ನು ಕಂಡರೆ ಒಂದು ಬಗೆಯ ಆತ್ಮವಿಶ್ವಾಸ, ಗೌರವ ಭಾವದ ಮನಸ್ಸು, ಅವರಿಗೆ ಸದಾ ಕೆಲಸದ ಯೋಚನೆ. ಮೇಲ್ನೋಟಕ್ಕೆ ಸ್ವಲ್ಪ ಮಟ್ಟಿಗೆ ಕಟ್ಟು ನಿಟ್ಟಿನ ಮನುಷ್ಯರಂತೆ ಕಂಡರೂ, ಉತ್ತಮ ಕೆಲಸಗಾರರ ಬಗ್ಗೆ ಸದಾ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದರು.

1952ರಲ್ಲಿ ಡಾ. ಎಂ.ಪುಟ್ಟರುದ್ರಯ್ಯರವರು, ಡಾ. ಜಿ.ಪಿ.ಚನ್ನಬಸವಣ್ಣ ಮತ್ತು ಬಿ.ಕೃಷ್ಣಮೂರ್ತಿಯವರು ಇಂಡಿಯಾದಿಂದ ಮೊಟ್ಟ ಮೊದಲ ಬಾರಿಗೆ, *ಕ್ರಿಪ್ಟೋಲಿಮಸ್ ಮಾಂಟ್ರೋಜೀರಿ* ಎಂಬ ಪರಭಕ್ಷಕ ಗುಲಗಂಜಿ ಹುಳು, ನಿಂಬೆಯ ಹಾನಿಕಾರಕ ಹಿಟ್ಟುತಿಗಣೆಯನ್ನು ಭಕ್ಷಿಸಿ ತಿಂದು ಸಂಖ್ಯೆಯನ್ನು ಕಡಿಮೆ ಮಾಡುತ್ತದೆಂದು ಕಂಡು ಹಿಡಿಯಲಾಗಿರುವ ಮಾಹಿತಿಯನ್ನು ಅಂತರ ರಾಷ್ಟ್ರೀಯ ನಿಯತಕಾಲಿಕ 'ನೇಚರ್' ಪತ್ರಿಕೆಯಲ್ಲಿ ವರದಿ ಮಾಡಿದರು. ಇದು ಭಾರತೀಯ ಕೀಟಶಾಸ್ತ್ರ ಕ್ಷೇತ್ರದಲ್ಲಿ ಪ್ರಥಮ ಮೈಲುಗಲ್ಲು. ಇದು ವಿಭಾಗದ ಸಂಪನ್ಮೂಲದ ಬಲವು ಹೌದು. ಸ್ವತಃ ಡಾ. ಪುಟ್ಟರುದ್ರಯ್ಯನವರು ವಿವಿಧ ಬಗೆಯ ಕೀಟಪೀಡೆಗಳ ಮೇಲೆ ಸಂಶೋಧನೆ ಮಾಡಿ ತಮ್ಮ ಅನೇಕ ಸಂಶೋಧನಾ ಲೇಖನಗಳನ್ನು 'ಕರೆಂಟ್ ಸೈನ್ಸ್'ನಲ್ಲಿ ಪ್ರಕಟಿಸಿರುತ್ತಾರೆ. ಈ ಲೇಖನಗಳೆಲ್ಲವೂ ಕೀಟ ಪೀಡೆಗಳು ಮತ್ತು ನುಶಿ (ಮೈಟ್) ಪೀಡೆಗಳು ಹಾಗೂ ಅನೇಕ ಪರಭಕ್ಷಕ ಹಾಗೂ ಪರೋಪಜೀವಿಗಳಿಗೆ ಸಂಬಂಧಿಸಿದವಾಗಿವೆ. ಕೀಟಶಾಸ್ತ್ರಜ್ಞರು ಹಾಗೂ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಡಾ.ಜಿ.ಕೆ.ವೀರೇಶ್‌ರವರು ಡಾ.ಪುಟ್ಟರುದ್ರಯ್ಯನವರ ಮಾರ್ಗದರ್ಶನದಲ್ಲಿ ಡಾಕ್ಟರೇಟ್ ಪಡೆದ ಮೊದಲ ವಿದ್ಯಾರ್ಥಿ.

ವಿಭಾಗದಲ್ಲಿ ಅನುಭವಿ ಪ್ರಾಧ್ಯಾಪಕರೊಂದಿಗೆ ಸಮರ್ಥ ಸಂಪನ್ಮೂಲ ವ್ಯಕ್ತಿಗಳಾಗಿದ್ದ ಪುಟ್ಟರುದ್ರಯ್ಯನವರು ಕೀಟಪೀಡೆಗಳ ವಿವರಣೆಯನ್ನು ವಿದ್ಯಾರ್ಥಿಗಳಿಗೆ ನೀಡುತ್ತಿರುವಾಗ ಅವುಗಳ ವಿಸ್ತಾರ, ಪೀಡೆಗಳ ಪ್ರಾಮುಖ್ಯತೆ, ಆಹಾರ ಸಸ್ಯಗಳು, ಹಾನಿಯ ಲಕ್ಷಣಗಳು, ಜೀವನಚರಿತ್ರೆ ಮತ್ತು ಸಮಗ್ರ ನಿಯಂತ್ರಣಾ ಕ್ರಮಗಳನ್ನು ಅನೇಕ ಉದಾಹರಣೆಗಳೊಂದಿಗೆ ವಿವರಿಸುತ್ತಿದ್ದೂ ಅಲ್ಲಲ್ಲಿ ತೌಲನಿಕ ಸ್ಪಷ್ಟೀಕರಣ ನೀಡುತ್ತಿದ್ದರು. ಕೀಟಪೀಡೆಗಳ

ವಿಸ್ತಾರವನ್ನು ತಿಳಿಸುವಾಗ ಮೊದಲು ರಾಜ್ಯದಲ್ಲಿ, ನಂತರ ರಾಷ್ಟ್ರದಲ್ಲಿ ಮತ್ತು ಹೊರರಾಷ್ಟ್ರಗಳ ಹೆಸರುಗಳನ್ನು ಸುಲಲಿತವಾಗಿ ಹೇಳುತ್ತಿದ್ದರು. ಅದೇ ರೀತಿಯಲ್ಲಿ ಆಹಾರ ಸಸ್ಯಗಳ ಹೆಸರುಗಳನ್ನು ಹಾನಿ ಮಾಡುವ ಚಿಹ್ನೆಗಳ ವಿವರಣೆಯನ್ನು ನೀಡುತ್ತಿದ್ದರು. ಕೀಟ ಪೀಡೆಗಳ ಜೀವನ ಚರಿತ್ರೆಯನ್ನು ತಿಳಿಸುವಾಗ ಕೀಟಗಳ ಸ್ವಭಾವ, ವೈಶಿಷ್ಟಗಳನ್ನು ಮೊಟ್ಟೆಯಿಂದ ಹಿಡಿದು ಪ್ರೌಢ ಕೀಟಗಳವರೆಗೆ ಪ್ರತಿ ಹಂತಗಳ ಬಗ್ಗೆ ಸ್ಪಷ್ಟವಾಗಿ ಗುರುತಿಸುತ್ತಿದ್ದರು. ಮುಖ್ಯಸ್ಥರಾಗಿದ್ದರೂ ಸಹ ತಮ್ಮ ಪಾಲಿನ ಪಠ್ಯಕ್ರಮದ ವೇಳಾ ಪಟ್ಟಿಯ ತರಗತಿಗಳನ್ನು ತಪ್ಪದೇ ತೆಗೆದುಕೊಳ್ಳುತ್ತಿದ್ದರು. ಇವರ ಉಪನ್ಯಾಸಗಳನ್ನು ವಿದ್ಯಾರ್ಥಿಗಳು ಯಾವುದೇ ಕಾರಣಕ್ಕೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ಇವರ ಉಪನ್ಯಾಸದ ಶೈಲಿ ಪ್ರಾರಂಭದಿಂದ ಕೊನೆಯುವರೆಗೂ ಯಾವ ಅಡೆತಡೆಗಳಿಲ್ಲದೆ ಮುಂದುವರೆಯುತ್ತಿತ್ತು.

ಪೀಡೆಗಳ ನಿಯಂತ್ರಣಾ ಕ್ರಮಗಳನ್ನು ತಿಳಿಸುವಾಗ ಸಾಧ್ಯವಾದಷ್ಟು ಮಟ್ಟಿಗೆ ಸಮಗ್ರ ಪೀಡೆ ನಿರ್ವಹಣಾ ಕ್ರಮವನ್ನು ಬೋಧಿಸುತ್ತಿದ್ದರು. ಮೊದಲಿಗೆ ಬೇಸಾಯ ಕ್ರಮದಿಂದ ಸಾಂಪ್ರದಾಯಕವಾಗಿ ನಿಯಂತ್ರಿಸುವ ಕ್ರಮಗಳು, ಅನಂತರ ಯಾಂತ್ರಿಕವಾಗಿ ಕೆಲವಾರು ಕೀಟಗಳನ್ನು ತಡೆಗಟ್ಟುವುದು ಹಾಗೂ ಜೈವಿಕ ಹತೋಟಿ ಕ್ರಮಗಳು, ಪ್ರಮುಖವಾಗಿ ನೈಸರ್ಗಿಕ ಪರಭಕ್ಷಕ ಹಾಗೂ ಪರೋಪಜೀವಿಗಳನ್ನು ವ್ಯವಸ್ಥಿತವಾಗಿ ತಾಕುಗಳನ್ನು ವೀಕ್ಷಿಸಿ ಅವುಗಳ ಪ್ರಯೋಜನೆ ಪಡೆಯುವುದರ ಮತ್ತು ಇತರ ಪ್ರದೇಶಗಳಿಂದ ಹುಡುಕಿ ತಂದು ತಾಕುಗಳಲ್ಲಿ ಬಿಡುವ ಕುರಿತಂತೆ ತಿಳಿಸುತ್ತಿದ್ದರು. ಪರಿಸರದಲ್ಲಿಯೇ ಈ ಕೀಟಗಳು ಉದ್ಭವವಾಗುವುದರಿಂದ ಹೆಚ್ಚಿನ ಒತ್ತು ಜೈವಿಕ ನಿಯಂತ್ರಣಕ್ಕೆ ಸೀಮಿತವಾಗಿರುತ್ತಿತ್ತು. ನಾಲ್ಕನೆಯ ಕ್ರಮವೆಂದರೆ, ಕೆಲವೇ ಕೀಟಪೀಡೆಗಳಿಗೆ ಮಾತ್ರ ಸೂಕ್ತವಾಗುವಂತಹ ಕಾನೂನು ರೀತ್ಯ ನಿಯಂತ್ರಣ ಕ್ರಮಗಳ ಕುರಿತು ತಿಳಿಸುತ್ತಿದ್ದರು. ಕೃಷಿ ಕಾಳಜಿ, ಪ್ರಕೃತಿ ಕಾಳಜಿ, ಪರಿಸರ ಸಮತೋಲನ ಕಾಯುವ ರೀತಿಯಾಗಿತ್ತು. ಕೊನೆಯ ಹಂತದ ನಿಯಂತ್ರಣ ಕ್ರಮವೆಂದರೆ, ರಾಸಾಯನಿಕಗಳನ್ನು ಉಪಾಯದಿಂದ ಯೋಚಿಸಿ ಬಳಸಿ ಕೀಟಗಳನ್ನು ನಿಯಂತ್ರಿಸುವ ಕ್ರಮ. ಪರಿಸರದ ಹಿತದೃಷ್ಟಿಯಿಂದ ಸುರಕ್ಷಿತವಾಗಿ ಬಳಸುವಂತಹ ಪೀಡೆನಾಶಕಗಳನ್ನು ಕನಿಷ್ಠ ಪ್ರಮಾಣದಲ್ಲಿ ಅತ್ಯಂತ ಎಚ್ಚರಿಕೆಯಿಂದ ಬಳಸುವಂತೆ ತಿಳಿಸುತ್ತಿದ್ದರು. 'ರಾಸಾಯನಿಕ ನಿಯಂತ್ರಣವೇ ಪೀಡೆ ನಿರ್ವಹಣೆಯ ಕೊನೆಯ ಹಂತವಾಗಿರಬೇಕು' ಎಂದು ಪ್ರತಿ ಕೀಟಪೀಡೆಗಳ ಹತೋಟಿ ಕ್ರಮಗಳಲ್ಲಿ ಹೇಳುತ್ತಿದ್ದರು. ಇವರು ನೀಡುತ್ತಿದ್ದ ಮಾಹಿತಿಗಳು ಅನೇಕ ವಿವರಗಳನ್ನೊಳಗೊಂಡು ಎಲ್ಲರಿಗೂ ಅರ್ಥವಾಗುವಂತೆ ತಿಳಿಸುತ್ತಿದ್ದರಿಂದ ಯಾವ ವಿದ್ಯಾರ್ಥಿಗಳು ಪ್ರಶ್ನೆ ಕೇಳುವ ಗೋಜಿಗೆ ಹೋಗುತ್ತಿರಲಿಲ್ಲ.

ಅವರು ಸರ್ಕಾರದ ಕೀಟಶಾಸ್ತ್ರಜ್ಞರಾಗಿದ್ದಾಗ ಆಗಾಗ ಲಾಲ್‌ಬಾಗ್‌ಗೆ ಭೇಟಿ ನೀಡುತ್ತಿದ್ದರು. ಅಲ್ಲಿನ ಅಲಂಕಾರಿಕ ಸಸ್ಯಗಳಿಗೆ ಬೀಳುತ್ತಿದ್ದ ಕೀಟಪೀಡೆಗಳು ಹಾಗೂ ಪರಾಗಸ್ಪರ್ಶಗಳನ್ನು ಹಿಡಿಯುವ ಪ್ರಯತ್ನ ಮಾಡುತ್ತಿದ್ದರು. ಕೆಲವಾರು ಸಂದರ್ಭಗಳಲ್ಲಿ ತಾವೇ ಮರಗಳನ್ನು ಹತ್ತಿ ಕೀಟಪೀಡೆಗಳಿಂದ ಹಾನಿಯಾಗಿರುವಂತಹ ಮಾದರಿಗಳನ್ನು

ಕಿತ್ತು ತಂದು ಪ್ರಯೋಗಶಾಲೆಯಲ್ಲಿ ಇತರ ಸಹೋದ್ಯೋಗಿಗಳ ಜೊತೆಯಲ್ಲಿ ಚರ್ಚಿಸುತ್ತಿದ್ದರು. ಇಂತಹ ಮಾದರಿಗಳನ್ನು ಕೃಷಿ ಕಾಲೇಜಿನ ವಿದ್ಯಾರ್ಥಿಗಳಿಗೆ ತಮ್ಮ ಕ್ಲಾಸಿನಲ್ಲಿ ತೋರಿಸುತ್ತಿದ್ದರು. ವಿದ್ಯಾರ್ಥಿಗಳು ಮಾದರಿಯನ್ನು ಪರೀಕ್ಷಿಸಿ ಸೂಕ್ತ ಟಿಪ್ಪಣಿಗಳನ್ನು ಬರೆದುಕೊಳ್ಳಲು ಅನುಕೂಲವಾಗುತ್ತಿತ್ತು.

ಹಾವೇರಿ ಜಿಲ್ಲೆಯ ಗದಗ ತಾಲೂಕಿನ ಸುತ್ತ ಮುತ್ತ ಸುಮಾರು ಹತ್ತು ಸಾವಿರ ಎಕರೆ ಜಮೀನಿನಲ್ಲಿ ರೆಕ್ಕೆಗಳಿಲ್ಲದ ಮಿಡತೆ, *ಕೋಲ್‌ಮೇನಿಯಾ ಸ್ಪಿನಾರಾಯಿಡಿಸ್‌ನ* ಹಾವಳಿ ಪ್ರಾರಂಭವಾಗಿತ್ತು. ಸರಕಾರದಿಂದ, ಅಲ್ಲಿಯ ರಾಜಕೀಯ ವ್ಯಕ್ತಿಗಳಿಂದ ಈ ಕೀಟ ಪೀಡೆಯ ನಿಯಂತ್ರಣಕ್ಕಾಗಿ ಬಹಳಷ್ಟು ಒತ್ತಡ ಬರುತ್ತಿತ್ತು. ಡಾ. ಕೋಲ್‌ಮನ್ ಕಾಲದಿಂದಲೂ ಈ ಕೀಟದ ಬಗ್ಗೆ ಸಂಶೋಧನೆ ನಡೆದು ಅದರ ನಿಯಂತ್ರಣ ಕ್ರಮಗಳನ್ನೆಲ್ಲ ತಿಳಿಸಿದ್ದರು. ಅಂದಿನ ಕೆಲವರು ವಿಸ್ತರಣಾ ಕಾರ್ಯಕರ್ತರು ಆ ಸಮಸ್ಯೆಗೆ ಹೆಲಿಕಾಪ್ಟರ್ ಮುಖಾಂತರ ಏರಿಯಲ್ ಸಿಂಪರಣೆ ಮಾಡಿದರೆ ಕೂಡಲೇ ಹತೋಟಿಗೆ ಬರುವುದಾಗಿ ವಾದಿಸುತ್ತಿದ್ದರು. ಡಾ. ಪುಟ್ಟರುದ್ರಯ್ಯನವರಿಗೆ ಈ ವಾದ ಸರಿಕಾಣಿಸುತ್ತಿರಲಿಲ್ಲ. ಜೋಳಕ್ಕೆ ಬಿದ್ದಿರುವ ಈ ಪೀಡೆಯ ನಿಯಂತ್ರಣಕ್ಕಾಗಿ ಇಡೀ ಪ್ರದೇಶದಲ್ಲಿ ವಿಷದ ಸಿಂಪರಣಾ ದ್ರಾವಣ ಬೀಳುವುದರಿಂದ ವಿಷ ಹರಡಿ ಉಪಯುಕ್ತ ಕೀಟಗಳಾದ ಪರೋಪಜೀವಿಗಳು, ಪರಭಕ್ಷಕ ಕೀಟಗಳು ಹಾಗೂ ಪರಾಗಸ್ಪರ್ಶಿ ಕೀಟಗಳು ಮತ್ತು ಇತರ ಪ್ರಾಣಿಗಳು ನಾಶವಾಗುವುದಲ್ಲದೇ ಪರಿಸರ ಮಾಲಿನ್ಯವಾಗುತ್ತದೆ. ಏರಿಯಲ್ ಸಿಂಪರಣೆಗೆ ಪರ್ಯಾಯವಾಗಿ ಸುಲಭದ ಬೇರೆ ವಿಧಾನಗಳಿವೆ, ಈ ವಿಧಾನಗಳಿಂದಲೇ ಮಿಡತೆಯ ನಿಯಂತ್ರಣ ಮಾಡಬಹುದೆಂದು ಇವರ ವಾದವಾಗಿತ್ತು.

ಅದೇ ಕಾಲದಲ್ಲಿ ಕ್ಲೋರಿನೇಟೆಡ್ ಹೈಡ್ರೋಕಾರ್ಬನ್ ಮೂಲದ ಕೀಟನಾಶಕಗಳಾದ ಡಿ.ಡಿ.ಟಿ ಮತ್ತು ಬಿ.ಎಚ್.ಸಿ.ಗಳು ಕೀಟ ಹತೋಟಿಗಳಿಗೆ ರಾಮ ಬಾಣವಾಗಿದ್ದವು. ಯಾವುದೇ ಕೀಟಬಾಧೆಗೆ ಇದೊಂದೇ ಮದ್ದು. ಆಡಳಿತ ಸೂತ್ರ ವಹಿಸಿದವರಿಗೂ ರಾಸಾಯನಿಕ ಕೀಟನಾಶಕಗಳನ್ನು ಮಾರುವವರೆಗೆ ಆಗಿನ ಕಾಲದಲ್ಲಿ ಹೆಚ್ಚಿನ ಸಂಪರ್ಕವಿತ್ತು. ಇದರಿಂದಾಗಿ ರಾಜ್ಯದ ಕೀಟಶಾಸ್ತ್ರಜ್ಞರಾದ ಡಾ.ಪುಟ್ಟರುದ್ರಯ್ಯನವರ ಧ್ವನಿ ಯಾರಿಗೂ ಕೇಳಿಸಲೇ ಇಲ್ಲ. ಏರಿಯಲ್ ಸಿಂಪರಣೆ ಮುಗಿಯಿತು. ಎಲ್ಲಾ ಕೀಟಶಾಸ್ತ್ರಜ್ಞರು ಹೋಗಿ ಸಿಂಪರಣೆಯನ್ನು ವೀಕ್ಷಿಸಿದರು. ಎಷ್ಟೋ ಉಪಯುಕ್ತ ಕೀಟಗಳೆಲ್ಲ ನಾಶವಾಗುತ್ತವೆ ಎಂಬುದಾಗಿ ಹಂಬಲಿಸಿದರು. ಕಂಡ ಕೀಟಗಳನ್ನೆಲ್ಲಾ ಕೊಲ್ಲಿ ಎಂಬ ಮನೋಭಾವ ಇವರದಾಗಿರಲಿಲ್ಲ. ಬೇರೆ ವಿಧಾನಗಳನ್ನು ಬಳಸಿ ಈ ತಂತ್ರಗಳಿಂದ ಹತೋಟಿಗೆ ಬಾರದಿದ್ದರೆ ರಾಸಾಯನಿಕ ಕೀಟನಾಶಕಗಳನ್ನು ಬಳಸಿ ಎಂದು ಡಾ. ಪುಟ್ಟರುದ್ರಯ್ಯನವರು ವಾದಿಸುತ್ತಿದ್ದರು. ಕೀಟನಾಶಕಗಳು ಎರಡು ಅಲಗಿನ ಕತ್ತಿಯಂತೆ, ಎತ್ತ ಬೀಸಿದರೂ ಕತ್ತರಿಸುತ್ತದೆ; ಆದ್ದರಿಂದ ಎಚ್ಚರಿಕೆಯ ಉಪಾಯಗಳನ್ನು ತಜ್ಞರು ನಿರ್ವಹಿಸಬೇಕು ಎಂಬುದು ಅವರ ಆಶಯವಾಗಿರುತ್ತಿತ್ತು.

ಡಾ. ಜಿ.ಪಿ. ಚನ್ನಬಸವಣ್ಣನವರು ಡಾ. ಪುಟ್ಟರುದ್ರಯ್ಯನವರ ಸಹೋದ್ಯೋಗಿಗಳಾಗಿ ಕೀಟಶಾಸ್ತ್ರ ವಿಭಾಗದಲಿಯೇ ಮೂರು ದಶಕಗಳಿಗೂ ಹೆಚ್ಚು

ಕೆಲಸ ನಿರ್ವಹಿಸಿದವರು. ಅವರು ಅಮೇರಿಕಾಗೆ ಭೇಟಿ ಇತ್ತಿದ್ದಾಗ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲಿದ್ದ ಬರ್ಕ್ಲೆ ಆವರಣದಲ್ಲಿ ಡಾ.ಪುಟ್ಟರುದ್ರಯ್ಯನವರು ಎಂ.ಎಸ್. ಮತ್ತು ಡಾಕ್ಟರೇಟ್ ಪದವಿಯನ್ನು ಪಡೆದ ಪ್ರಯೋಗಶಾಲೆಗೆ ಭೇಟಿ ಮಾಡುವ ಅವಕಾಶ ಒದಗಿತ್ತು. ಅವರ ಪ್ರಾಧ್ಯಾಪಕರಲ್ಲಿ ಒಬ್ಬರಾದ ಪ್ರೊ.ಸಿ.ಎಫ್.ಸ್ಮಿತ್‌ರವರನ್ನು ಭೇಟಿಯಾಗಿದ್ದರಂತೆ. ಅವರು ಪುಟ್ಟರುದ್ರಯ್ಯನವರು ಒಬ್ಬ ಪ್ರತಿಭಾವಂತ ಹಾಗೂ ಉದ್ಯಮಶೀಲ ಪರಿಶ್ರಮ ವಿದ್ಯಾರ್ಥಿಯಾಗಿದ್ದರೆಂದು ಮನಃಪೂರ್ವಕವಾಗಿ ಹೊಗಳಿದರಂತೆ. ನಂತರ ಅವರು ಬರ್ಕ್ಲೆ ಕ್ಯಾಂಪಸ್‌ನಲ್ಲಿ ಅಧ್ಯಯನ ಮಾಡುವಾಗ ಅತ್ಯಂತ ಭಾವನಾತ್ಮಕವಾಗಿ, ಪುಟ್ಟರುದ್ರಯ್ಯನವರು ಕಳೆದ ದಿನಗಳನ್ನು, ಅವರು ಸಂಶೋಧನೆ ನಡೆಸಿದ ವಿಚಾರವನ್ನು ಮತ್ತು ಕಳೆಗಳ ಜೈವಿಕ ನಿಯಂತ್ರಣದ ಬಗ್ಗೆ ಕ್ಷೇತ್ರ ಪರೀಕ್ಷೆಗಳನ್ನು ನಡೆಸಿದ್ದರೆಂದು ನೆನಪಿಸಿಕೊಂಡರಂತೆ. ಅವರ ಜೊತೆಯ ಒಡನಾಟ ಮರೆಯಲಾಗದ ಅನುಭವದ ಅನುಬಂಧವೆಂದು ಅವರು ಬಣ್ಣಿಸಿದರಂತೆ.

ಡಾ. ಪುಟ್ಟರುದ್ರಯ್ಯನವರ ಸಹೋದ್ಯೋಗಿಗಳಾದ ಡಾ. ಜಿ.ಪಿ.ಚನ್ನಬಸವಣ್ಣನವರು 1984ರಲ್ಲಿ ಬರೆದಿರುವ ಲೇಖನವೊಂದರಲ್ಲಿ 'ಡಾ.ಪುಟ್ಟರುದ್ರಯ್ಯನವರನ್ನು ಅಧಿಕಾರಿಯಾಗಿರುವ ಕೋನವನ್ನು ಬಿಟ್ಟು ಅವರಿಂದ ಒಬ್ಬ ವ್ಯಕ್ತಿಯಾಗಿ ಕಲಿಯುವುದು ಬಹಳಷ್ಟು ಇದೆಯೆಂದು, ವಿಶೇಷವಾಗಿ ಅವರ ಸ್ನೇಹ, ಸೌಹಾರ್ದತೆ, ನಮ್ರತೆ, ನಿಷ್ಕಳಂಕ ಮನೋಭಾವ, ಪ್ರತಿಯೊಬ್ಬರಿಗೂ ಅವರು ತೋರಿಸಿದಂತಹ ಆಸಕ್ತಿ ನಮ್ಮ ಮನದ ಮೇಲೆ ಅಚ್ಚೊತ್ತಿತ್ತು. ಯಾರಾದರೂ ಅವರ ಜೊತೆಯಲ್ಲಿ ಕೆಲವೇ ದಿನಗಳು ಕೆಲಸ ಮಾಡಿದವರಿಗೂ ಸಹ ಅವರ ಗುಣ ವಿಶೇಷಗಳು ವೇದ್ಯವಾಗುತ್ತಿದ್ದವು. ಒಟ್ಟಾರೆ ಕೃಷಿ ವಿಶ್ವವಿದ್ಯಾನಿಲಯದ ಕೀಟ ವಿಭಾಗಕ್ಕೆ ಡಾ. ಪುಟ್ಟರುದ್ರಯ್ಯನಂಥವರ ಸೇವಾ ಮನೋಭಾವ ಹಾಗೂ ಸಂಪನ್ಮೂಲ ವ್ಯಕ್ತಿಗಳಿಂದ ಆರಂಭದಲ್ಲಿಯೇ ಒಳ್ಳೆಯ ಭವಿಷ್ಯವನ್ನು, ಸಾಮರ್ಥ್ಯವನ್ನು ಹೊಂದುವಂತಾಯಿತು' ಎಂದು ಹೇಳಿದ್ದಾರೆ.

ಇವರ ತತ್ವ, ಸಿದ್ಧಾಂತ, ಆದರ್ಶಗಳು ಮತ್ತು 'ಕಾಯಕವೇ ಕೈಲಾಸ' ಎಂಬ ಶರಣರ ತತ್ವದಂತೆ ಅನೇಕ ಸಹಪಾಠಿಗಳಿಗೂ ಹಾಗೂ ಸಾವಿರಾರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿ ಅವರ ಮುಂದಿನ ಎಲ್ಲಾ ಶ್ರೇಯಸ್ಸಿಗೆ ಕಾರಣೀಭೂತರಾಗಿದ್ದರೆಂದರೆ ಅತಿಶಯೋಕ್ತಿಯಾಗಲಾರದು. ಮಹಾತ್ಮಗಾಂಧಿಯವರು ಹೇಳಿರುವ ಹಾಗೆ 'ಶ್ರಮ ಜೀವನವೇ ನಿಜವಾದ ಜೀವನ'ವೆಂಬುದನ್ನು ಆಚರಿಸುತ್ತಿದ್ದರು. ಕಷ್ಟದ ದುಡಿಮೆಯಾಗಲಿ ಸೋಮಾರಿತನವಾಗಲಿ ಸಹವಾಸದ ಬಲದಿಂದ ವೃದ್ಧಿಯಾಗುತ್ತದೆ. ವ್ಯಕ್ತಿ ತಮ್ಮ ಎಳೆತನದಲ್ಲಿ ಮುಂದೆ ಏನನ್ನಾದರೂ ಸಾಧಿಸಬೇಕೆಂಬ ಆಸೆ ಇಟ್ಟುಕೊಂಡವರು ಪ್ರಾರಂಭದಲ್ಲಿ ಸರಿಯಾದ ನೆಲೆ ದೊರೆಯದೆ ಮುಂದುವರಿಯಲು ಅಸಾಧ್ಯ. ಆದರೂ, ಸಿಕ್ಕಿದಷ್ಟು ಅನುಕೂಲತೆಯನ್ನು ಬಳಸಿಕೊಂಡು ಬುದ್ಧಿವಂತರಾಗಿ ನಿಷ್ಠಾವಂತರಾಗಿ ಕಷ್ಟಪಟ್ಟು ದುಡಿಯಬೇಕು ಎಂಬ ತತ್ವವನ್ನು ಅವರು ವಿಭಾಗದ ಸಂಶೋಧನಾ ಸಹಾಯಕರಿಗೆ, ವಿದ್ಯಾರ್ಥಿಗಳಿಗೆ ಮೇಲಿಂದ ಮೇಲೆ ಹೇಳುತ್ತಾ ಪ್ರಾಯೋಗಿಕ ಅನುಭವವನ್ನು ಹೊಂದಲು ಕಾರಣರಾಗುತ್ತಿದ್ದರು.

## 5. ಆಡಳಿತ

ಭಾರತ ನವೋದಯ ಸಂದರ್ಭದಲ್ಲಿ ಆಡಳಿತಾತ್ಮಕ ನೆಲೆಯ ಯಾವುದೇ ಇಲಾಖೆಯ ಅಧಿಕಾರಿಗಳ ಕಾರ್ಯ ನಿರ್ವಹಣೆ ಎಂದರೆ ಅದು ನವ ಭಾರತದ ನಿರ್ಮಾಣವಾಗಿತ್ತು. ನವಭಾರತ ನಿರ್ಮಾಣವನ್ನು ಬ್ರಿಟಿಷ್ ಅಧಿಕಾರಿಗಳ ಕಾರ್ಯವೈವಿಧ್ಯತೆಯನ್ನು ಅನುಸರಿಸಿ ಅಗತ್ಯ ಸೇವಾಮನೋಭಾವವನ್ನು ರಾಷ್ಟ್ರೀಯ ಪ್ರಜ್ಞೆಯಿಂದ ಸ್ವಾತಂತ್ರಪೂರ್ವ ಹಾಗೂ ಸ್ವಾತಂತ್ರೋತ್ತರದ ಆರಂಭದ ಕಾಲದಲ್ಲಿ ಅನೇಕ ದೇಸಿ ವಿದ್ವಾಂಸರು ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಸಮರ್ಪಣಾ ಭಾವದಿಂದ ಸೇವೆಗೈದಿದ್ದಾರೆ. ಆ ಸಾಲಿನಲ್ಲಿ ಡಾ. ಎಂ.ಪುಟ್ಟರುದ್ರಯ್ಯನವರು ಒಬ್ಬರು. ಅವರು ಸೇವೆಗೈದ ಪ್ರತಿ ಇಲಾಖೆಯ ಪ್ರತಿ ಹುದ್ದೆಗೂ ನಿಷ್ಠಾವಂತ ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸಿ ನಂತರದ ಪರಂಪರೆಗೆ ವೈತಾಳಿಕರಾಗಿ ಪ್ರೇರಣೆಯಾಗಿದ್ದಾರೆ.

ಸ್ವಾತಂತ್ರಪೂರ್ವದಲ್ಲಿಯೇ ಸರ್ಕಾರದ ಕೃಷಿ ಇಲಾಖೆಯಲ್ಲಿ ಸಹಾಯಕ ಕೀಟಶಾಸ್ತ್ರಜ್ಞರಾಗಿ ವೃತ್ತಿ ಜೀವನ ಆರಂಭಿಸಿದ ಇವರು, ಅಂದಿನ ಕೃಷಿ ಇಲಾಖೆಯಲ್ಲಿ ವಿವಿಧ ಹುದ್ದೆಗಳನ್ನು ಅಲಂಕರಿಸಿ, ವಿವಿಧ ಜವಾಬ್ದಾರಿಗಳನ್ನು ನಿಭಾಯಿಸಿ ಮಾದರಿ ಅಧಿಕಾರಿ ಹಾಗೂ ಪ್ರಾಧ್ಯಾಪಕರಾಗಿ ಖ್ಯಾತರಾದವರು. ಕೃಷಿ ಇಲಾಖೆಯಲ್ಲಿ ಅಧಿಕಾರಿಯಾಗಿದ್ದಾಗ ರೈತರು, ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದಾಗ ವಿದ್ಯಾರ್ಥಿಗಳು ಹಾಗೂ ಸಹೋದ್ಯೋಗಿಗಳು ಅವರ ಕಣ್ಣುಗಳಾಗಿರುತ್ತಿದ್ದರು. ಅಷ್ಟೇ ಜವಾಬ್ದಾರಿಯಿಂದ ಅವರ ಸಮಸ್ಯೆಗಳನ್ನು ಗುರುತಿಸಿ ಪರಿಹಾರ ಕೈಗೊಳ್ಳುತ್ತಿದ್ದರು. ಯಾವುದೇ ಸಮಸ್ಯೆಗಳಿದ್ದಲ್ಲಿ ಅವುಗಳನ್ನು ಕಚೇರಿಯಲ್ಲಿ ಅವರ ಸಂಬಂಧ ಪಟ್ಟ ಅಧಿಕಾರಿಗಳು ಗಮನಕ್ಕೆ ತರಬೇಕೆಂದೇನೂ ಇರಲಿಲ್ಲ, ಕಛೇರಿಯ ಉಪವಿಭಾಗಗಳಿಗೆ ಭೇಟಿ ನೀಡಿ ಕ್ಷೇತ್ರ ವೀಕ್ಷಣೆಗೆ ಹೋಗಿದಾಗ, ತಾವಾಗಿಯೇ ಸಮಸ್ಯೆಗಳನ್ನು ಕೇಳಿ ತಕ್ಕುದಾದ ಕ್ರಮ ಕೈಗೊಳ್ಳುವ ಅಧಿಕಾರಿಯಾಗಿದ್ದರು.

ಕೃಷಿ ಅಭಿವೃದ್ಧಿಯಲ್ಲಿ ಕೀಟ ಮತ್ತು ರೋಗಗಳ ಸಮಸ್ಯೆ ಬಗ್ಗೆ ಹೆಚ್ಚಿನ ಆದ್ಯತೆ ಕೊಟ್ಟು ತಕ್ಷಣ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯುವಂತೆ ಸಂಬಂಧಪಟ್ಟ ಶಿಕ್ಷಕರಿಗೆ ಹಾಗೂ ವಿಭಾಗದ ಸಂಶೋಧಕರಿಗೆ ಸೂಚಿಸುತ್ತಿದ್ದರು. 1962ರಲ್ಲಿ ಡಾ. ಪುಟ್ಟರುದ್ರಯ್ಯನವರು ಕೃಷಿ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಶಿಕ್ಷಣ ಮತ್ತು ಸಂಶೋಧನೆಯ ಜವಾಬ್ದಾರಿಯನ್ನು ಅವರೇ ವಹಿಸಿಕೊಂಡಿದ್ದರು. ಕಾಲೇಜಿನ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಣ ಸಿಬ್ಬಂದಿಗಳಿಗೆ ಮಾರ್ಗದರ್ಶಕರಾಗಿ ವಿದ್ಯಾರ್ಥಿಗಳ ಪ್ರತಿಯೊಂದು ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದರು. ಎಂಥಹುದೇ ಕ್ಲಿಷ್ಟ ಸಮಸ್ಯೆಗಳಿಗೆ

ಪರಿಹಾರವನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಿದ್ದರು. ಬಡ ವಿದ್ಯಾರ್ಥಿಗಳ ಮೇಲಿನ ಹೆಚ್ಚಿನ ಕಾಳಜಿಯಿಂದ ಅವರ ಪೋಷಕರನ್ನು ವಿಚಾರಿಸಿ ಅವರ ಕಷ್ಟ ಕಾರ್ಪಣ್ಯಗಳ ಬಗ್ಗೆ ಹೆಚ್ಚಿನ ಗಮನ ಹರಿಸುತ್ತಿದ್ದರು.

ಹೆಬ್ಬಾಳ ಕೃಷಿ ಕಾಲೇಜಿನಲ್ಲಿ ವಿವಿಧ ಹುದ್ದೆಗಳನ್ನು ಅಲಂಕರಿಸಿದಾಗ ಶಿಕ್ಷಕ ಸಿಬ್ಬಂದಿಗಳೆಲ್ಲರಿಗಿಂತಲೂ ಮೊದಲೇ ವಿಭಾಗಕ್ಕೆ ಬರುತ್ತಿದ್ದರು. ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಕಾಲಕ್ಕೆ ಸರಿಯಾಗಿ ಹಾಜರಾಗಿದ್ದು, ಪಾಠ ಪ್ರವಚನಗಳ ಬಗ್ಗೆ ಹೆಚ್ಚಿನ ಆದ್ಯತೆ ಕೊಡುತ್ತಿದ್ದರು. ವಿದ್ಯಾರ್ಥಿ ಮತ್ತು ಶಿಕ್ಷಕ ವೃಂದದವರಿಗೆ ಶಿಸ್ತಿನ ಬಗ್ಗೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಸಲಹೆ ಕೊಡುತ್ತಿದ್ದರು. ಈ ಸ್ಥಾನದಲ್ಲಿರುವಾಗ ಇಲಾಖೆಯ ಕೀಟಶಾಸ್ತ್ರಜ್ಞರಂತೆ ಎಲ್ಲಾ ಕಡೆ ಪ್ರವಾಸ ಮಾಡಿ ವಿಸ್ತರಣಾ ಕಾರ್ಯವನ್ನು ಇವರೇ ಮಾಡಬೇಕಾಗಿತ್ತು. ಆ ಕಾರ್ಯವನ್ನು ಆಸ್ತೆಯಿಂದ ನಿರ್ವಹಿಸುತ್ತಿದ್ದರು.

1965ರಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣ ನಿರ್ದೇಶಕರಾಗಿ ನೇಮಕಗೊಂಡ ನಂತರವೂ 1971ರವರೆಗೆ ಕೀಟಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾಗಿದ್ದರು. ಕೃಷಿ ವಿಶ್ವವಿದ್ಯಾನಿಲಯ ಪ್ರಾರಂಭವಾದ ಮೇಲೆ ವಿಭಾಗದ ಮುಖ್ಯಸ್ಥರಾಗಿ ವಿಭಾಗದ ಅಭಿವೃದ್ಧಿಯ ಜವಾಬ್ದಾರಿಯನ್ನು ಹೊತ್ತು ವಿಭಿನ್ನ ಕಾರ್ಯಗಳನ್ನು ಹಮ್ಮಿಕೊಂಡಿದ್ದರು. ಸ್ನಾತಕೋತ್ತರ ಪಠ್ಯಕ್ರಮಗಳ ಶಿಕ್ಷಣಕ್ಕೆ ಸಂಬಂಧಿಸಿದ ಸಂಪೂರ್ಣ ಜವಾಬ್ದಾರಿಯನ್ನು ಡಾ. ಜಿ.ಪಿ.ಚನ್ನಬಸವಣ್ಣನವರಿಗೆ ವಹಿಸಿದ್ದರು. ಆದರೆ ಡಾ. ಪುಟ್ಟರುದ್ರಯ್ಯನವರು ತಮಗೆ ಪೂರ್ಣ ಅವಧಿಯ ಆಡಳಿತವಿದ್ದರೂ ಸಹ ಸ್ನಾತಕ (ಡಿಗ್ರಿ) ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಉಪನ್ಯಾಸ ಮಾಡುವುದು ಹಾಗೂ ಸಂಶೋಧನಾ ಸಿಬ್ಬಂದಿ ಹಾಗೂ ಸ್ನಾತಕೋತ್ತರ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವ ಕಾರ್ಯದಿಂದ ದೂರ ಉಳಿದಿರಲಿಲ್ಲ. ಈ ನೆಲೆಯಲ್ಲಿ ಅವರು ಹಲವು ಕನಸುಗಳನ್ನು ಹೊಂದಿದ್ದರು. ನಾಡಿನ ಕೃಷಿ ಕ್ಷೇತ್ರಕ್ಕೆ ಸಂಪನ್ಮೂಲವನ್ನು ಕಟ್ಟುವ ರಚನಾ ಕಾರ್ಯವೆಂದು ಭಾವಿಸಿ ಈ ರೀತಿಯ ನಿರ್ಣಯಗಳನ್ನು ಎಷ್ಟೇ ಶ್ರಮವೆನಿಸಿದರೂ ತೆಗೆದುಕೊಳ್ಳುತ್ತಿದ್ದರು. ಸಹಪಾಠಿಗಳು ಇವರ ನಿರ್ಣಯಕ್ಕೆ ಒಂದು ಕಾರಣವಿರುತ್ತದೆಂದು ಭಾವಿಸಿ ಸಹಕಾರ ನೀಡುತ್ತಿದ್ದರು. ಇಂಥ ವಾತಾವರಣ ನಿರ್ಮಾಣವಾಗಲು ಅವರಿಗಿರುವ ವ್ಯಕ್ತಿತ್ವವೇ ಮುಖ್ಯ ಕಾರಣವಾಗಿತ್ತು.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಅಮೆರಿಕಾದ ಲ್ಯಾಂಡ್ ಗ್ರಾಂಟ್ ಶಿಕ್ಷಣ ಪದ್ಧತಿಯನ್ನು ಪರಿಚಯಿಸಿದ ನಂತರ ತ್ರೈಮಾಸಿಕ ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದಿತ್ತು. ಅದೇ ಸಂದರ್ಭದಲ್ಲಿ ಕೀಟಶಾಸ್ತ್ರ ವಿಭಾಗದಲ್ಲಿ ಸ್ನಾತಕೋತ್ತರ ಪಠ್ಯಕ್ರಮ ಪರಿಚಯವಾಗಿ ಪ್ರಾರಂಭಿಸುವಾಗ ಅಮೇರಿಕಾದ ಫೋರ್ಡ್ ಫೌಂಡೇಶನ್‌ರವರು ಕೀಟಶಾಸ್ತ್ರದಲ್ಲಿಯ ಉನ್ನತ ತರಬೇತಿಗಾಗಿ ಶಿಕ್ಷಕರನ್ನು ಅಮೆರಿಕಾಕ್ಕೆ ಕಳುಹಿಸುತ್ತಿದ್ದರು. ಕೀಟಶಾಸ್ತ್ರ ವಿಭಾಗದಲ್ಲಿರುವ ಅಧ್ಯಾಪಕರಿಗೆ ಶಿಕ್ಷಕರಿಗೆ ಹಾಗೂ ಸಂಶೋಧಕರಿಗೆ ವಿಶೇಷ ತಂತ್ರಜ್ಞಾನದಲ್ಲಿ ಡಾಕ್ಟರೇಟ್ ಪದವಿ ಪಡೆಯಲು ಅವಕಾಶವಾಗಿತ್ತು. ಈ

ಅವಕಾಶವನ್ನು ವಿಭಾಗ ಸಿಬ್ಬಂದಿಗೆ ಬಳಸಿಕೊಳ್ಳಲು ಅನುಕೂಲ ಮಾಡುತ್ತಿದ್ದರು. ಅಲ್ಲದೆ ಈ ಸಂದರ್ಭದಲ್ಲಿ ಅಮೆರಿಕಾ ವಿಶ್ವವಿದ್ಯಾಲಯಗಳಿಂದ ಕೀಟಶಾಸ್ತ್ರದಲ್ಲಿ ಪರಿಣಿತಿ ಹೊಂದಿದ್ದ ತಜ್ಞರು ಕೃಷಿವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿ, ಸ್ನಾತಕೋತ್ತರ ಪಠ್ಯಕ್ರಮಗಳ ಶಿಕ್ಷಣ ಬೋಧಕರಾಗಿ ಹಾಗೂ ಸಂಶೋಧನೆಯಲ್ಲಿ ಸಲಹಾ ಸಮಿತಿಯ ವಿಜ್ಞಾನಿ ಸದಸ್ಯರುಗಳಾಗಿ ಕಾರ್ಯ ನಿರ್ವಹಿಸಿದ್ದಾರೆ. ಆ ಕಾಲದಲ್ಲಿ ಡಾ. ಎಚ್.ಎಂ.ಹ್ಯಾರಿಸ್ ಮತ್ತು ಡಾ. ಜಾನ್ ಎಚ್. ಲಿಲ್ಲಿ ಎಂಬ ಕೆಲವು ಹಿರಿಯ ಕೀಟಶಾಸ್ತ್ರಜ್ಞರು ಸ್ನಾತಕೋತ್ತರ ಪಠ್ಯಕ್ರಮಗಳನ್ನು ಬೋಧಿಸುತ್ತಿದ್ದರು ಹಾಗೂ ಸಂಶೋಧನಾ ಮಾರ್ಗದರ್ಶಕರಾಗಿ ಉತ್ತಮ ಕಾರ್ಯನಿರ್ವಹಿಸುತ್ತಿದ್ದರು. ಈ ಸಂದರ್ಭದಲ್ಲಿ ಫೋರ್ಡ್ ಫೌಂಡೇಶನ್ ಸಹಾಯದೊಂದಿಗೆ ಕೀಟಶಾಸ್ತ್ರ ವಿಭಾಗಕ್ಕೆ ಸಂಶೋಧನಾ ಉಪಕರಣಗಳು ಹಾಗೂ ಪುಸ್ತಕದ ರೂಪದಲ್ಲಿ ಹೆಚ್ಚಿನ ನೆರವು ದೊರಕಿತ್ತು. ಅದನ್ನು ಅನುಕೂಲಕರ ರೀತಿಯಲ್ಲಿ ಬಳಸಿಕೊಂಡು ವಿಭಾಗದ ವ್ಯವಸ್ಥಿತ ವಿಕಾಸಕ್ಕೆ ಅನುವು ಮಾಡುತ್ತಿದ್ದರು.

ಪ್ರಾಂಶುಪಾಲರಾಗಿದ್ದಾಗ ಕೃಷಿ ಕಾಲೇಜಿನಲ್ಲಿ ಪ್ರತಿಯೊಂದು ವಿಭಾಗಗಳಿಗೆ ಭೇಟಿಯಿತ್ತು ಪಠ್ಯಕ್ರಮಗಳ ಶಿಕ್ಷಕರು ತರಗತಿಗಳಲ್ಲಿ ಉಪನ್ಯಾಸ ಮಾಡುವುದು ಹಾಗೂ ಪ್ರಯೋಗಶಾಲೆಗಳಲ್ಲಿ ನಡೆಯುವ ಸಂಶೋಧನಾ ಕಾರ್ಯಕ್ರಮಗಳನ್ನು ಪ್ರಾಯೋಗಿಕವಾಗಿ ನಡೆಸಲು ಸೂಕ್ತಮಾರ್ಗದರ್ಶನ ನೀಡುತ್ತಿದ್ದರು. ಎಲ್ಲಾ ವಿಚಾರಗಳನ್ನು ನೇರವಾಗಿ ಸಂಶೋಧಕರೊಂದಿಗೆ ಚರ್ಚಿಸುತ್ತಿದ್ದರು. ವಿಚಾರ ವಿನಿಮಯದಲ್ಲಿ ಭಾಗಿಯಾಗುತ್ತಿದ್ದರು. ಅಗತ್ಯ ಬೇಡಿಕೆಗಳನ್ನು ಕೇಳಿ ತಿಳಿದು ಪೂರೈಸುತ್ತಿದ್ದರು.

ಕೀಟಶಾಸ್ತ್ರ ವಿಭಾಗದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಪ್ರಯೋಗಶಾಲೆಯಲ್ಲಿ ಭೇಟಿಮಾಡಿ ಸಂಶೋಧನಾ ಕಾರ್ಯಕ್ರಮದ ಬಗ್ಗೆ ಕೂಲಂಕುಶವಾಗಿ ಚರ್ಚಿಸುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಅವರು ಮಾರ್ಗದರ್ಶನ ಮಾಡುವ ವಿದ್ಯಾರ್ಥಿಗಳನ್ನು ನಿಮ್ಮ ಸಂಶೋಧನಾ ಯೋಜನೆ ಸರಿಯಾಗಿ ಯೋಚಿಸಿ ಮಾಡಿರುವುದಿಲ್ಲ, ಈ ಸಂಶೋಧನೆಯಿಂದ ಸೂಕ್ತ ಫಲಿತಾಂಶಗಳು ದೊರೆಯುವುದಿಲ್ಲವೆಂದು ಹೇಳುತ್ತ 'ನಿಮಗೆ ಯಾರ್‍ರೀ ಮಾರ್ಗದರ್ಶಕರು?' ಎಂದು ಹಾಸ್ಯಭಾವದಿಂದ ಕೇಳುತ್ತಾ ಆ ವಿದ್ಯಾರ್ಥಿಗಳಿಗೆ ಪುನಃ ಭೇಟಿಮಾಡಿ ಚರ್ಚಿಸುವಂತೆ ತಿಳಿಸುತ್ತಿದ್ದರು. ಸಮಸ್ಯೆಗಳನ್ನು ಸರಿಪಡಿಸುವ ಪ್ರಯತ್ನ ಮಾಡುತ್ತಿದ್ದರು. ವಿದ್ಯಾರ್ಥಿಗಳು ಯಾವುದೇ ಸಮಸ್ಯೆಗಳನ್ನು ಅವರ ಮುಂದಿಟ್ಟಾಗ ತಕ್ಷಣ ಅದಕ್ಕೆ ಸೂಕ್ತ ಪರಿಹಾರ ಕಂಡು ಹಿಡಿಯುವುದರಲ್ಲಿ ನೆರವಾಗುತ್ತಿದ್ದರು,

ಕೃಷಿ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿದ್ದಾಗ, ನಂತರ ಶಿಕ್ಷಣ ನಿರ್ದೇಶಕರಾಗಿದ್ದಾಗ ಬೋಧನಾ ಸಿಬ್ಬಂದಿಗಳನ್ನು ನೇಮಕಮಾಡುವಾಗಲಿ, ವಿದ್ಯಾರ್ಥಿಗಳನ್ನು ಸ್ನಾತಕ ಪದವಿಗಳಿಗಾಗಲಿ ಅಥವಾ ಸ್ನಾತಕೋತ್ತರ ಪದವಿಗಳಿಗಾಗಲಿ ಸೇರಿಸಿಕೊಳ್ಳುವಾಗ ಯಾವುದೇ ರೀತಿಯ ಒತ್ತಡಕ್ಕೆ ಮಣಿಯುತ್ತಿರಲಿಲ್ಲ. ಗ್ರಾಮೀಣ ಪ್ರದೇಶದಿಂದ ಬಂದಿರುವ ರೈತರ ಮಕ್ಕಳಿಗೆ ಯಾವುದೇ ರೀತಿಯಲ್ಲಿ ನಷ್ಟಗಳಾಗದಂತೆ ಹೆಚ್ಚಿನ ಆದ್ಯತೆಯನ್ನು

ಕೊಡುತ್ತಿದ್ದರು. ಅದೇ ರೀತಿಯಲ್ಲಿ ವೃತ್ತಿಗಾಗಿ ಕೃಷಿ ಇಲಾಖೆ ಅಥವಾ ಕೃಷಿ ವಿಶವಿದ್ಯಾಲಯದಲ್ಲಿ ಸಂದರ್ಶನದ ವೇಳೆ ಸೂಕ್ತ ಅಭ್ಯರ್ಥಿಯನ್ನು ಆರಿಸುವಾಗ ಯಾವುದೇ ಬಗೆಯ ಒತ್ತಡ ಬಂದರೂ ಅವುಗಳಿಗೆ ಮಣಿಯದೇ ಅರ್ಹತೆ ಮತ್ತು ಹೆಚ್ಚಿನ ಅನುಭವ ಜ್ಞಾನಕ್ಕೆ ಉತ್ತೇಜನ ನೀಡುತ್ತಿದ್ದರು. ಕೆಲವು ಹುದ್ದೆಗಳ ನೇಮಕಾತಿ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಒತ್ತಡ ತಂದಾಗಲೂ ಅವರು ಮಣಿಯದೆ ನಿಯಮಗಳನ್ವಯ ನೇಮಕಾತಿ ಮಾಡಿದ್ದ ಉದಾಹರಣೆಯೂ ಇದೆ. ಅವರು ಯಾವುದೇ ಅಧಿಕಾರವನ್ನು ದುರ್ಬಳಕೆ ಮಾಡಿಕೊಳ್ಳಲಿಲ್ಲ; ಅಂತಹ ಪ್ರಯತ್ನಗಳನ್ನು ಸಹಿಸುತ್ತಿರಲಿಲ್ಲ. ನ್ಯಾಯಕ್ಕಾಗಿ ಹೋರಾಡುವ ಧೈರ್ಯ ಹಾಗೂ ಯಾವುದೇ ಒತ್ತಡಗಳಿಗೆ ಬಲಿಯಾಗದ ಧೃಡನಿರ್ಧಾರದ ವ್ಯಕ್ತಿತ್ವವನ್ನು ರೂಢಿಸಿಕೊಂಡಿದ್ದರು. ಅನ್ಯಾಯವನ್ನು ಸಹಿಸುತ್ತಿರಲಿಲ್ಲ ಹಾಗೆಯೇ ಮಾಡುತ್ತಿರಲಿಲ್ಲ ಸಹ.

## ಡಾ. ಪುಟ್ಟರುದ್ರಯ್ಯನವರ ಪರಿಣಿತೆ

ಅಂದಿನ ಮೈಸೂರು ರಾಜ್ಯ ಸರ್ಕಾರದ ನಿಯಂತ್ರಣದಲ್ಲಿದ್ದ ಹೆಬ್ಬಾಳದ ಕೃಷಿ ಕಾಲೇಜು ಪ್ರಾರಂಭವಾದಾಗಿನಿಂದಲೂ ವಿವಿಧ ಹುದ್ದೆಗಳಲ್ಲಿ ಸೇವೆಸಲ್ಲಿಸುವುದರ ಜೊತೆಗೆ ಡಾ. ಪುಟ್ಟರುದ್ರಯ್ಯನವರು ಅನೇಕ ಭಾರತೀಯ ವಿಶ್ವವಿದ್ಯಾಲಯಗಳಲ್ಲಿ, ನವದೆಹಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಅನೇಕ ವೈಜ್ಞಾನಿಕ ಸಮಿತಿಗಳಲ್ಲಿ ಮತ್ತು ಶಿಕ್ಷಕರು ಮತ್ತು ಸಂಶೋಧನಾ ವಿಜ್ಞಾನಿಗಳ ಆಯ್ಕೆ ಸಮಿತಿಗಳ ಸದಸ್ಯರಾಗಿ ಹಾಗೂ ಸಮಿತಿಯ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿದ್ದಾರೆ. ಮೈಸೂರು ವಿಶ್ವವಿದ್ಯಾಲಯುದಲ್ಲಿ ಸೆನೆಟ್ ಸದಸ್ಯರಾಗಿ ಮತ್ತು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ ಮಂಡಳಿ ಅಧ್ಯಕ್ಷರಾಗಿ ಮತ್ತು ಶೈಕ್ಷಣಿಕ ಮಂಡಳಿ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ. ಹೊಸದಾಗಿ ಪರಿಚಯಿಸಿರುವ ಲ್ಯಾಂಡ್ ಗ್ರ್ಯಾಂಟ್ ಕಾಲೇಜು ಪದ್ಧತಿ ಪ್ರಕಾರ ಪಠ್ಯಕ್ರಮವನ್ನು ತ್ರೈಮಾಸಿಕ ಪರೀಕ್ಷೆ ಪದ್ಧತಿಯಲ್ಲಿ ಬೋಧಿಸುವ ಪ್ರಕ್ರಿಯೆಯಾ ಆರಂಭದ ಕಾಲದಲ್ಲಿ ಮಾರ್ಗದರ್ಶಕರಾಗಿದ್ದರು. ಅವರ ಪರಿಣಿತಿಯನ್ನು ಅನೇಕ ಖಾಸಗಿ ಸಂಘ ಸಂಸ್ಥೆಗಳು ಹಾಗೂ ಕೃಷಿ ಪರಿಕರಗಳ ಸಂಸ್ಥೆಗಳು ಸಹ ಉಪಯೋಗ ಮಾಡಿಕೊಂಡಿವೆ. ಅದರಲ್ಲಿಯೂ ವಿಶೇಷವಾಗಿ ಸಸ್ಯ ಸಂರಕ್ಷಣಾ ಕ್ಷೇತ್ರದಲ್ಲಿ ವಿವಿಧ ಹಂತಗಳಲ್ಲಿ ಅವರು ಸಲಹೆಗಾರರಾಗಿ ಕಾರ್ಯ ನಿರ್ವಹಿಸಿದ್ದಾರೆ.

ಭಾರತದ ಅನೇಕ ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಹಾಗೂ ಮೂಲ ವಿಜ್ಞಾನ ವಿಶ್ವವಿದ್ಯಾನಿಲಯುಗಳಲ್ಲಿ ಸ್ನಾತಕೋತ್ತರ ಮತ್ತು ಡಾಕ್ಟರೇಟ್ ಪದವಿಗಳ ಮೌಲ್ಯಮಾಪಕರಾಗಿ ಕಾರ್ಯ ನಿರ್ವಹಿಸಿರುತ್ತಾರೆ.

ಮೈಸೂರು ರಾಜ್ಯ ತೋಟಗಾರಿಕಾ ಇಲಾಖೆಯ 'ಲಾಲ್‌ಬಾಗ್' ಎಂಬ ಇಂಗ್ಲೀಷ್ ಜರ್ನಲ್ಲಿನ ಗೌರವಾನ್ವಿತ ಸಂಪಾದಕರಾಗಿ ಮತ್ತು 'ತೋಟಗಾರ' ಎಂಬ ಕನ್ನಡ ನಿಯತಕಾಲಿಕೆಗಳಿಗೆ 1983ರವರೆಗೆ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದರು.

ಇವರು ಕೇಂದ್ರ ಕಾಫೀ ಸಂಶೋಧನಾ ಕೇಂದ್ರದ ತಂತ್ರಜ್ಞಾನ ಪರಿಣತಿ ಸದಸ್ಯರಾಗಿ ಕೇಂದ್ರ ಹತ್ತಿ ಸಮಿತಿ, ಕೇಂದ್ರ ಹೊಗೆಸೊಪ್ಪು ಸಮಿತಿ, ಭಾರತೀಯ ಪ್ಲಾಂಟೇಶನ್ ಬೆಳೆಗಳ ಸಂಶೋಧನಾ ಸಂಸ್ಥೆ ಮುಂತಾದ ಸಂಸ್ಥೆಗಳ ಸಾಂದರ್ಭಿಕ ಕಾರ್ಯ ಯೋಜನೆಗಳಲ್ಲಿ ಸೇವೆ ಸಲ್ಲಿಸಿರುತ್ತಾರೆ.

ಅಸಾಧಾರಣ ಕೀಟಶಾಸ್ತ್ರಜ್ಞರಾಗಿ ಶಿಕ್ಷಣ ಪ್ರೇರಕರಾಗಿ ವಿದ್ಯಾರ್ಥಿಗಳಿಗೆ ಮತ್ತು ರೈತರಿಗೆ ಅತ್ಯಂತ ಸ್ಫೂರ್ತಿ ಪ್ರಿಯರಾಗಿ ಸುಮಾರು 5 ದಶಕಗಳ ಕಾಲ ನಿಸ್ವಾರ್ಥಸೇವೆ ಸಲ್ಲಿಸಿದ್ದಾರೆ ಡಾ. ಪುಟ್ಟರುದ್ರಯ್ಯನವರು. ಭಾರತೀಯ ಕೃಷಿ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆ ನೀಡಿರುವ ಇವರು ರಾಷ್ಟ್ರ ಮಟ್ಟದಲ್ಲಿ ಹಾಗೂ ಜಾಗತಿಕ ಮಟ್ಟದಲ್ಲಿ ಕರ್ನಾಟಕ ರಾಜ್ಯದಿಂದ ಒಬ್ಬ ಅತ್ಯುತ್ತಮ ಕೀಟಶಾಸ್ತ್ರಜ್ಞರೆಂದು ಪ್ರಖ್ಯಾತಿಹೊಂದಿದ್ದಾರೆ ಹಾಗೂ ಇವರನ್ನು ಕರ್ನಾಟಕದ ಕೀಟ ಪಿತಾಮಹ ಎಂದರೆ ತಪ್ಪಾಗಲಾರದು. ಅದು ಕರ್ನಾಟಕದ ಹೆಮ್ಮೆಯೇ ಸರಿ.

## 6. ಡಾ. ಎಂ.ಪುಟ್ಟರುದ್ರಯ್ಯನವರ ಬರಹಗಳು

ಡಾ. ಪುಟ್ಟರುದ್ರಯ್ಯನವರು ಪ್ರಖ್ಯಾತ ಕೀಟಶಾಸ್ತ್ರಜ್ಞರಾಗಿದ್ದಂತೆಯೇ ಕರ್ನಾಟಕ ರಾಜ್ಯದ ಕೃಷಿವಿಜ್ಞಾನ ಕ್ಷೇತ್ರಕ್ಕೆ ಬೋಧನೆ, ಸಂಶೋಧನೆ, ವಿಸ್ತರಣಾ ಘಟಕಗಳಿಗೆ ಮತ್ತು ವಿಶೇಷವಾಗಿ ರೈತರಿಗೆ ಸಲ್ಲಿಸಿದ ಸೇವಾ ಕೊಡುಗೆಯಷ್ಟೇ ಮೌಲಿಕವಾದ ಕೀಟ ವಿಜ್ಞಾನ ಸಾಹಿತ್ಯ ಹಾಗೂ ಕೃಷಿ ಸಾಹಿತ್ಯವನ್ನು ರಚಿಸಿದ್ದಾರೆ. ಡಾ. ಪುಟ್ಟರುದ್ರಯ್ಯನವರು ವೈಜ್ಞಾನಿಕ ಸಂಶೋಧನಾ ಲೇಖನಗಳ ಪ್ರಕಟಣೆಯಲ್ಲಿ ಅವರು ತಮ್ಮ ಜ್ಞಾನ ಶ್ರೀಮಂತಿಕೆಯನ್ನು ತೋರಿದ್ದಾರೆ. ಕೀಟಶಾಸ್ತ್ರದಲ್ಲಿ ಅವರಿಗಿದ್ದ ಆಸಕ್ತಿ, ಕುತೂಹಲ, ಅಭಿಮಾನ ಇವರು ಬರೆದ ಲೇಖನಗಳ ಪ್ರಕಟಣೆಯನ್ನು ವಿಶ್ಲೇಶಿಸಿದಾಗ ತಿಳಿಯುತ್ತದೆ. 1944ರಿಂದ 1979ರ ತನಕ ಕೀಟಶಾಸ್ತ್ರದಲ್ಲಿ ಕೀಟ ಪೀಡೆಗಳ ಹಾಗೂ ಕೀಟರಹಿತ ಪ್ರಾಣಿ ಪೀಡೆಗಳ ವಿಚಾರದಲ್ಲಿ ವೈವಿಧ್ಯ ಕೃಷಿ ಸಾಹಿತ್ಯ ಪ್ರಕಟಿಸಿದ್ದಾರೆ. ಸಂಶೋಧನಾ ಲೇಖನ, ಪುಸ್ತಕಗಳು, ಕಿರು ಹೊತ್ತಿಗೆಗಳು, ವಿಸ್ತರಣಾ ಲೇಖನಗಳು, ಹಾಗೂ ಕರಪತ್ರಗಳು ಮುಂತಾದ ಕೃಷಿ ಸಾಹಿತ್ಯ ಪ್ರಕಾರಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡು ಭಾಷೆಗಳಲ್ಲಿ ಕೃಷಿ ಮಾಡಿದ್ದಾರೆ. ಅನೇಕ ಸಂಶೋಧನಾ ಲೇಖನಗಳನ್ನು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಪ್ರಕಟಿಸಿದ್ದಾರೆ. ಇವರು ಒಟ್ಟು 150 ಸಂಶೋಧನಾ ಲೇಖನಗಳು, 200ಕ್ಕೂ ಹೆಚ್ಚು ಜನಪ್ರಿಯ ವಿಸ್ತರಣಾ ಲೇಖನಗಳನ್ನು ಪ್ರಕಟಿಸಿದ್ದಾರೆ. ಅವರು ಕನ್ನಡದಲ್ಲಿ ಒಟ್ಟು 24 ಕೃತಿಗಳನ್ನು ರಚಿಸಿದ್ದು ಅವುಗಳಲ್ಲಿ 23 ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದಿಂದ ಪ್ರಕಟವಾಗಿವೆ ಹಾಗೂ ಆ 24 ಕನ್ನಡ ಕೃತಿಗಳ ಒಟ್ಟು ಪುಟ ಸಂಖ್ಯೆ ಸುಮಾರು 6000 ಪುಟಗಳಷ್ಟಾಗುತ್ತದೆ. ಅದರಲ್ಲಿ 1977ರಲ್ಲಿ ಪ್ರಕಟವಾದ 'ಬೆಳೆ ಕೀಟಗಳು ಹಾಗೂ ಅವುಗಳ ಹತೋಟಿ' ಎನ್ನುವ ಒಂದೇ ಪುಸ್ತಕವು 1702 ಪುಟಗಳ ಬೃಹದ್ ಗ್ರಂಥವಾಗಿದೆ. ಇವುಗಳಲ್ಲದೆ ಹಲವಾರು ಲೇಖನಗಳನ್ನು ತಮ್ಮ ಸಹ ವಿಜ್ಞಾನಿಗಳಾದ ಶ್ರೀ ಅಪ್ಪಣ್ಣ, ಡಾ. ಜಿ.ಪಿ.ಚನ್ನಬಸವಣ್ಣ, ಬಿ.ಎಮ್, ಮಹೇಶ್ವರಯ್ಯ, ಶೇಷಗಿರಿರಾವ್, ಬಿ.ಕೃಷ್ಣಮೂರ್ತಿ, ಡಾ.ಕೆ.ಎಸ್.ಎಸ್.ಶಾಸ್ತ್ರಿ ಮತ್ತು ಡಾ. ಎಸ್.ಉಸ್ಮಾನ್ ಅವರೊಂದಿಗೂ ಸಹ ಲೇಖಕರಾಗಿ ಪ್ರಕಟಿಸಿದ್ದಾರೆ.

ಅಂದು ವಿಜ್ಞಾನ ಸಾಹಿತ್ಯವೆಂದರೆ ಇಂಗ್ಲಿಷಿನಲ್ಲಿ ಪ್ರಕಟವಾಗಬೇಕೆಂಬ ಮನೋಭಾವವಿತ್ತು. ಅವರು ತಮ್ಮ ಎಲ್ಲಾ ಸಂಶೋಧನಾ ಲೇಖನಗಳನ್ನು ಇಂಗ್ಲೀಷಿನಲ್ಲಿ ವಿವಿಧ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಿಜ್ಞಾನ ಪತ್ರಿಕೆಗಳಲ್ಲಿ ಪ್ರಕಟಿಸಿದ್ದರೂ ನೆಮ್ಮದಿ ಇರಲಿಲ್ಲ, ಈ ಪ್ರಕಟಣೆಗಳು ಸರ್ಕಾರದಲ್ಲಿ ಉನ್ನತ ಸ್ಥಾನಗಳಿಸಿದ್ದರೂ ಸಹ ಈ ಪ್ರಕಟಣೆಗಳು ಸಮಾಧಾನ ತಂದಿರಲಿಲ್ಲ, ಕಾರಣ ನಮ್ಮ ರೈತರಿಗೆ ಯಾವ ರೀತಿ

ಉಪಯೋಗಕ್ಕೆ ಬರುತ್ತವೆಯೆಂಬ ಪ್ರಶ್ನೆ ಅವರಿಗೆ ಬಹುವಾಗಿ ಕಾಡುತ್ತಿತ್ತು. ವಿಜ್ಞಾನ ಸಾಹಿತ್ಯ ಅದರಲ್ಲೂ ಕೃಷಿ ವಿಜ್ಞಾನ ಸಾಹಿತ್ಯ ರೈತರಿಗೆ ಮತ್ತು ಗ್ರಾಮೀಣ ಜನರಿಗೆ ತಲುಪಬೇಕೆನ್ನುವ ದೃಷ್ಟಿಯಿಂದ ಕೃಷಿವಿಜ್ಞಾನ ಸಾಹಿತ್ಯ ಕನ್ನಡದಲ್ಲಿ ಮೂಡಿಬರುವುದಕ್ಕೆ ಕಾರಣಕರ್ತರಾಗಿ ಅವರು ಅನೇಕ ಪುಸ್ತಕಗಳನ್ನು, ಕಿರುಹೊತ್ತಿಗೆಗಳನ್ನು, ವಿಸ್ತರಣಾ ಲೇಖನಗಳನ್ನು ಹಾಗೂ ಕೆಲವು ಕರಪತ್ರಗಳನ್ನು ಕನ್ನಡದಲ್ಲಿಯೇ ಬರೆದು ಪ್ರಕಟಿಸಿದರು. ಕೃಷಿಕೀಟಶಾಸ್ತ್ರ ಹಾಗೂ ಸಸ್ಯ ಸಂರಕ್ಷಣೆ ಕುರಿತಂತೆ ಡಾ. ಪುಟ್ಟರುದ್ರಯ್ಯನವರ ಸಾಹಿತ್ಯ ಕೃಷಿ ಕೀಟಶಾಸ್ತ್ರಕ್ಕೆ ನೀಡಿರುವ ಅಪಾರ ಕೊಡುಗೆಯಾಗಿದೆ.

ಡಾ. ಪುಟ್ಟರುದ್ರಯ್ಯನವರು ಕೃಷಿ ಇಲಾಖೆಯಲ್ಲಿ ಕೀಟಶಾಸ್ತ್ರಜ್ಞರಾಗಿದ್ದಾಗ ಅವರೇ ಸ್ವತಃ ಹಲವು ಬೆಳೆಗಳ ಕ್ಷೇತ್ರಗಳಿಗೆ ಭೇಟಿ ನೀಡಿ ಕೀಟಗಳ ಹಾವಳಿ ನಷ್ಟದ ಚಿಹ್ನೆಗಳನ್ನು ಗುರುತಿಸಿ, ಸೂಕ್ತ ನಿವಾರಣೋಪಾಯಗಳನ್ನು ರೈತರಿಗೆ ತಿಳಿಸುತ್ತಿದ್ದರು ಹಾಗೂ ಈ ರೀತಿಯ ಸಮಸ್ಯೆಗಳ ಬಗ್ಗೆ ತಕ್ಷಣ ಲೇಖನವನ್ನು ಬರೆದು ದಿನ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು. ಅಲ್ಲದೆ ಕೃಷಿ ಇಲಾಖೆಯ ಕರಪತ್ರದ ಮುಖಾಂತರ ಹೆಚ್ಚಿನ ರೈತರಿಗೆ ಆ ವಿಚಾರ ಮುಟ್ಟುವಂತೆ ಸೂಕ್ತಕ್ರಮ ತೆಗೆದುಕೊಳ್ಳುವಂತೆ ಮಾಹಿತಿ ಒದಗಿಸುತ್ತಿದ್ದರು.

1949ರಲ್ಲಿಯೇ ಡಾ. ಪುಟ್ಟರುದ್ರಯ್ಯನವರು ಅಂದಿನ ಕೃಷಿ ಇಲಾಖೆಯ ನಿರ್ದೇಶಕರಾದ ಶ್ರೀ ಕೆ.ಎಚ್.ಶ್ರೀನಿವಾಸನ್‌ರವರೊಂದಿಗೆ 'ಬೆಳೆಗಳಿಗೆ ಬೀಳುವ ಕೀಟಗಳು' ಎಂಬ ಪುಸ್ತಕವನ್ನು ರಚಿಸಿದ್ದಾರೆ. ಆನಂತರ ಅನೇಕ ಪುಸ್ತಕಗಳು ಮತ್ತು ಕಿರುಹೊತ್ತಿಗೆಳನ್ನು ಪ್ರಕಟಿಸಿದರು. ಡಾ. ಪುಟ್ಟರುದ್ರಯ್ಯನವರ ಗ್ರಂಥಗಳು ಇಂದಿಗೂ ಆಕರ ಗ್ರಂಥಗಳಾಗಿ ಅವುಗಳದೇ ಆದ ಮಹತ್ವವನ್ನು ಹೊಂದಿವೆ. ಸರ್ಕಾರದ ಕೀಟಶಾಸ್ತ್ರಜ್ಞರಾಗಿ ಸಸ್ಯ ಸಂರಕ್ಷಣೆಗಳಲ್ಲಿ ಮೈಸೂರು ವ್ಯವಸಾಯ ಇಲಾಖೆಯಿಂದ ಅನೇಕ ಕರಪತ್ರಗಳನ್ನು ಸಹ ಪ್ರಕಟಿಸಿದ್ದಾರೆ. ಸಹೋದ್ಯೋಗಿಯಾಗಿದ್ದ ಡಾ. ಎಸ್.ಉಸ್ಮಾನ್‌ರವರ ಜೊತೆಯಲ್ಲಿ 'Insect Pests of Horticultural Crops' ಎಂಬ ಕಿರುಹೊತ್ತಿಗೆಯನ್ನು ಪ್ರಕಟಿಸಿದ್ದಾರೆ. ಈ ಕೃತಿ ಇಡೀ ತೋಟಗಾರಿಕಾ ಪ್ರಕಟಣೆಯಲ್ಲಿಯೇ ಕೀಟಪೀಡೆಗಳ ಪ್ರಾಮುಖ್ಯತೆಯ ಬಗ್ಗೆ ಪ್ರಕಟವಾದ ಮೊದಲನೇ ಪ್ರಕಟಣೆಯಾಗಿದೆ. ಈ ಕಿರು ಹೊತ್ತಿಗೆಯಲ್ಲಿ ಅನೇಕ ಚಿತ್ರಗಳನ್ನು ಬರೆದು ಕೊಟ್ಟವರು ಬೆಂಗಳೂರಿನ ಲಾಲಬಾಗ್‌ನಲ್ಲಿ ಕಲಾಕಾರರಾಗಿದ್ದ ಶ್ರೀ ವಿಷ್ಣುದಾಸ ರಾಮದಾಸರವರು.

ಕೃಷಿಗೆ ಸಂಬಂಧಿಸಿದ ಅವರ ಹಲವಾರು ಲೇಖನಗಳನ್ನು 'ಪ್ರಬುದ್ಧ ಕರ್ನಾಟಕ'ವೆಂಬ ಮಾಸಿಕ ಪತ್ರಿಕೆಯಲ್ಲಿ ಪ್ರಕಟಣೆಗೊಂಡಿವೆ. ಆ ಪತ್ರಿಕೆಯ ಅಂದಿನ ಸಂಪಾದಕರಾದ ಶ್ರೀ.ಕೆ.ಬಿ.ವೀರಪ್ಪನವರು ಇವರಿಂದ ಒತ್ತಾಯ ಮಾಡಿ ಕೃಷಿ ಕುರಿತ ಲೇಖನಗಳನ್ನು ಬರೆಯಿಸಿ ಪ್ರಕಟಿಸುತ್ತಿದ್ದರು. ಮೈಸೂರು ವಿಶ್ವವಿದ್ಯಾಲಯದ 'ಕನ್ನಡ ವಿಶ್ವಕೋಶ'ಕ್ಕಾಗಿ ಕೃಷಿವಿಜ್ಞಾನ ವಿಷಯದ ಹಲವಾರು ಲೇಖನಗಳನ್ನು ರಚಿಸಿಕೊಟ್ಟು ನೆರವಾಗಿದ್ದಾರೆ.

ಡಾ.ಪುಟ್ಟರುದ್ರಯ್ಯರವರು ಕನ್ನಡದಲ್ಲಿ ಬರೆದ ಎಲ್ಲಾ ಪುಸ್ತಕಗಳ ಕೈಬರಹದ ಒರಟು ಪ್ರತಿಯನ್ನು ಶುದ್ಧ ಪ್ರತಿ ಮಾಡುತ್ತಿದ್ದವರು ಕೀಟಶಾಸ್ತ್ರ ವಿಭಾಗದ ಪ್ರಯೋಗಶಾಲೆಯ ಸಹಾಯಕರಾದ ಶ್ರೀ ಜಾದವ್‌ರವರು. ಇದೇ ರೀತಿಯಲ್ಲಿ ಕೀಟಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದ ಶ್ರೀ ಬಿ.ಕೆ.ರಾಜಗೋಪಾಲ್‌ರವರು ಸಹ ಇವರು ಬರೆದ ಹಸ್ತಪ್ರತಿಯನ್ನು ಅಚ್ಚುಕಟ್ಟಾಗಿ ಹೊಂದಿಸಿ, ಸೂಕ್ತ ಚಿತ್ರಗಳನ್ನು ಸಂಬಂಧಪಟ್ಟ ಅಧ್ಯಾಯಗಳಿಗೆ ಜೋಡಿಸುವಂತಹ ಕಾರ್ಯವನ್ನು ನಿರ್ವಹಿಸುತ್ತಿದ್ದರು.

ಕೀಟಶಾಸ್ತ್ರ ಕುರಿತಾದ ಇವರ ಬಹುತೇಕ ಬರಹಗಳಿಗೆ ಉತ್ತಮ ಚಿತ್ರಗಳನ್ನು ರಚಿಸಿ ಕೊಟ್ಟವರು ಅಂದಿನ ಕೃಷಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಅತ್ಯುನ್ನತ ಕಲಾಕಾರರೆಂದು ಖ್ಯಾತಿ ಪಡೆದಿದ್ದ ಶ್ರೀ ರಘುರಾಮ್ ಪಿಳ್ಳೆ ಮತ್ತು ನಂಜುಂಡಪ್ಪನವರು. ಇವರು ಬರೆದ ಕೀಟಗಳ ಅನೇಕ ಚಿತ್ರಗಳನ್ನು ಇತರರು ಇಂದಿಗೂ ಬಳಸಿಕೊಳ್ಳುತ್ತಿದ್ದಾರೆ. ಇವರಿಗೆ ಬೆರಳಚ್ಚುಗಾರರಾಗಿ ಶ್ರೀ ಎಚ್. ಹನುಮಂತರಾವರವರು ಸಹಾಯ ಮಾಡಿದ್ದಾರೆ.

ಅವರ ಕೊನೆಯ ಪ್ರಕಟಣೆ ಇಂಗ್ಲೀಷಿನ 'A Guide for Cultivation and Protection of Important Crops' ಎಂಬ ಪುಸ್ತಕ ಹಾಗೂ ಅದನ್ನು ಎಸ್.ವಿ.ರಂಗಸ್ವಾಮಿ ಅಂಡ್ ಕಂಪೆನಿಯವರು ಪ್ರಕಟಿಸಿದ್ದು ಅದನ್ನು 29ನೇ ಆಗಸ್ಟ್ 1983ರಂದು ಆಗಿನ ಸನ್ಮಾನ್ಯ ಕೃಷಿ ಸಚಿವರಾಗಿದ್ದ ಶ್ರೀ ಬಿ.ಎಲ್.ಗೌಡರವರು ಬಿಡುಗಡೆ ಮಾಡಿದರು. ಹೆಚ್ಚಿನ ಬೇಡಿಕೆಯಿಂದಾಗಿ ಈ ಪುಸ್ತಕ ಕೆಲವೇ ದಿನಗಳಲ್ಲಿ ಮರು ಮುದ್ರಣ ಕಂಡಿತು.

ಈ ಪುಸ್ತಕ ರಚನೆಯ ಸಂದರ್ಭದಲ್ಲಿ ಸಂಗ್ರಹಿಸಲಾದ ಡಾ. ಪುಟ್ಟರುದ್ರಯ್ಯನವರ ಕೆಲವು ಪ್ರಮುಖ ಪುಸ್ತಕಗಳ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ. ಈ ಪಟ್ಟಿಯು ಪರಿಪೂರ್ಣವಲ್ಲ ಹಾಗೂ ನಮ್ಮ ಗಮನಕ್ಕೆ ಬಾರದಿರುವ ಅವರ ಇನ್ನೂ ಹಲವಾರು ಪ್ರಕಟಣೆಗಳು ಇರಬಹುದು.

## 7. ಡಾ. ಪುಟ್ಟರುದ್ರಯ್ಯನವರ ಹೆಸರಿನಲ್ಲಿ ಕೀಟ ಪ್ರಭೇದ

ಡಾ. ಪುಟ್ಟರುದ್ರಯ್ಯನವರು ರೈತ ಕುಟುಂಬದಲ್ಲಿ ಹುಟ್ಟಿ, ಗ್ರಾಮೀಣ ಪ್ರದೇಶದಲ್ಲಿ ಬೆಳೆದು, ಕೃಷಿ ವಿಜ್ಞಾನದ ಜ್ಞಾನ ಸಂಪಾದನೆಗೆ ಹಂಬಲಿಸಿದವರು. ಕೃಷಿ ವಿಜ್ಞಾನದ ವಿದ್ಯಾರ್ಥಿಯಾದಾಗಿನಿಂದ ಕೀಟಶಾಸ್ತ್ರದಲ್ಲಿ ಆಸಕ್ತಿ ತಳೆದವರು. ವಿದ್ಯಾರ್ಥಿ ದೆಸೆಯಿಂದ ಕೀಟಜ್ಞಾನವನ್ನು ವ್ಯವಸ್ಥಿತವಾದ ರೀತಿಯಲ್ಲಿ ಸಂಪಾದಿಸಿಕೊಂಡ ಇವರು ಮುಂದೆ ಪದವಿ ಪೂರೈಸಿದನಂತರ ರಾಜ್ಯ ಕೃಷಿ ಇಲಾಖೆಯಲ್ಲಿ ಕಿರಿಯ ಕೀಟತಜ್ಞರಾಗಿ ಪ್ರಾಮಾಣಿಕ ಸೇವೆ, ಅಧ್ಯಯನ, ಅಧ್ಯಾಪನಗಳಿಂದ ಸೂಕ್ತ ಪರಿಶೋಧನೆಗಳನ್ನು ಹಮ್ಮಿಕೊಂಡು ಆ ಕ್ಷೇತ್ರದಲ್ಲಿ ಧ್ರುವತಾರೆಯಾಗಿ ನಿಂತವರು.

ಇಡೀ ಭಾರತದಲ್ಲಿಯೇ ಒಬ್ಬ ಉತ್ತಮ ಕೀಟಶಾಸ್ತ್ರಜ್ಞರೆಂದು ಗುರುತಿಸಿಕೊಂಡಿದ್ದ ಡಾ.ಪುಟ್ಟರುದ್ರಯ್ಯರವರು ಸಸ್ಯ ಸಂರಕ್ಷಣಾ ಕ್ಷೇತ್ರದಲ್ಲಿ ಸಂಶೋಧನೆ ಹಾಗೂ ವಿಸ್ತರಣೆಯಲ್ಲಿ ಅತ್ಯುತ್ತಮ ವಿಜ್ಞಾನಿ ಎಂಬ ಕೀರ್ತಿಗೆ ಭಾಜನರಾದವರು. ಅವರ ಅನೇಕ ಸಂಶೋಧನಾ ಲೇಖನಗಳ ಪ್ರಕಟಣೆಯ ಮುಖಾಂತರ ಭಾರತೀಯ ಕೃಷಿ ಕೀಟಶಾಸ್ತ್ರಜ್ಞರಿಗೆ ಚಿರ ಪರಿಚಿತರು. ಡಾ. ಪುಟ್ಟರುದ್ರಯ್ಯರವರು ಕೀಟಪೀಡೆ ನಿಯಂತ್ರಣದ ಕ್ರಮಗಳಲ್ಲಿ ಹಾಗೂ ಜೈವಿಕ ಪೀಡೆ ನಿಯಂತ್ರಣ ಕ್ರಮದಲ್ಲಿ ವಿಶೇಷವಾಗಿ ಕೀಟ ಪರೋಪಜೀವಿಗಳು ಮತ್ತು ಪರಭಕ್ಷಕಗಳ ಕುರಿತು ಅಧ್ಯಯನ ಕೈಗೊಂಡವರು. ಯಾವುದೇ ಕೀಟಪೀಡೆಗಳನ್ನು ನಿಯಂತ್ರಿಸಲು ಪರೋಪಜೀವಿಗಳು ಮತ್ತು ಪರಭಕ್ಷಕಗಳಿಂದ ಮಾತ್ರ ಸಾಧ್ಯವೆಂಬಂತೆ ತಮ್ಮ ವಾದವನ್ನು ಸಾಂದರ್ಭಿಕವಾಗಿ ಮಂಡಿಸುತ್ತಿದ್ದರು.

*ಆಕ್ಸಿನೊಸ್ಕಿಮ್ನಸ್* ಪಂಗಡದಲ್ಲಿನ ಕೊಲಿಯಾಪ್ಟೆರಾ ಗಣದ ಕಾಕ್ಸಿನೆಲ್ಲಿಡಿ ಕುಟುಂಬಕ್ಕೆ ಸೇರಿದ ಪರಭಕ್ಷಕ ಕೀಟಗಳ ಗುಂಪಿಗೆ ಸೇರಿದ ಕೀಟವನ್ನು ಮೊದಲ ಬಾರಿಗೆ ಜಪಾನಿನ ಕಾಮಿಯ ಎಂಬ ವಿಜ್ಞಾನಿಯು 1963ರಲ್ಲಿ ಗುರುತಿಸಿದ್ದರು. ಕೀಟ ವರ್ಗೀಕರಣ ಶಾಸ್ತ್ರಜ್ಞರು ಒಂದು ಹೊಸ ಪ್ರಭೇದವನ್ನು ವರ್ಣಿಸುವ ಮೊದಲು ಆ ಗುಂಪಿನ ಪ್ರಭೇದವನ್ನು ಪರೀಕ್ಷಿಸಿ ದಕ್ಷಿಣ ಭಾರತದಿಂದ ಬಂದಿರುವ ಕೀಟ ನಮೂನೆಗಳನ್ನು ಪರಿಶೀಲಿಸುವಾಗ ಹೊಲೊ ಮತ್ತು ಪ್ಯಾರಾಟೈಪ್‌ಗಳನ್ನು ಪರೀಕ್ಷಿಸಿ ನಂತರ ಹೋಲಿಕೆ ವ್ಯತ್ಯಾಸಗಳನ್ನು ಅಧ್ಯಯನ ಮಾಡುತ್ತಾರೆ. ತಮಿಳುನಾಡಿನ ಕೊಯಮತ್ತೂರಿನಿಂದ ಈ ಕೀಟಗುಂಪಿನ ಪ್ಯಾರಾಟೈಪನ್ನು ಡಾ.ಕೆ.ಆರ್.ಮೋಹನರಾವ್‌ರವರು 1953ರಲ್ಲಿ ಬಿಳಿನೊಣಗಳ ಪರಭಕ್ಷಕವೆಂದು ವರದಿ ಮಾಡಿದ್ದರು. ಡಾ.ಪುಟ್ಟರುದ್ರಯ್ಯನವರು ಸಹ ಪ್ಯಾರಾಟೈಪ್ ಮಾದರಿಗಳನ್ನು ಸಂಗ್ರಹಿಸಿ ನಿಂಬೆ, ದಾಳಿಂಬೆ ಹಾಗೂ *ಫಿಲಾಂತಸ್ ಅಸಿಡಸ್* ಎಂಬ ಸಸ್ಯಗಳ ಬಿಳಿನೊಣಗಳ ಪರಭಕ್ಷಕವೆಂದು ವರದಿ ಮಾಡಿದರು.

Bull. syst. Zool. Calcutta, Vol. 1, No. 1, January, 1965

## A NEW SPECIES OF THE GENUS *AXINOSCYMNUS* KAMIYA (COLEOPTERA: COCCINELLIDAE) FEEDING ON WHITE-FLIES (HOMOPTERA: ALECRODIDAE) IN INDIA

*By* A. P. Kapur and (Miss) S. Munshi

*Zoological Survey of India, Calcutta*


The genus *Axinoscymnus* Kamiya (1963), recently described from the Island of Amami-Oshima, off Japan, is for the first time being recorded from India with the following species described as new to science.

### Axinoscymnus puttarudriahi sp. n.

Body small, less than 2 mm. long, obovate, moderately convex (Text-fig. 1, A); pubescence grey, rather long and sparse. Head light brown, eyes dark grey; scutellum brown to piceous; elytra for the most part dark brown to piceous but each with a discal, rather large, oval light brown spot. Underside with the prosternum, legs, and apical three abdominal sternites light brown; the meso- and metasternum, the proximal greater part of elytral epipleurae and the basal three abdominal sternites dark brown to fuscous.

*Head* slightly longer than wide, viewed from the front (Text-fig. 1, B), the interocular space in the middle appears slightly wider than the eye; punctation fine; pubescence very short on the eyes, longer and sparser on the frons, generally directed towards the longitudinal median line; frons distinctly produced forward beyond the level of the eyes; labrum also quite prominent, nearly twice as broad as long; antennae (Text-fig. 1, C) eleven-segmented, the basal two stout, 3rd-5th slender, nearly twice as long as wide, 6th slightly shorter than the 5th; 7th-10th segments widening gradually and forming a club with the apical 11th segment which is subrounded; mandibles bifid at the apex, maxillary palpi securiform. *Pronotum* distinctly narrower than the base of the elytra, with the sides nearly straight, and with the base and sides narrowly margined; punctation and pubescence nearly as fine and sparse as on the frons; pubescence directed rather anteromedially. *Scutellum* relatively prominent, equilaterally triangular, with only a couple of fine punctures and a few short hair. *Elytra* longer than the width of the two together, gradually narrowed posteriorly, moderately convex in the discal area and rather vertically inclined laterally especially from the humeral callus to the middle of the elytral length; distinctly margined laterally, humeral calli prominent; punctation moderately fine, but impressed and relatively sparse, the interspaces smooth;

6 BULL. SYST. ZOOL., VOL. 1, NO. 1, JANUARY, 1965




TEXT-FIG. 1 — *Axinoscymnus puttarudriahi*, sp. n. — A: Adult beetle showing body outline, colour-pattern, etc. B: Head, front view. C: Left antenna. D: Prosternum. E: Leg with three-segmented tarsi. F: Tarsal claw. G: Sipho. H: Lateral view of male genitalia without sipho. I: The same, ventral view (*ml*, median lobe). J-K: Spermatheca, lateral and front views respectively (*t*, teeth-like projection). [1 mm. scale for Fig. A; 0·3 mm. scale for B; 0·2 mm. scale for C, D, E; 0·1 mm. (a) scale for G, J, K; 0·1 mm. (b) scale for H and I.]

**ಜನವರಿ 1965ರ Bulletin of Systematic Zoology ಸಂ.1, ಸಂಚಿಕೆ 1ರಲ್ಲಿ ಪ್ರಕಟವಾದ ಡಾ. ಕಪೂರ್ ಮತ್ತು ಡಾ. ಮುನ್ಷಿಯವರ ಸಂಶೋಧನಾ ಪ್ರಬಂಧ ಹಾಗೂ ಅದರಲ್ಲಿನ ಕೀಟ ವರ್ಗೀಕರಣ ವಿವರಣೆ**

ಆದರೆ 1963ರಲ್ಲಿ ಡಾ. ಜಿ.ಕೆ.ವೀರೇಶ್‌ರವರು ಈ ಪಂಗಡದ ಹೊಲೊಟೈಪನ್ನು ಬಿಳಿ ನೊಣಗಳ ಮೊಟ್ಟೆಗಳ ಮೇಲೆ ಪರಭಕ್ಷಕವೆಂದು ಬೆಂಗಳೂರಿನಿಂದ ವರದಿ ಮಾಡಿದರು.

ಈ ಎಲ್ಲಾ ಕೀಟ ನಮೂನೆಗಳನ್ನು ಕೊಲ್ಕತ್ತಾದಲ್ಲಿರುವ ಭಾರತೀಯ ಪ್ರಾಣಿ ಸರ್ವೇಕ್ಷಣಾ (Zoological Survey of India) ಸಂಸ್ಥೆಯಲ್ಲಿ ಸಂಗ್ರಹಿಸಿ ಪರಿಶೀಲಿಸಿದ ನಂತರ ಈ ವರದಿಗಳನ್ನು ಆಧಾರವಾಗಿಟ್ಟುಕೊಂಡು ಕೀಟವಿಜ್ಞಾನಿಗಳು ಸಂಗ್ರಹಿಸಿದ ಕೀಟನಮೂನೆಗಳ ವರ್ಣಾತ್ಮಕ ಆಧಾರದ ಮೇಲೆ ಅದರ ಜೀವನ ಚರಿತ್ರೆ ಮತ್ತು ಶರೀರದ ಮಾರ್ಪಾಟು ಸ್ವಲ್ಪಮಟ್ಟಿಗೆ *ಆ. ಬೆನೆಫಿಕಸ್* ಹೋಲುತ್ತಿದ್ದರೂ ಸಹ ಕೆಲವು ಶರೀರದ ಒಳ ಮತ್ತು ಹೊರ ಮಾರ್ಪಾಟು ಹಾಗೂ ಬಿಳಿನೊಣಗಳ ಆಹಾರ ಸಸ್ಯಗಳಲ್ಲಿ ವ್ಯತ್ಯಾಸವನ್ನು ಪರೀಕ್ಷಿಸಿ ಆ ಕೀಟಕ್ಕೆ ಡಾ. ಪುಟ್ಟರುದ್ರಯ್ಯನವರಿಗೆ ಗೌರವ ಸೂಚಿಸುವ ಸಲುವಾಗಿ *ಆಕ್ಸಿನೊಸ್ಕಿಮ್ನಸ್ ಪುಟ್ಟರುದ್ರಯಿ* ಎಂಬ ಹೆಸರಿಡಲಾಯಿತು. ಆ ಪ್ರಭೇದವು ದಾಳಿಂಬೆ, ಸೀಬೆ ಮತ್ತು *ಫಿಲಾಂತಸ್ ಅಸಿಡಸ್* ಸಸ್ಯಗಳ ಬಿಳಿನೊಣಗಳ ಮೊಟ್ಟೆ ಮತ್ತು ಅಪ್ಸರೆಗಳನ್ನು ತಿನ್ನುವ ಪರಭಕ್ಷಕವಾಗಿದೆ.

ಭಾರತೀಯ ಪ್ರಾಣಿ ಸರ್ವೇಕ್ಷಣಾ ಸಂಸ್ಥೆಯ ಡಾ. ಕಪೂರ್ ಮತ್ತು ಡಾ. ಮುನ್ಷಿ ಎಂಬ ಕೀಟ ವರ್ಗೀಕರಣ ಶಾಸ್ತ್ರಜ್ಞರು ಈ ಗುಂಪಿನ ಕೀಟಗಳ ನಮೂನೆಗಳನ್ನು ವಿಶ್ಲೇಷಿಸಿ ಮತ್ತು ವರ್ಗೀಕರಿಸಿ ಇದೇ ಪಂಗಡದ ಇತರ ಪ್ರಭೇದಗಳಲ್ಲಿನ ವ್ಯತ್ಯಾಸಗಳನ್ನು ಗುರುತಿಸಿ ಈ ಹೊಸ ಪ್ರಭೇದವನ್ನು ಸಂಪೂರ್ಣವಾಗಿ ವರ್ಣಿಸಿ ಎಲ್ಲಾ ವಿವರಣೆಯನ್ನೊಳಗೊಂಡಿರುವ ಲೇಖನವನ್ನು ಹೆಸರಾಂತ ಪ್ರಾಣಿಶಾಸ್ತ್ರ ವರ್ಗೀಕರಣದ ಸಂಶೋಧನಾ ನಿಯತಕಾಲಿಕೆಯಾದ Bulletin of Systematic Zoology Vol.1 No.1ರ ಜನವರಿ 1965ರ ಸಂಚಿಕೆಯಲ್ಲಿ ಪ್ರಕಟಿಸಿದರು. ಇತರ ಸಂಶೋಧಕರು ಕಳುಹಿಸಿದಂತಹ ಕೀಟ ನಮೂನೆಗಳನ್ನು ವಿಶ್ಲೇಷಿಸಿ, ವರ್ಗೀಕರಿಸಿ, ಗುರುತಿಸುವುದು ಭಾರತೀಯ ಪ್ರಾಣಿ ಸರ್ವೇಕ್ಷಣಾ ಸಂಸ್ಥೆಯ ಜವಾಬ್ದಾರಿಯಾಗಿರುತ್ತದೆ.

ಡಾ.ಪುಟ್ಟರುದ್ರಯ್ಯನವರ ಕೀಟಜ್ಞಾನ ಪ್ರತಿಭೆ, ನಿಷ್ಠೆ ಹಾಗೂ ನಿಸ್ವಾರ್ಥ ಸೇವೆಯನ್ನು ಗುರುತಿಸಿ ಇವರ ಹೆಸರಿನಲ್ಲಿ ಒಂದು ಗುಲಗಂಜಿ ಚಿಪ್ಪಿನ ಹುಳುವಿನ ರಸ ಹೀರುವ ಬಿಳಿನೊಣಗಳ ಪರಭಕ್ಷಕ ಕೀಟದ ಪ್ರಭೇದಕ್ಕೆ *ಆಕ್ಸಿನೊಸ್ಕಿಮ್ನಸ್ ಪುಟ್ಟರುದ್ರಯಿ* ಎಂಬ ಹೆಸರನ್ನು ನೀಡಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಇವರ ಹೆಸರು ಚಿರಕಾಲ ಉಳಿಯುವಂತೆ ಮಾಡಲಾಗಿದೆ.

## 8. ಡಾ. ಪುಟ್ಟರುದ್ರಯ್ಯನವರ ಸ್ಮಾರಕ ದತ್ತಿ

ಡಾ.ಪುಟ್ಟರುದ್ರಯ್ಯನವರು ರಾಜ್ಯದಲ್ಲಿ ಸಸ್ಯ ಸಂರಕ್ಷಣಾ ಅಧಿಕಾರಿಗಳಾದ ನಂತರ ಹೆಬ್ಬಾಳದ ಕೃಷಿ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಬೆಂಗಳೂರಿನಲ್ಲಿ ಕೃಷಿ ವಿಶ್ವವಿದ್ಯಾಲಯ ಪ್ರಾರಂಭವಾದ ಮೇಲೆ ಕೃಷಿ ಕೀಟಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾಗಿ ಹಾಗೂ ಕೃಷಿ ಕಾಲೇಜಿನ ಶಿಕ್ಷಣ ನಿರ್ದೇಶಕರಾಗಿ 1971ರಲ್ಲಿ ನಿವೃತ್ತಿ ಹೊಂದಿದರು. ತಮ್ಮ ವೃತ್ತಿಗೆ ಯಾವುದೇ ರೀತಿಯ ಚ್ಯುತಿಬಾರದ ಹಾಗೆ ಮತ್ತು ಪ್ರಾಮಾಣಿಕತೆಯಿಂದ ಶಿಕ್ಷಣ ಮತ್ತು ಸಂಶೋಧನಾ ಕ್ಷೇತ್ರಗಳಲ್ಲದೆ ವಿಸ್ತರಣಾ ಕಾರ್ಯಕರ್ತರಾಗಿಯೂ ಹಾಗೂ ದಕ್ಷ ಆಡಳಿತಗಾರರಾಗಿಯೂ ನಿಷ್ಠೆಯಿಂದ ಕಾರ್ಯ ನಿರ್ವಹಿಸಿದ್ದಾರೆ. ಇವರಿಂದ ರಾಜ್ಯದ ಕೃಷಿಕರಿಗೆ ದೊರಕಿರುವ ಮಾಹಿತಿ ಮತ್ತು ಕೃಷಿ ಸಂಶೋಧನಾಧಾರಿತ ಫಲಿತಾಂಶಗಳೇ ಸಾಕ್ಷಿ. ಇದಲ್ಲದೇ ಸಸ್ಯ ಸಂರಕ್ಷಣಾ ಕ್ಷೇತ್ರದಲ್ಲಿ ನೂರಾರು ಜನ ಕೀಟ ವಿಜ್ಞಾನಿಗಳ ತಂಡವನ್ನೇ ತಯಾರು ಮಾಡಿದ್ದಾರೆ.

ಹೆಬ್ಬಾಳದ ಕೃಷಿ ಕಾಲೇಜು, ಸರ್ಕಾರದ ನಿಯಂತ್ರಣದಲ್ಲಿರುವಾಗಲೇ ಡಾ. ಪುಟ್ಟರುದ್ರಯ್ಯನವರು ಹಿಂದಿನ ಮೈಸೂರು ವ್ಯವಸಾಯ ಇಲಾಖೆಯಿಂದ ಕೀಟಶಾಸ್ತ್ರದಲ್ಲಿ ಉಪನ್ಯಾಸ ಮಾಡಲು ನಿಯತವಾಗಿ ಭೇಟಿ ನೀಡುತ್ತಿದ್ದರು. ಹೆಬ್ಬಾಳ ಕೃಷಿ ಕಾಲೇಜಿನಲ್ಲಿ ಅಧ್ಯಾಪಕ ಸೇವೆಯಿಂದ ಕೃಷಿ ವಿಶ್ವವಿದ್ಯಾಲಯ ಪ್ರಾರಂಭವಾದ ಮೇಲೆ ಕೃಷಿ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ನಿರ್ದೇಶಕರಾಗಿ ನಿವೃತ್ತಿಯಾದ ಮೇಲೂ ಸಹ ಕೀಟಶಾಸ್ತ್ರ ಹಾಗೂ ರೈತರ ಸೇವೆಯನ್ನು ಮುಂದುವರೆಸಿದರು. ಕೃಷಿ ಇಲಾಖೆ ಹಾಗೂ ಕೃಷಿ ವಿಶ್ವವಿದ್ಯಾನಿಲಯಕ್ಕೆ ಇವರ ಸಕಾಲಿಕ ಸೇವಾ ಕೊಡುಗೆ ಸದಾ ಸ್ಮರಣೀಯವಾದದ್ದು. ಅವರ ಸ್ಮರಣೆ ಅವರ ಆಸಕ್ತಿ ಕ್ಷೇತ್ರದೊಂದಿಗೆ ನಿರಂತರವಾಗಿರಲೆಂದು ಡಾ. ಪುಟ್ಟರುದ್ರಯ್ಯನವರ ವಿದ್ಯಾರ್ಥಿಗಳು, ಸ್ನೇಹಿತರು, ಹಿತೈಷಿಗಳೆಲ್ಲರೂ ಸೇರಿ ಅವರ ಹೆಸರಿನಲ್ಲಿ ಸ್ಮಾರಕ ದತ್ತಿ ಸಮಿತಿ ರಚಿಸಿ ಮತ್ತು ನಿಧಿಯನ್ನು ಸಂಗ್ರಹಿಸಿ ಬೆಂಗಳೂರಿನ ಕೃಷಿ ತಂತ್ರಜ್ಞರ ಸಂಸ್ಥೆಯ ವತಿಯಿಂದ ಪ್ರತಿ ಎರಡು ವರ್ಷಕ್ಕೊಮ್ಮೆ ಅತ್ಯುತ್ತಮ ಸಸ್ಯ ಸಂರಕ್ಷಣಾ ವಿಜ್ಞಾನಿಗೆ 'ಡಾ. ಪುಟ್ಟರುದ್ರಯ್ಯ ಸ್ಮಾರಕ ದತ್ತಿ ರಾಷ್ಟ್ರೀಯ ಪ್ರಶಸ್ತಿ'ಯನ್ನು ಹಾಗೂ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಪ್ರತಿ ವರ್ಷವೂ ಕೃಷಿ ಕೀಟ ಶಾಸ್ತ್ರದಲ್ಲಿ ಹೆಚ್ಚಿನ ಅಂಕಗಳಿಸುವ ಕೃಷಿ ಸ್ನಾತಕೋತ್ತರ ಪದವಿ ವಿದ್ಯಾರ್ಥಿಯನ್ನು ಗುರುತಿಸಿ ಘಟಿಕೋತ್ಸವದಲ್ಲಿ 'ಡಾ. ಪುಟ್ಟರುದ್ರಯ್ಯನವರ ಸ್ಮಾರಕದತ್ತಿ ಚಿನ್ನದ ಪದಕ'ವನ್ನು ನೀಡುವ ನಿರ್ಣಯವನ್ನು ಮಾಡಿ ಅದನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಕೃಷಿ ವಿಶ್ವವಿದ್ಯಾನಿಲಯದಲ್ಲಿ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಆರ್.ರಾಮಯ್ಯನವರು

ದತ್ತಿಸಮಿತಿಯ ಅಧ್ಯಕ್ಷರಾಗಿ ಆ ಕಾರ್ಯವನ್ನು ಸಾಂಗವಾಗಿ ನೆರವೇರಲು ಕಾರ್ಯ ಯೋಜನೆಯ ರೂಪರೇಷೆಗಳನ್ನು ರಚಿಸಿದರು.

ಡಾ. ಪುಟ್ಟರುದ್ರಯ್ಯ ಸ್ಮಾರಕ ದತ್ತಿ ರಾಷ್ಟ್ರೀಯ ಪ್ರಶಸ್ತಿಯನ್ನು ಬೆಂಗಳೂರಿನ ಕೃಷಿ ತಂತ್ರಜ್ಞರ ಸಂಸ್ಥೆಯಿಂದ ಸುತ್ತೋಲೆಗಳ ಮೂಲಕ ಪ್ರಕಟಣೆ ನೀಡಿ, ಇಡೀ ಭಾರತದಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಸಂಸ್ಥೆಗಳಿಂದ ಸೂಕ್ತ ವಿಜ್ಞಾನಿಗಳಿಂದ ಅರ್ಜಿಗಳನ್ನು ಅಹ್ವಾನಿಸಿ ಸಸ್ಯ ಸಂರಕ್ಷಣಾ ತಜ್ಞರನ್ನೊಳಗೊಂಡ ಸಮಿತಿಯೊಂದು ಅರ್ಜಿ ಸಲ್ಲಿಸಿದ ವಿಜ್ಞಾನಿಯ ಸಮಗ್ರ ಪೀಡೆ ನಿರ್ವಹಣೆಯಲ್ಲಿನ ಸಂಶೋಧನೆ/ಕೊಡುಗೆಯನ್ನು ಮೌಲ್ಯಮಾಪನ ಮಾಡಿ ಅರ್ಹ ವಿಜ್ಞಾನಿಗೆ ಈ ಪ್ರಶಸ್ತಿಗಾಗಿ ಆಯ್ಕೆ ಮಾಡಲಾಗುತ್ತದೆ. ಪ್ರಶಸ್ತಿಗೆ ಭಾಜನರಾದ ವಿಜ್ಞಾನಿಯನ್ನು ಒಂದು ವಿಶೇಷ ಕಾರ್ಯಕ್ರಮದಲ್ಲಿ ಸನ್ಮಾನಿಸಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತದೆ. ಈ ಪ್ರಶಸ್ತಿ ಪಡೆದ ವಿಜ್ಞಾನಿ ಮುಂದಿನ 2 ವರ್ಷದ ನಂತರ ಮತ್ತೊಬ್ಬ ವಿಜ್ಞಾನಿಯನ್ನು ಗುರುತಿಸಿ ಪ್ರಶಸ್ತಿ ನೀಡುವ ಕಾರ್ಯಕ್ರಮದಲ್ಲಿ ಡಾ.ಪುಟ್ಟರುದ್ರಯ್ಯನವರ ಸ್ಮಾರಕ ವಿಶೇಷ ಉಪನ್ಯಾಸವನ್ನು ನೀಡಬೇಕಾಗುತ್ತದೆ.

ಡಾ.ಪುಟ್ಟರುದ್ರಯ್ಯನವರ ಸ್ಮಾರಕ ದತ್ತಿ ಸಮಿತಿಯು ಕೃಷಿವಿಶ್ವವಿದ್ಯಾಲಯದಲ್ಲಿ ಅವರ ಕೊಡುಗೆಯನ್ನು ಸ್ಮರಿಸುವಂತಹ 'Progress and Prospects of Insect Pest Management in Karnataka' ಎಂಬ ವಿಚಾರ ಸಂಕಿರಣವನ್ನು 3ನೇ ಮೇ 1991ರಂದು ಏರ್ಪಡಿಸಿ ಅನೇಕ ಲೇಖನಗಳನ್ನೊಳಗೊಂಡ ಒಂದು ಕಿರು ಪುಸ್ತಕ 'ಸಮರ್ಪಣೆ'ಯನ್ನು ಪ್ರಕಟಿಸಿತು. ರಾಷ್ಟ್ರದ ಹೆಸರಾಂತ ಕೀಟಶಾಸ್ತ್ರಜ್ಞರಾದ ಡಾ.ಟಿ.ಎನ್.ಅನಂತಕೃಷ್ಣನ್‌ರವರು ದತ್ತಿ ಸಮಿತಿಯ ಮೊದಲ ಉಪನ್ಯಾಸವನ್ನು ಮಾಡಿದರು. ಈ ವಿಚಾರ ಸಂಕಿರಣದಲ್ಲಿ ಕೀಟಪೀಡೆಗಳ ನಿರ್ವಹಣೆ ವಿಚಾರವಾಗಿ ಅನೇಕ ಸಂಶೋಧನಾ ಪ್ರಬಂಧಗಳನ್ನು ಮಂಡಿಸಲಾಯಿತು ಹಾಗೂ ಅವುಗಳನ್ನು ಡಾ.ಜಿ.ಕೆ.ವೀರೇಶ್ ಮತ್ತು ಡಾ.ಸಿ.ಎ.ವಿರಕ್ತಮಠರವರ ಸಂಪಾದಕತ್ವದಲ್ಲಿ ಪುಸ್ತಕ ರೂಪದಲ್ಲಿ 'A Century of Plant Protection Research in Karnataka' ಎಂಬ ಹೆಸರಿನಲ್ಲಿ ಪ್ರಕಟಿಸಲಾಯಿತು. ಡಾ.ಪುಟ್ಟರುದ್ರಯ್ಯನವರ ಸ್ಮಾರಕ ದತ್ತಿ ಸಮಿತಿಯು 1991ರಿಂದ ನಿರಂತರವಾಗಿ ಈ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದೆ.

## 9. ನಿವೃತ್ತಿಯಲ್ಲಿಯೂ ವೃತ್ತಿಪರತೆ

ಡಾ. ಪುಟ್ಟರುದ್ರಯ್ಯನವರು 1971ರ ಡಿಸೆಂಬರ್‌ನಲ್ಲಿ ತಮ್ಮ 62ನೇ ವಯಸ್ಸಿಗೆ ನಿವೃತ್ತಿಹೊಂದಿದರು. ನಿವೃತ್ತಿಯಾದ ನಂತರ ವಿಶ್ರಾಂತ ಜೀವನಕ್ಕೆ ಮೊರೆಹೋಗಲಿಲ್ಲ. ಅವರು ಕಛೇರಿಯಿಂದ ವಿಶ್ರಾಂತರಾಗಿದ್ದರೆ ಹೊರತು ಅವರ ಜ್ಞಾನಶಾಖೆಯ ಕಾರ್ಯದಿಂದ ವಿಶ್ರಾಂತರಾಗಲು ಸಾಧ್ಯವಾಗಲಿಲ್ಲ. ಹಾಗಿರುವುದು ಅವರ ಸ್ವಭಾವಕ್ಕೆ ವಿರುದ್ಧವಾದದ್ದೂ ಆಗಿತ್ತೇನೋ! ತಂತ್ರಜ್ಞಾನ ಸಲಹೆಗಾರರಾಗಿ ಮತ್ತು ಅಗತ್ಯ ಕೃಷಿ ಸಾಹಿತ್ಯವನ್ನು ವಿವಿಧ ಕೃಷಿ ಸಾಹಿತ್ಯ ಪ್ರಕಾರಗಳಲ್ಲಿ ರಚಿಸುವ ಹಾಗೂ ಕೃಷಿ ಮತ್ತು ಕೀಟ ಕ್ಷೇತ್ರಗಳ ಸಮಸ್ಯೆಗಳ ಮಾರ್ಗದರ್ಶನಾ ಕಾರ್ಯಗಳಲ್ಲಿ ತೊಡಗಿಸಿಕೊಂಡರು. ಆ ದಿನಗಳಲ್ಲಿ ಬೆಂಗಳೂರಿನಲ್ಲಿ ಸಸ್ಯ ಸಂರಕ್ಷಣಾ ಔಷಧಿಗಳಿಗೆ ಹಾಗೂ ಉಪಕರಣಗಳಿಗೆ ಖ್ಯಾತಿಯಾಗಿರುವ ಮೆ.ಎಸ್.ವಿ.ರಂಗಸ್ವಾಮಿಯವರ ಕಂಪೆನಿಯಲ್ಲಿ ರೈತರು ಪೀಡೆನಾಶಕಗಳನ್ನು ಕೊಳ್ಳುವಾಗ ಅವರ ಸಮಸ್ಯೆಗಳನ್ನು ಕೇಳಿ ಹಲವಾರು ಸಮಗ್ರ ನಿಯಂತ್ರಣಾ ಕ್ರಮಗಳನ್ನು ಒಟ್ಟುಗೂಡಿಸಿ ಸೂಕ್ತ ಪೀಡೆನಾಶಕಗಳನ್ನು ಉಪಯೋಗಿಸುವಂತೆ ಮಾಹಿತಿಯನ್ನು ಹಾಗೂ ಇವರ ಸಲಹೆ ಸೂಚನೆಗಳನ್ನು ಕೇಳುತ್ತಿದ್ದ ರೈತರಿಗೆ ಒದಗಿಸುತ್ತಿದ್ದರು. ಕೆಲವು ಹೊಸದಾಗಿ ಕಂಡಂತಹ ಪೀಡೆ ಅಥವಾ ರೋಗದ ಸಮಸ್ಯೆಗಳಿಗೆ ಸೂಕ್ತ ಪರಿಹಾರವನ್ನು ಕಂಡು ಹಿಡಿಯಲು ಮತ್ತು ಸೂಕ್ತ ಮಾಹಿತಿಯನ್ನು ತಕ್ಷಣ ಒದಗಿಸಲು ಕೃಷಿ ಇಲಾಖೆಯಲ್ಲಿರುವ ಅಧಿಕಾರಿಗಳಿಗೆ ಅಥವಾ ಕೃಷಿ ವಿಶ್ವವಿದ್ಯಾಲಯದಲ್ಲಿರುವ ಸಂಬಂಧಪಟ್ಟ ಸಸ್ಯ ಸಂರಕ್ಷಣಾ ತಜ್ಞರಿಗೆ, ಮಾರ್ಗದರ್ಶನ ನೀಡುತ್ತಿದ್ದರು. ನಿವೃತ್ತಿ ನಂತರವೂ ಕೃಷಿ ವಿಶ್ವವಿದ್ಯಾಲಯದಲ್ಲಿ ಶಿಕ್ಷಕರ ಹಾಗೂ ಸಂಶೋಧಕರ ಸಂಪರ್ಕವಿಟ್ಟುಕೊಂಡು ಕೃಷಿ ಸಮಸ್ಯೆಗಳಿಗೆ ಪರಿಹಾರವನ್ನು ಕಂಡು ಹಿಡಿಯುವಂತೆ ಸಲಹೆಗಳನ್ನು ಗುರುತಿಸುತ್ತಿದ್ದರು. ಗ್ರಾಮೀಣ ಪ್ರದೇಶದಿಂದ ಸಮಸ್ಯೆಗಳೊಂದಿಗೆ ಬಂದಂತಹ ರೈತರುಗಳ ಬದುಕನ್ನು ಹಸನುಗೊಳಿಸುವ ಪ್ರಯತ್ನದಲ್ಲಿ ಅತ್ಯಂತ ಆಸಕ್ತಿಯನ್ನು ತೋರಿಸುತ್ತಿದ್ದರು.

ಎಸ್.ವಿ.ರಂಗಸ್ವಾಮಿಯವರ ಸಂಸ್ಥೆ ಬೆಂಗಳೂರಿನ ನಗರ ಮಾರುಕಟ್ಟೆಗೆ ಸಮೀಪದಲ್ಲಿದ್ದುದರಿಂದ ತರಕಾರಿ, ಹಣ್ಣು, ಧಾನ್ಯ ಮುಂತಾದ ಉತ್ಪನ್ನಗಳನ್ನು ಮಾರಲು ರೈತರು ಬರುತ್ತಿದ್ದರು. ಹೆಚ್ಚಿನ ರೈತರು ಪೀಡೆನಾಶಕಗಳನ್ನು ಕೊಳ್ಳಲು ಇದೇ ಸಂಸ್ಥೆಗೆ ಬರುತ್ತಿದ್ದರು ಮತ್ತು ಡಾ. ಪುಟ್ಟರುದ್ರಯ್ಯನವರ ಸಲಹೆ ಪಡೆಯುತ್ತಿದ್ದರು. ರಂಗಸ್ವಾಮಿಯವರ ಸಂಸ್ಥೆ ಬಾಯರ್ ಇಂಡಿಯಾ ಸಂಸ್ಥೆಯ ಪೀಡೆನಾಶಕಗಳನ್ನು ಉಪಯೋಗಿಸುತ್ತಿದ್ದರಿಂದ ಹೆಚ್ಚಿನ ಪ್ರಚಾರದಲ್ಲಿತ್ತು. ಈ ಸಂಸ್ಥೆಗೆ ಅನೇಕ ಪ್ರಗತಿಪರ ರೈತರು, ರಾಜಕಾರಣಿಗಳು, ಚಿತ್ರನಟರು ಸೂಕ್ತ ಮಾಹಿತಿಗಾಗಿ ಭೇಟಿಕೊಡುತ್ತಿದ್ದರು.

1978-79ರಲ್ಲಿ ಮೊಟ್ಟ ಮೊದಲ ಬಾರಿಗೆ ಬೆಂಗಳೂರಿನ ದಕ್ಷಿಣದ ಲಾಲ್‌ಬಾಗ್ ಪಕ್ಕದಲ್ಲಿಯೇ ಸಿದ್ಧಾಪುರದ ಅಲಂಕಾರಿಕ ಮತ್ತು ಹಣ್ಣಿನ ಸಸಿಗಳಿಗೆ ಹೆಸರಾಂತ ತೋಟಗಳಲ್ಲಿ ಕಂಡುಬಂದಂತಹ ದೈತ್ಯ ಆಫ್ರಿಕಾ ಬಸವನ ಹುಳುವನ್ನು ಮತ್ತು ಅದರ ಭಾದೆಯನ್ನು ಗುರುತಿಸಿ ತಕ್ಷಣ ಅದಕ್ಕೆ ಸೂಕ್ತ ಪರಿಹಾರವನ್ನು ತೋಟಗಾರರಿಗೆ ಒದಗಿಸುವಂತೆ, ಹಲವು ಪೂರ್ವಭಾವಿ ತನಿಖೆಗಳೊಂದಿಗೆ ಮಾಹಿತಿಗಳನ್ನು ಒದಗಿಸಿ ಆದಷ್ಟು ಬೇಗ ಪರಿಹಾರೋಪಾಯಗಳನ್ನು ತೋಟಗಾರಿಕೆ ಇಲಾಖೆಯವರ ಮುಖಾಂತರ ರೈತರಿಗೆ ಒದಗಿಸುವಂತೆ ಮಾರ್ಗದರ್ಶನ ನೀಡಿದರು.

ಅವರ ಮಾರ್ಗದರ್ಶನದ ಮೇಲೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕೀಟಶಾಸ್ತ್ರ ವಿಭಾಗದಲ್ಲಿ ಹಲವು ಕ್ಷೇತ್ರ ಪ್ರಯೋಗಗಳನ್ನು ನಡೆಸಿ ಸಮಗ್ರ ಪೀಡೆ ನಿರ್ವಹಣಾ ಕ್ರಮಗಳಾದ, ಕೈಯಿಂದ ಹಿಡಿದು ಕೊಲ್ಲುವುದು, ಸಸಿಗಳ ಕುಂಡದ ಕೆಳಬಾಗದಲ್ಲಿಡುವ ಬಸವನಹುಳುವಿನ ಮೊಟ್ಟೆಗಳನ್ನು ನಾಶಪಡಿಸುವುದು, ಸುಟ್ಟ ಸುಣ್ಣದ ಪುಡಿಯಿಂದ ಧೂಳೀಕರಿಸುವುದು ಮುಂತಾದ ಕ್ರಮಗಳನ್ನು ಅನುಸರಿಸಿ ಕೃಷಿಕರಿಗೆ ಪೂರ್ಣ ಮಾಹಿತಿಯನ್ನು ಒದಗಿಸುತ್ತಿದ್ದರು. ಡಾ. ಜಿ.ಕೆ.ವೀರೇಶ್‌ರವರ ಮುಂದಾಳತ್ವದಲ್ಲಿ ಸಿದ್ಧಾಪುರದ ನರ್ಸರಿ ಕ್ಷೇತ್ರಗಳಿಗೆ ಭೇಟಿಮಾಡಿ ಅಲ್ಲಿಯೇ ಕೆಲವು ನಿಯಂತ್ರಣಾ ಕ್ರಮಗಳನ್ನು ಅನುಸರಿಸಿ ಸಂಶೋಧನೆಯನ್ನು ಕೈಗೊಂಡು ಅವರ ಮಾರ್ಗದರ್ಶನದಂತೆ ಕೆಲವು ರಾಸಾಯನಿಕಗಳನ್ನು ಬಳಸಿ ದೈತ್ಯ ಬಸವನಹುಳುವಿನ ನಿಯಂತ್ರಣವನ್ನು ಸಮಗ್ರ ಪೀಡೆ ನಿಯಂತ್ರಣ ತತ್ವದ ಆಧಾರದ ಮೇಲೆ ಪ್ರಯೋಗಗಳನ್ನು ನಡೆಸಿ ಇದರಿಂದ ಹೊರಬಂದಂತಹ ಫಲಿತಾಂಶಗಳಿಂದ ಸಂಶೋಧನಾ ಲೇಖನಗಳನ್ನು ಬರೆದು ನಿಯತಕಾಲಿಕೆಗಳಲ್ಲಿ ಪ್ರಕಟಿಸುತ್ತಿದ್ದರು. ಈಗ ದೈತ್ಯ ಆಫ್ರಿಕಾ ಬಸವನಹುಳು ಇಡೀ ಕರ್ನಾಟಕದಲ್ಲಿ ವ್ಯಾಪಿಸಿದೆ. ವಿವಿಧ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಅವುಗಳ ನಿಯಂತ್ರಣ ಕುರಿತಂತೆ ಸಂಶೋಧನೆ ನಡೆಸಲಾಗುತ್ತಿದೆ ಹಾಗೂ ಆಗಿಂದಾಗ್ಗೆ ಸಂಶೋಧನೆಯ ಫಲಿತಾಂಶಗಳನ್ನು ರೈತರಿಗೆ ತಲುಪಿಸಲಾಗುತ್ತಿದೆ.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕನ್ನಡದಲ್ಲಿ ಕೃಷಿಸಾಹಿತ್ಯ ನಿರ್ಮಾಣ ಕಾರ್ಯಕ್ಕೆಂದು 1971ರಲ್ಲಿ ಪ್ರತ್ಯೇಕವಾಗಿ ಕನ್ನಡ ಅಧ್ಯಯನ ವಿಭಾಗ ಪ್ರಾರಂಭಿಸಿದಾಗ ಡಾ.ಪುಟ್ಟರುದ್ರಯ್ಯನವರು ಕೃಷಿಕರಿಗೂ ಹಾಗೂ ಇತರರಿಗೂ ಸುಲಭವಾಗಿ ಅರ್ಥವಾಗುವಂತಹ ಸರಳ ಭಾಷೆಯಲ್ಲಿ 'ಸುಭಿಕ್ಷತೆಗೆ ತೆರೆದ ಬಾಗಿಲು' ಎಂಬ ಪುಸ್ತಕವನ್ನು ಬರೆದರು.ಕನ್ನಡ ಅಧ್ಯಯನ ವಿಭಾಗದಿಂದ ಪ್ರಕಟಣೆಗೊಂಡ ಪ್ರಪ್ರಥಮ ಪುಸ್ತಕವಿದು.

ಈ ಹೊತ್ತಿಗೆ ಮುದ್ರಿಸಿದ ಕೆಲವೇ ದಿನಗಳಲ್ಲಿ ಎಲ್ಲಾ ಪ್ರತಿಗಳು ಮಾರಾಟವಾಗಿ ಎರಡನೆಯ ಮುದ್ರಣವನ್ನು ಕಂಡಿತು. 'ಸುಭಿಕ್ಷತೆಗೆ ತೆರೆದ ಬಾಗಿಲು' ಎಂಬ ಪುಸ್ತಕ ಕೃಷಿ ವಿಜ್ಞಾನದ 36 ವಿಚಾರಗಳನ್ನು ಒಳಗೊಂಡ ಕಿರು ಪುಸ್ತಕವಾದರೂ ಅಂದಿನ ತಂತ್ರಜ್ಞಾನವನ್ನು ಕ್ರೋಢೀಕರಿಸಿ ಬರೆದಂತಹ ಒಂದು ಅತ್ಯುತ್ತಮ ಪ್ರಯತ್ನವಾಗಿತ್ತು. ಡಾ. ಪುಟ್ಟರುದ್ರಯ್ಯನವರು ನಿವೃತ್ತಿಯಾದ ಮೇಲೆ ಸುಮಾರು 25ಕ್ಕೂ ಹೆಚ್ಚು ಪುಸ್ತಕಗಳನ್ನು ರಚಿಸಿದರು.

ಕರ್ನಾಟಕ ರಾಜ್ಯ ಕಂಡಂತಹ ಅಪರೂಪದ ಅತ್ಯುತ್ತಮ ಶಿಕ್ಷಕ, ಕೀಟಶಾಸ್ತ್ರಜ್ಞ, ಸಂಶೋಧಕ, ಕೃಷಿ ವಿಜ್ಞಾನಿ, ವಿಸ್ತರಣಾ ತಂತ್ರಜ್ಞ ಹಾಗೂ ಆಡಳಿತಾಧಿಕಾರಿಯಾಗಿ ಡಾ.ಪುಟ್ಟರುದ್ರಯ್ಯನವರು ಒಟ್ಟಾರೆ 5 ದಶಕಗಳ ಕಾಲ ಕೃಷಿ ವಿಜ್ಞಾನ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದಾರೆ. ಡಾ.ಪುಟ್ಟರುದ್ರಯ್ಯನವರು ಒಬ್ಬ ಸರಳ, ಸಹೃದಯಿ, ವಿಚಾರಪರ, ಸಹಾನುಭೂತಿ ಮತ್ತು ಅನುಕಂಪ ಉಳ್ಳ ವ್ಯಕ್ತಿಯಾಗಿದ್ದರು. ಸಾಧ್ಯವಾದ ಮಟ್ಟಿಗೆ ಇತರರಿಗೆ ಸಹಾಯ ಮಾಡಬೇಕೆಂಬ ಹಂಬಲವನ್ನು ಹೊಂದಿದ್ದರು. ಅವರು ಯಾವತ್ತೂ ತಮಗೆ ಹೆಸರುಗಳಿಸುವ ಅಥವಾ ಕೀರ್ತಿ ಬರಬೇಕೆಂದು ಕೆಲಸ ಮಾಡಿದವರಲ್ಲ. ತಮ್ಮ 74ನೇ ವಯಸ್ಸಿನಲ್ಲಿ ಡಾ.ಪುಟ್ಟರುದ್ರಯ್ಯನವರು 31 ನೇ ಡಿಸೆಂಬರ್ 1983ರಂದು ಕೊನೆಯುಸಿರೆಳೆದರು. ಅವರ ತತ್ವ, ಸಿದ್ಧಾಂತ ಹಾಗೂ ಆದರ್ಶಗಳು ಇಂದಿಗೂ ಅವರ ವಿದ್ಯಾರ್ಥಿಗಳಲ್ಲಿ ಮತ್ತು ಒಡನಾಡಿಗಳಲ್ಲಿ ಅಚ್ಚಳಿಯದಂತೆ ಉಳಿದಿದೆ.

# 10. ಲೋಕದ ಕಣ್ಣಲ್ಲಿ ಡಾ.ಎಂ.ಪುಟ್ಟರುದ್ರಯ್ಯನವರು

**ಡಾ. ಎಂ.ಪುಟ್ಟರುದ್ರಯ್ಯನವರ ವ್ಯಕ್ತಿತ್ವದ ಬಗ್ಗೆ ಸಹೋದ್ಯೋಗಿ ಮಿತ್ರರು, ಅವರ ವಿದ್ಯಾರ್ಥಿಗಳು ಹಾಗೂ ಹಿತೈಷಿಗಳ ನೆನಪಿನ ಅನಿಸಿಕೆಗಳು**

ಮೇರು ವ್ಯಕ್ತಿತ್ವವನ್ನು ಹೊಂದಿದ ಡಾ. ಎಂ.ಪುಟ್ಟರುದ್ರಯ್ಯನವರು ವೃತ್ತಿಯಲ್ಲಿ ನಿಷ್ಠೆ, ವಿದ್ಯಾರ್ಥಿಗಳಲ್ಲಿ ಕಾಳಜಿ, ಕ್ಷೇತ್ರಕ್ಕೆ ಸಮರ್ಪಣಾ ಮನೋಭಾವ ಸೇವೆ, ನಾಡೆಂದರೆ ನಾಡಿನ ರೈತಮಕ್ಕಳೆಂಬ ಭಾವ ಹೀಗೆ ಗುರುತಿಸುತ್ತಾ ಹೋದರೆ ಬೆಳೆಯುವ ರೀತಿಯಲ್ಲಿ ಬಾಳಿದ ಬದುಕನ್ನು ಲೋಕದ ಜನತೆಗೆ ಕಂಡ ಪರಿ ವೈವಿಧ್ಯವಾಗಿದೆ. ಅವರು ವಿಶಿಷ್ಟ ಸ್ವಭಾವದ ವ್ಯಕ್ತಿಯಾಗಿದ್ದರು. ಹೊಗಳಿಕೆ, ಸನ್ಮಾನ ಇತ್ಯಾದಿಗಳೆಂದರೆ ಬಹಳ ದೂರ ಉಳಿಯುತ್ತಿದ್ದರು. ಒಪ್ಪಿಕೊಂಡ ಕೆಲಸಗಳನ್ನು ಶ್ರದ್ಧೆಯಿಂದ ನಿರ್ವಹಿಸುವ ಹೊರತು ಇತರರ ಗೋಜಿಗೆ ಹೋಗುವಂತಹ ವ್ಯಕ್ತಿಯಲ್ಲ. ಆ ಕಾರಣವಾಗಿ ಅವರ ಮಾಹಿತಿ ಅನ್ವೇಷಣೆಯ ಹಾದಿಯಲ್ಲಿ ನಿರೀಕ್ಷಿಸಿದ ರೀತಿಯಲ್ಲಿ ಮಾಹಿತಿ ಲಭ್ಯವಾಗಲಿಲ್ಲ. ಅವರ ಒಡನಾಡಿಗಳಲ್ಲಿ ನಿರಂತರ ಹಸಿರಾಗಿರುವ ಅವರ ಒಡನಾಟದ ಅನುಭವಗಳ ನೆನಪಿನ ಚಿತ್ರಣವನ್ನು ಈ ಅಧ್ಯಾಯದಲ್ಲಿ ನೀಡಲಾಗಿದೆ. ಡಾ.ಪುಟ್ಟರುದ್ರಯ್ಯನವರ ವ್ಯಕ್ತಿತ್ವವನ್ನು ಜಗವು ಕಂಡಂತೆ ಇಲ್ಲಿ ಕಾಣಬಹುದು. ಈ ಭಾಗವು ಒಂದು ರೀತಿಯಲ್ಲಿ ಡಾ. ಪುಟ್ಟರುದ್ರಯ್ಯನವರ ವ್ಯಕ್ತಿ ಚಿತ್ರಣವಾದರೆ ಮತ್ತೊಂದು ರೀತಿಯಲ್ಲಿ ಅವರ ಒಡನಾಡಿಗಳ ಆತ್ಮಚರಿತ್ರೆಯೂ ಎನಿಸುತ್ತದೆ.

**ಡಾ. ಜಿ.ಪಿ.ಚನ್ನಬಸವಣ್ಣ**

1943ರಲ್ಲಿ ನಾನು ಸೇವೆಗೆ ಸೇರಿದಾಗ ಡಾ. ಪುಟ್ಟರುದ್ರಯ್ಯನವರು ಕೊಟ್ಟಂತಹ ಮಾರ್ಗದರ್ಶನ ಹಾಗೂ ಕೀಟಗಳ ಸಮಸ್ಯೆ ಹಾಗೂ ನಿರ್ವಹಣೆಯ ಬಗ್ಗೆ ನನ್ನಲ್ಲಿ ತುಂಬಿದ ಉತ್ಸಾಹ, ನಾನು ಅವರಿಂದ ಪಡೆದಂತಹ ಅನುಭವ ಎಂದಿಗೂ ಮರೆಯಲಾಗುವುದಿಲ್ಲ. ಕಾಫಿ ಬೆಳೆಯಲ್ಲಿನ ಕೀಟಗಳ ಬಾಧೆ ಚಿಹ್ನೆಗಳೂ ಅದರಲ್ಲಿಯೂ ಕಾಫಿ ಕಾಂಡ ಕೊರೆಯುವ ಹುಳುವಿನ ಬಾಧೆ ಅದರ ನಿಯಂತ್ರಣ ಕ್ರಮಗಳನ್ನು ಪ್ರಾಯೋಗಿಕವಾಗಿ ವಿವರಿಸಿ ನನ್ನನ್ನು ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೆಲಸ ಮಾಡಲು ಹುರಿದುಂಬಿಸುತ್ತಿದ್ದರು. ಡಾ. ಪುಟ್ಟರುದ್ರಯ್ಯನವರು ನೇರವಾಗಿ ಕಾಫಿ ತೋಟಗಳಿಗೆ ಭೇಟಿ ಇತ್ತು ತೋಟಗಳಲ್ಲಿ ಕೆಲಸ ಮಾಡುತ್ತಿರುವ ಕೆಲಸಗಾರರಿಗೆಲ್ಲಾ, ಪ್ರತ್ಯಕ್ಷವಾಗಿ ಕೀಟಗಳ ಹಾನಿಯ ಲಕ್ಷಣಗಳ ಬಗ್ಗೆ ವಿವರಣೆ ನೀಡುತ್ತಿದ್ದರು. ಕೆಲವಾರು ನಿಯಂತ್ರಣಾ ಕ್ರಮಗಳನ್ನು ಬೇಸಾಯ ಕ್ರಮಗಳ ಮುಖಾಂತರ ಹಾಗೂ ಯಾಂತ್ರಿಕ ವಿಧಾನಗಳನ್ನು ಅನುಸರಿಸುವುದರ ಮೂಲಕ ಪೀಡೆ ನಿಯಂತ್ರಣ ಕ್ರಮಗಳನ್ನು ಅನುಸರಿಸುವಂತೆ ಸಲಹೆ ನೀಡುತ್ತಿದ್ದರು.

ಚಿಕ್ಕಮಗಳೂರಿನಿಂದ 1-2 ವಾರಗಳ ನಂತರ ನನ್ನನ್ನು ಸಕಲೇಶಪುರಕ್ಕೆ ಕರೆದುಕೊಂಡು ಬಂದರು. ಅವರ ಪರಿಚಯದವರ ಮುಖಾಂತರ ನಾನು ಅಲ್ಲಿ ತಂಗಲು ಮತ್ತು ಜೇನು ಸಾಕಾಣಿಕೆದಾರರ ಸಹಕಾರ ಸಂಘದ ಕಾರ್ಯದರ್ಶಿಗಳ ಮೂಲಕ ಅಲ್ಲಿಯೇ ಉಳಿದು ಕೆಲಸ ಮಾಡುವ ಅವಕಾಶವನ್ನು ಕಲ್ಪಿಸಿದ್ದರು. ನನಗೆ ಅಂದು ಅವರು ನೀಡಿದ ಮಾರ್ಗದರ್ಶನ, ತೋರಿದ ಪ್ರೀತಿ, ಮಾನವೀಯತೆ ಇವೆಲ್ಲವನ್ನು ಮರೆಯುವಂತಿಲ್ಲ. ನಿಷ್ಕಾಮದಿಂದ ಕ್ಷೇತ್ರದ ಸುಧಾರಣೆಯ ಜವಾಬ್ದಾರಿಯ ಉತ್ಸಾಹವನ್ನು ತುಂಬಿದ್ದರು. ಯುವಪೀಳಿಗೆ ಇವರಿಂದ ಕಲಿಯುವುದು ಸಾಕಷ್ಟಿದೆ ಎಂದು ಮನವರಿಕೆ ಮಾಡುವ ವ್ಯಕ್ತಿತ್ವ ಅವರದು. 1944ರ ಕೊನೆಯ ದಿನಗಳಲ್ಲಿ ಡಾ. ಪುಟ್ಟರುದ್ರಯ್ಯನವರು ಹಿರಿಯ ಸಹಾಯಕ ಕೀಟಶಾಸ್ತ್ರಜ್ಞರಾಗಿ ಬೆಂಗಳೂರಿನ ಕೇಂದ್ರ ಕಛೇರಿಗೆ ವರ್ಗಾವಣೆಯಾಯಿತು. ಆಗ ಅವರ ಸ್ಥಾನಕ್ಕೆ ನನಗೆ ಚಿಕ್ಕಮಗಳೂರಿಗೆ ಸಹಾಯಕ ಕೀಟಶಾಸ್ತ್ರಜ್ಞರಾಗಿ ವರ್ಗಾವಣೆಯಾಯಿತು.

ಡಾ. ಪುಟ್ಟರುದ್ರಯ್ಯನವರು 1955ರಿಂದ 1964ರವರೆಗೆ ಭತ್ತ, ಜೋಳ, ರಾಗಿ ಮತ್ತು ದ್ವಿದಳ ಧಾನ್ಯಗಳ ಬೆಳೆಗಳಿಗೆ ಬೀಳುವ ಕೀಟ ಪೀಡೆಗಳ ನಿಯಂತ್ರಣದ ಬಗ್ಗೆ ರೈತರಿಗೆ ಉಪಯುಕ್ತಕರ ಮಾಹಿತಿ ನೀಡುವಂತಹ ಹಲವಾರು ಪುಸ್ತಕಗಳನ್ನು ರಚಿಸಿದ್ದಾರೆ. ಇವರು ಬರೆದಿರುವ ಯಾವುದೇ ಲೇಖನಗಳು ವಿಶೇಷವಾಗಿ ಆಯಾ ದೇಶಕ್ಕೆ ಅಥವಾ ಪ್ರಾಂತ್ಯಕ್ಕೆ ಅನ್ವಯವಾಗುವಂತೆ, ನಿರ್ದಿಷ್ಟ ಪ್ರದೇಶದ ನಿರ್ದಿಷ್ಟ ಬೆಳೆಗಳ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುವಂತಿದ್ದವು. ಅದು ಶ್ರೇಷ್ಠ ಸಂಶೋಧಕನ ಗುಣ.

ಕೃಷಿ ವಿಶ್ವವಿದ್ಯಾಲಯದಲ್ಲಿರುವಾಗ 1965ರಿಂದ ಹೆಬ್ಬಾಳದ ಕೃಷಿಕಾಲೇಜಿನಲ್ಲಿ ಶಿಕ್ಷಣ ನಿರ್ದೇಶಕರಾಗಿ ನಿವೃತ್ತಿಯಾಗುವವರೆಗೂ ಮುಂದುವರೆದಿದ್ದರು. ಹೊರದೇಶದಿಂದ ಸಸ್ಯ ಸಂರಕ್ಷಣೆ ವಿಭಾಗಗಳಿಗೆ ಉನ್ನತ ತರಬೇತಿಗಾಗಿ ಪ್ರಯೋಗಶಾಲೆಗಳಿಗೆ ಅಗತ್ಯ ಉಪಕರಣ, ಸಂಶೋಧನಾ ಸಾಮಗ್ರಿ ಹಾಗೂ ಪುಸ್ತಕಗಳನ್ನು ವಿದೇಶದಿಂದ ತರಿಸಲು ಅನುದಾನ ನೀಡಿ ಪ್ರೋತ್ಸಾಹಿಸುತ್ತಿದ್ದರು. ಈ ಅನುದಾನವನ್ನು ಸೂಕ್ತ ರೀತಿಯಲ್ಲಿ ಬಳಸುವಂತೆ, ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕಾಗಿ ಲಭ್ಯವಾಗುವಂತೆ ಉತ್ತೇಜನ ನೀಡುತ್ತಿದ್ದರು. ಅವರು ನಿವೃತ್ತಿ ಹೊಂದಿದ ಮೇಲೆ ತಮ್ಮ ನಿವೃತ್ತಿ ಕಾಲವನ್ನು ವಿಶ್ರಾಂತಿಯೆಂದು ಪರಿಗಣಿಸದೇ ಎಸ್.ವಿ.ರಂಗಸ್ವಾಮಿರವರ ಕಂಪನಿಯಲ್ಲಿ ತಾಂತ್ರಿಕ ಸಲಹೆಗಾರರಾಗಿ ಕಾರ್ಯನಿರ್ವಹಿಸಿದರು. ಆ ಸಮಯದಲ್ಲೂ ಸಹ ಕೀಟಶಾಸ್ತ್ರ ವಿಭಾಗದ ಸಂಪರ್ಕವಿಟ್ಟುಕೊಂಡಿದ್ದರು. ಕೆಲವು ಸಸ್ಯ ಸಂರಕ್ಷಣೆಯ ಸಮಸ್ಯೆಗಳನ್ನು ಚರ್ಚಿಸಿ ರೈತರಿಗೆ ಅತ್ಯುನ್ನತ ಸಲಹೆಯನ್ನು ನೀಡುತ್ತಿದ್ದರು.

(ಡಾ. ಜಿ.ಪಿ.ಚನ್ನಬಸವಣ್ಣರವರು ಡಾ.ಪುಟ್ಟರುದ್ರಯ್ಯರವರ ಸೇವಾರಂಭ ಸಂದರ್ಭದ ಸಹೋದ್ಯೋಗಿಗಳು. ಇಲಾಖೆಯಲ್ಲಿ ಹಾಗೂ ಕೃಷಿ ವಿಶ್ವವಿದ್ಯಾಲಯದಲ್ಲಿ ಡಾ. ಪುಟ್ಟರುದ್ರಯ್ಯನವರ ಅನುಯಾಯಿಯಾಗಿ, ಸಹ ಸಂಶೋಧಕರಾಗಿ ಹಾಗೂ ಶಿಕ್ಷಕರಾಗಿ ನಂತರ ಕೀಟಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾಗಿ ಸೇವೆಗೈದವರು.)

## ಪ್ರೊ. ಎಸ್.ಎಸ್.ಕಟಗಿಹಳ್ಳಿಮಠ

ಡಾ. ಪುಟ್ಟರುದ್ರಯ್ಯನವರು ಕರ್ನಾಟಕ ರಾಜ್ಯಕ್ಕೆ ಸಲ್ಲಿಸಿರುವ ಸೇವೆ ಅವಿಸ್ಮರಣೀಯ. ಇವರು 1970ರ ದಶಕದಲ್ಲಿ ಕೃಷಿ ಇಲಾಖೆ ಮತ್ತು ಕೃಷಿ ವಿಶ್ವವಿದ್ಯಾಲಯಗಳಲ್ಲಿ ಸೇವೆ ನಿರ್ವಹಿಸುತ್ತಾ ಕೀಟಶಾಸ್ತ್ರದಲ್ಲಿ ಅಪಾರ ಜ್ಞಾನ ಸಂಪಾದಿಸಿಕೊಂಡು ರೈತ ಸಮುದಾಯದ ಬಗ್ಗೆ ಅತೀವ ಕಾಳಜಿಯನ್ನು ಹೊಂದಿದ್ದವರು.

ಅವರದು ಘನವಾದ ವ್ಯಕ್ತಿತ್ವ. ಅದು ಶ್ರೇಷ್ಠ ಪ್ರಾಧ್ಯಾಪಕರು, ಸಂಶೋಧಕರು, ಅಡಳಿತಾಧಿಕಾರಿಗಳಿಂದ ಮುಪ್ಪರಿಗೊಂಡಿತ್ತು. ಇಡೀ ಭಾರತದಲ್ಲಿ ಕೃಷಿ ವಿಜ್ಞಾನಿಗಳಿಗೆ ಒಬ್ಬ ಕೀಟಶಾಸ್ತ್ರಜ್ಞರಾಗಿ ಅವರು ಚಿರಪರಿಚಿತರು. ಅದೇ ರೀತಿಯಲ್ಲಿ ಕರ್ನಾಟಕ ರಾಜ್ಯದ ರೈತರಿಗೂ ಇವರು ಚಿರಪರಿಚಿತರು. ತಮ್ಮ ಜೀವಮಾನದಲ್ಲಿ ಅವರು ಕರ್ಮಯೋಗಿಯಾಗಿ ಕೃಷಿ ಕೀಟ ವಿಜ್ಞಾನಕ್ಕೆ ಉಚ್ಚ ಮಟ್ಟದ ಕೃಷಿ ಶಿಕ್ಷಣಕ್ಕೂ ಹಾಗೂ ರೈತರಿಗೂ ಅತ್ಯಂತ ಅಮೂಲ್ಯ ಸೇವೆಯನ್ನು ಸಲ್ಲಿಸಿದ್ದಾರೆ.

ತಮ್ಮ ಕೊನೆಯ ದಿನಗಳವರೆಗೂ ಅವರು ಕರ್ಮಯೋಗಿಯಾಗಿ ಪುಸ್ತಕಗಳನ್ನು ಬರೆಯುವುದು, ಸಸ್ಯ ಸಂರಕ್ಷಣೆಯಲ್ಲಿ ರೈತರಿಗೆ ಸಲಹೆ ಕೊಡುವ ಕೆಲಸವನ್ನು ಅತ್ಯಂತ ಶ್ರದ್ಧೆಯಿಂದ ನಿರ್ವಹಿಸುತ್ತಿದ್ದರು. ಇಂಥಾ ಮಹಾ ಪುರುಷನಿಗೆ ರಾಜ್ಯದ ಕೃಷಿ ಇಲಾಖೆ, ಕೃಷಿ ವಿಶ್ವವಿದ್ಯಾಲಯ, ಕೃಷಿ ವಿದ್ಯಾರ್ಥಿಗಳು ಹಾಗೂ ಕೀಟತಜ್ಞರು ಋಣಿಗಳು. ರೈತ ಸಮುದಾಯಕ್ಕಂತೂ ಇಂತಹ ಅಧಿಕಾರಿಗಳು ಮುಂದೆ ಕಾಣಲಾರರೇನೋ ಎನಿಸುತ್ತದೆ. ಇಂತಹ ವ್ಯಕ್ತಿಗಳು ಯಾವತ್ತು ರಾಷ್ಟ್ರದ ಸಂಪತ್ತು ಇದ್ದ ಹಾಗೆ.

(ಪ್ರೊ. ಎಸ್.ಎಸ್.ಕಟಗಿಹಳ್ಳಿಮಠರವರು ನಿವೃತ್ತ ಕೀಟಶಾಸ್ತ್ರಜ್ಞರು, ಕರ್ನಾಟಕ ರಾಜ್ಯ ಕೃಷಿ ಇಲಾಖೆ ಬೆಂಗಳೂರು)

## ಪ್ರೊ. ಬಿ.ವಿ.ವೆಂಕಟರಾವ್

ಡಾ. ಪುಟ್ಟರುದ್ರಯ್ಯನವರು ಇಡೀ ರಾಷ್ಟ್ರದಲ್ಲಿಯೇ ಹೆಸರಾಂತ ಕೃಷಿ ಕೀಟಶಾಸ್ತ್ರಜ್ಞರೆಂದು ಬೇರೆ ಹೇಳಬೇಕಾಗಿಲ್ಲ. ಹಿಂದಿನ ಭಾರತೀಯ ಸಂಪ್ರದಾಯ ಪದ್ಧತಿಯಲ್ಲಿ ನಡೆದು ಬಂದವರು. ಅವರದೇ ಆದಂತಹ ನಿರ್ದಿಷ್ಟ ತತ್ವ ಸಿದ್ಧಾಂತದಲ್ಲಿ ಬದುಕಬೇಕೆಂಬ ಛಲ. ಲೆಸ್ಲಿ ಕೋಲ್‌ಮನ್‌ರವರ ತತ್ವ, ಸಿದ್ಧಾಂತಗಳನ್ನು ಚಾಚು ತಪ್ಪದೆ ಅನುಸರಿಸುತ್ತಾ ನಿಸ್ವಾರ್ಥಸೇವಾ ರೀತಿಯನ್ನು ಅಳವಡಿಸಿಕೊಂಡಿದ್ದರು.

ಹಿಂದೆ ಡಾ. ಕೋಲ್‌ಮನ್‌ರವರು ಕೃಷಿಪಾಠಶಾಲೆಯ ಪ್ರಾಂಶುಪಾಲರಾಗಿದ್ದಾಗಲೂ ಸಹ ಸಸ್ಯರೋಗಗಳ ಶಿಲೀಂಧ್ರಶಾಸ್ತ್ರ ಭೋದಕರಾಗಿ ಕೆಲಸ ಮಾಡುತ್ತಿದ್ದರು. ಇವರು ಮೊದಲ ಬಾರಿಗೆ ಬೊರ್ಡೋ ದ್ರಾವಣವನ್ನು ಅಡಿಕೆ ಕೊಳೆರೋಗ, ಕಾಫಿ

ಬೆಳೆಯ ರೋಗಗಳಿಗೆ ಸಿದ್ಧೌಷಧವಾಗಿ ಬಳಸಿದರು. ಇಂದಿಗೂ ರೈತರು ಈ ಬೆಳೆಗಳ ರೋಗ ನಿಯಂತ್ರಣಕ್ಕೆ ಅದನ್ನು ಉಪಯೋಗಿಸುತ್ತಿದ್ದಾರೆ. ಇವರು ಅಮೆರಿಕಾದ ಪದ್ಧತಿಯ ಬಳಕೆಯನ್ನು ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣೆಯಲ್ಲಿ ರೂಢಿಸಿಕೊಂಡಿದ್ದರು. ಡಾ. ಪುಟ್ಟರುದ್ರಯ್ಯನವರು ಸಹ ಡಾ.ಕೋಲ್‌ಮನ್‌ರವರ ಪರಂಪರೆ ಹಾಕಿಕೊಟ್ಟಂತಹ ತಳಪಾಯ ಹಾಗೂ ತತ್ವಗಳನ್ನು ಆಧಾರವಾಗಿಟ್ಟುಕೊಂಡು ಕಾಫಿ ಮತ್ತು ಅಡಿಕೆ ಬೆಳೆಯ ರೋಗಗಳಿಗೂ ಸಸ್ಯಸಂರಕ್ಷಣಾ ತಜ್ಞರಾಗಿ ರೈತರಿಗೆ ಶಿಫಾರಸ್ಸು ಮಾಡುತ್ತಿದ್ದರು. ಅನೇಕ ಲೇಖನಗಳನ್ನು ಬರೆದು ರಾಜ್ಯದಲ್ಲಿ ಬೆಳೆಯುವಂತಹ ಬೆಳೆಗಳ ವಿಚಾರವಾಗಿ ಮಾಹಿತಿಯನ್ನು ಒದಗಿಸುತ್ತಿದ್ದರು. ಕೀಟಶಾಸ್ತ್ರ ವಿಭಾಗದಲ್ಲಿ ರೈತರಿಗೋಸ್ಕರ ಸಂಶೋಧನೆಯನ್ನು ಕೈಗೊಂಡು ಸೂಕ್ತ ಪರಿಹಾರವನ್ನು ಒದಗಿಸುತ್ತಿದ್ದರು. ವಿಜ್ಞಾನ ಮತ್ತು ತಂತ್ರಜ್ಞಾನವನ್ನು ರೈತರಿಗೆ ಮುಟ್ಟಿಸುವಲ್ಲಿ ಪರಿಣತಿಯನ್ನು ಹೊಂದಿದ್ದರು.

ಡಾ.ಪುಟ್ಟರುದ್ರಯ್ಯರವರ ವ್ಯಕ್ತಿತ್ವವನ್ನು ಡಾ. ಲೆಸ್ಲಿ ಕೋಲ್‌ಮನ್‌ರವರು ಸಲ್ಲಿಸಿರುವ ಸೇವೆಗೆ ಹೋಲಿಸಬಹುದು. ಡಾ.ಕೋಲ್‌ಮನ್‌ರವರು ಒಬ್ಬ ಅತ್ಯುನ್ನತ ಶಿಲೀಂಧ್ರ ರೋಗಶಾಸ್ತ್ರಜ್ಞರಾದರೆ ಇವರಷ್ಟೆ ಸರಿಸಮಾನರಾಗಿ ಡಾ. ಪುಟ್ಟರುದ್ರಯ್ಯರವರು ಒಬ್ಬ ಅತ್ಯುನ್ನತ ಕೀಟಶಾಸ್ತ್ರಜ್ಞರು. ಸಸ್ಯ ಸಂರಕ್ಷಣೆ ಕ್ಷೇತ್ರದಲ್ಲಿ ರೈತರ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯುವ ಸಾಧನೆಯನ್ನು ಇವರಿಬ್ಬರೂ ಸಮಾನ ಸಾಮರ್ಥ್ಯದಲ್ಲಿ ನಡೆಸಿದ್ದಾರೆ. ಕೃಷಿ ಕ್ಷೇತ್ರದಲ್ಲಿ ಅಂದಿನ ಕಾಲದಲ್ಲಿ ಮೂಲಭೂತ ಸಂಶೋಧನೆಯ ವಿಜ್ಞಾನಿಯೆಂದರೆ ಡಾ.ಪುಟ್ಟರುದ್ರಯ್ಯನವರು.

1964ರಲ್ಲಿ ಕೃಷಿ ವಿಶ್ವವಿದ್ಯಾಲಯ ಪ್ರಾರಂಭವಾದ ಮೇಲೆ ಲ್ಯಾಂಡ್ ಗ್ರಾಂಟ್ ಪದ್ಧತಿಯ ಶಿಕ್ಷಣವಾಗಬೇಕೆಂದು ಪರಿಚಯಿಸುವಾಗ ಡಾ.ಪುಟ್ಟರುದ್ರಯ್ಯನವರ ಪ್ರಾಮಾಣಿಕ ಪ್ರಯತ್ನದಿಂದ ಈ ಹೊಸ ಪದ್ಧತಿಯನ್ನು ತಕ್ಷಣ ಪರಿಚಯಿಸಿ ಅನುಷ್ಠಾನಕ್ಕೆ ತರಲು ಸಾಧ್ಯವಾಯಿತು. ಇಂಥ ಹಲವು ಕಾರ್ಯ ನಿರ್ಣಯಗಳಿಂದ ಕರ್ನಾಟಕ ಕೃಷಿವಿಜ್ಞಾನ ಕ್ಷೇತ್ರವನ್ನು ಅಭಿವೃದ್ಧಿಪಡಿಸುವಲ್ಲಿ ಪ್ರಮುಖರಾದರು.

(ಪ್ರೊ.ಬಿ.ವಿ.ವೆಂಕಟರಾವ್‌ರವರು ಕೃಷಿ ಕಾಲೇಜಿನಲ್ಲಿ ಕೃಷಿ ರಾಸಾಯನಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಹಾಗೂ ಕೃಷಿ ವಿಶ್ವವಿದ್ಯಾಲಯದಲ್ಲಿ ಸಂವಹನ ಕೇಂದ್ರದ ಸಂಪಾದಕರಾಗಿ ನಿವೃತ್ತಿಯಾಗಿದ್ದಾರೆ. ಪ್ರೊ.ಬಿ.ವಿ.ವೆಂಕಟರಾವ್‌ರವರು 1946ರಿಂದ ಕೃಷಿ ಕಾಲೇಜಿನಲ್ಲಿ ಸುಮಾರು 25 ವರ್ಷಗಳ ಕಾಲ ಡಾ. ಪುಟ್ಟರುದ್ರಯ್ಯರವರ ನಿಕಟವರ್ತಿಯಾಗಿದ್ದರು.)

## ಡಾ. ಕೆ. ಕೃಷ್ಣಮೂರ್ತಿ

ಡಾ. ಪುಟ್ಟರುದ್ರಯ್ಯನವರ ನೇರ ವಿದ್ಯಾರ್ಥಿಯಾಗಿ ಹಾಗೂ ಅವರ ಸಹಪಾಠಿಯಾಗಿದ್ದ ನನಗೆ ಅವರ ವೃತ್ತಿಯ ಸವಿ ನೆನಪುಗಳು ಹಚ್ಚಹಸಿರಾಗಿ ಮನಸಿನಲ್ಲಿ ಬೇರೂರಿವೆ. ಡಾ. ಪುಟ್ಟರುದ್ರಯ್ಯನವರು ಮೈಸೂರು ರಾಜ್ಯದ ಕೀಟಶಾಸ್ತ್ರಜ್ಞರಾಗಿದ್ದಾಗ ನಮಗೆ ಕೀಟಶಾಸ್ತ್ರವನ್ನು ಬೋಧಿಸುತ್ತಿದ್ದರು. ಯಾವಾಗಲೂ ಅವರ ಉಪನ್ಯಾಸವನ್ನು

ಕೇಳಲು ನಮಗೆ ಸಂತೋಷ; ವಿಷಯ ತೃಪ್ತಿದಾಯಕವಾಗಿರುತ್ತಿತ್ತು. ಅವರು ಉಪನ್ಯಾಸ ಮಾಡುವಾಗ ಅವರದೇ ಆದಂತಹ ಒಂದು ಶೈಲಿಯಲ್ಲಿ, ಕೀಟಶಾಸ್ತ್ರ ವಿಷಯವನ್ನು ಸ್ಪಷ್ಟವಾಗಿ ಪಾರದರ್ಶಕವಾಗಿ ಬೋಧಿಸುತ್ತಿದ್ದರು. ಅದರಿಂದ ಕೀಟಶಾಸ್ತ್ರ ಕಲಿಯುವ ವಿದ್ಯಾರ್ಥಿಗಳಿಗೆ ಈ ವಿಷಯ ಕ್ಲಿಷ್ಟವಾಗಿರದೆ ಸುಲಭವೆನಿಸುತ್ತಿತ್ತು. ಅವರ ಉಪನ್ಯಾಸ, ವಿದ್ಯಾರ್ಥಿಗಳ ಮನಸ್ಸಿನಲ್ಲಿ ಅಚ್ಚೊತ್ತಿದಂತಾಗಿತ್ತು. ಅವರು ವಿದ್ಯಾರ್ಥಿಗಳಿಗೆ ಪ್ರಯೋಗ ಶಾಲೆಯಲ್ಲಿ ಬೋಧಿಸಿದ ನಂತರ ಪ್ರತ್ಯಕ್ಷವಾಗಿ ನೋಡಲು ಕ್ಷೇತ್ರ ವೀಕ್ಷಣೆಗೆಂದು ಅನೇಕ ಬೆಳೆಗಳ ತಾಕುಗಳಿಗೆ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಿ ಆ ಬೆಳೆಗೆ ಬೀಳುವ ಕೀಟಗಳ ಪೂರ್ಣ ವಿವರಗಳನ್ನು ನೀಡುತ್ತಿದ್ದರು.

ನಾನು ಬೆಂಗಳೂರಿನ ಕೃಷಿ ಕಾಲೇಜಿನಲ್ಲಿ ಓದುತ್ತಿರುವಾಗ ನನಗೆ ಅಷ್ಟಾಗಿ ಅವರ ಸಂಪರ್ಕವಿರಲಿಲ್ಲ. ಪದವಿಯ ಕೊನೆಯ ವರ್ಷದಲ್ಲಿ ಕೀಟಶಾಸ್ತ್ರದಲ್ಲಿ ಹೆಚ್ಚಿನ ಅಂಕಗಳನ್ನು ಪಡೆದ ಮೇಲೆ ನನ್ನನ್ನು ಕರೆದು ಅಭಿನಂದಿಸಿದರು. ಇದು ಅವರ ವಿಶಿಷ್ಟ ಗುಣ. ನಂತರದಲ್ಲಿ ನಾನು ಅವರಿಗೆ ಹತ್ತಿರದ ವ್ಯಕ್ತಿಯಾದೆ. ಪದವಿ ಮುಗಿದ ಮೇಲೆ ನನಗೆ ರಾಜ್ಯ ಕೃಷಿ ಇಲಾಖೆಯಲ್ಲಿ ಬಳ್ಳಾರಿ ಜಿಲ್ಲೆಯ ಹಗರಿಯ ಕೃಷಿ ಸಂಶೋಧನಾ ಕೇಂದ್ರದಲ್ಲಿ ಸೇವೆಗೆ ಸೇರಿದ ಮೇಲೆ ಆಗಾಗ ಬೆಳೆಗಳ ಕೀಟ ಪೀಡೆಗಳ ಬಗ್ಗೆ ಅವರ ಸಲಹೆ ಪಡೆಯುತ್ತಿದ್ದ ಒಂದು ಸಂದರ್ಭ. ಬೆಂಗಳೂರಿನಲ್ಲಿ ಜೈವಿಕ ನಿಯಂತ್ರಣದ ಪ್ರಯೋಗಾಲಯದಲ್ಲಿ ಉದ್ಯೋಗದ ಅವಕಾಶವಿತ್ತು ಅದಕ್ಕೆ ನಾನು; 'ನಾನು ಕೀಟಶಾಸ್ತ್ರದಲ್ಲಿ ಹೆಚ್ಚಿನ ಅಂಕಗಳನ್ನು ಗಳಿಸಿದ್ದೇನೆ. ಈ ವಿಷಯದ ಮೇಲೆ ಹೆಚ್ಚಿನ ಆಸಕ್ತಿ ಇರುವುದರಿಂದ ತಾವು ಮನಸ್ಸು ಮಾಡಿ ಇಲ್ಲಿಯೇ ಕೆಲಸ ಮಾಡಲು ಅವಕಾಶ ಕೊಡಬೇಕು'ಎಂದು ಕೇಳಿಕೊಂಡೆನು. ಆದರೆ ಅವರು ಚಿಕ್ಕವಯಸ್ಸಿನಲ್ಲಿ ಹೊರಗಿನ ಪ್ರಾಂತ್ಯಗಳಲ್ಲಿ ಕೆಲಸ ಮಾಡಿದರೆ ನಿಮಗೆ ಹೆಚ್ಚಿನ ಜ್ಞಾನ ಮತ್ತು ಅನುಭವ ಲಭ್ಯವಾಗುತ್ತವೆ. ಹೊರಗೆ ಅನುಭವ ಪಡೆದ ನಂತರ ಬೆಂಗಳೂರಿಗೆ ಬರುವಂತೆ ಸಲಹೆ ನೀಡಿದರು. ಹೊರಗಿನ ಜನರ ಕಷ್ಟ ಪ್ರತಿಯೊಬ್ಬರಿಗೂ ಅರ್ಥವಾಗಬೇಕು. ರೈತರ ಸಮಸ್ಯೆಗಳಿಗೆ ಅಧಿಕಾರಿಗಳು ಸ್ಪಂದಿಸಬೇಕು. ಸಮಸ್ಯೆಗಳಿಗೆ ಸಂಶೋಧಕರಾಗಿ ತಕ್ಷಣ ಪರಿಹಾರವನ್ನು ಒದಗಿಸಬೇಕು ಎಂಬುದಾಗಿ ಆಗಾಗ ಎಚ್ಚರಿಸುತ್ತಿದ್ದರು.

ಕೃಷಿವಿಶ್ವವಿದ್ಯಾಲಯ ಆರಂಭವಾದ ನಂತರ ನಾನು ಬೇಸಾಯ ಶಾಸ್ತ್ರದಲ್ಲಿ ಸಹ ಪ್ರಾಧ್ಯಾಪಕ ವೃತ್ತಿಯಲ್ಲಿ ಕೆಲಸ ಮಾಡುವಾಗ ನೇರ ಸಂಪರ್ಕ ಹೆಚ್ಚಾಯಿತು. ಎಲ್ಲಾ ಶಿಕ್ಷಕರಿಗೆ ಒಂದೇ ರೀತಿಯ ಆತ್ಮೀಯತೆಯ ಉತ್ತೇಜನದಿಂದ ಶಿಕ್ಷಕರ ಭವಿಷ್ಯ ಉಜ್ವಲವಾಗಿರಬೇಕೆಂದು ಆಶೀರ್ವದಿಸುತ್ತಿದ್ದರು. ನಾನು ಯಾವುದೇ ಕಾರಣಕ್ಕೂ ಡಾ. ಪುಟ್ಟರುದ್ರಯ್ಯನವರನ್ನು ಮರೆಯುವಂತಿಲ್ಲ. ಅವರು ವಿದ್ಯಾರ್ಥಿಗಳಿಗೆ ಜ್ಞಾನ ಒದಗಿಸುವಲ್ಲಿ ಅತ್ಯುತ್ತಮ ಅಧ್ಯಾಪಕರಾಗಿ ಹಾಗೂ ಪ್ರಾಂಶುಪಾಲರಾಗಿ ಮತ್ತು ಶಿಕ್ಷಣ ನಿರ್ದೇಶಕರಾಗಿ ದಕ್ಷ ಆಡಳಿತ ತೋರಿ ತಮ್ಮ ಹಿರಿಮೆ ಮೆರೆದಿದ್ದಾರೆ.

(ಡಾ. ಕೆ. ಕೃಷ್ಣಮೂರ್ತಿಯವರು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳು.)

**ಡಾ. ಜಿ.ಕೆ.ವಿರೇಶ್**

ಡಾ. ಪುಟ್ಟರುದ್ರಯ್ಯನವರು ಶಿಸ್ತು ಸಮಯಪಾಲನೆಗೆ ಹೆಸರುವಾಸಿಯಾಗಿದ್ದರು; ಸಮಯಕ್ಕೆ ಸರಿಯಾಗಿ ತರಗತಿಯಲ್ಲಿ ಬಂದು ಪಾಠಗಳನ್ನು ಪ್ರಾರಂಭಿಸುತ್ತಿದ್ದರು. ಆಗ 1954ರಲ್ಲಿ ಇವರೊಬ್ಬರೇ ಡಾಕ್ಟರೇಟ್ ಪದವಿ ಪಡೆದಿದ್ದ ಶಿಕ್ಷಕರು. ಕಾಲೇಜಿಗೆ ಜಯನಗರದಿಂದ ಹೆಬ್ಬಾಳದವರೆಗೆ ಸೈಕಲ್‌ನಲ್ಲಿಯೇ ಮಳೆ ಚಳಿಯನ್ನು ಲೆಕ್ಕಿಸದೇ ಕಾಲೇಜಿನಲ್ಲಿ ಬೆಲ್ ಮಾಡುವ ಮೊದಲೇ ಕ್ಲಾಸಿನಲ್ಲಿರುತ್ತಿದ್ದರು.

ಅವರೊಂದಿಗೆ ನನ್ನ ಮೊದಲ ಭೇಟಿ ಎರಡನೆಯ ವರ್ಷದ ಪದವಿಯ ಪರೀಕ್ಷೆಯ ಸಂದರ್ಶನದಲ್ಲಿ. 'ನೀವೆಲ್ಲಿಂದ ಬಂದಿದ್ದೀರಿ?' ಎಂದು ಕೇಳಿದ ಪ್ರಶ್ನೆಗೆ ನಾನು 'ಸಕಲೇಶಪುರದಿಂದ' ಅಂತ ಹೇಳಿದ ತಕ್ಷಣವೇ ನಂತರದ ಪ್ರಶ್ನೆ, 'ಯಾರ ಮನೆಯಿಂದ?' ನಾನು 'ಸಾರ್ 24 ಮೈಲಿ ದೂರದಲ್ಲಿರುವ ಗೊದ್ದು ಎಂಬ ಊರಿನಿಂದ ಬಂದಿದ್ದೇನೆ' ಎಂದು ಹೇಳಿದೆ. 'ತಂಬಲಗೇರಿಯಿಂದ ಎಷ್ಟು ದೂರ' ಎಂದು ಮತ್ತೊಂದು ಪ್ರಶ್ನೆ ಕೇಳಿದರು. '3 ಮೈಲಿಗಳು ಸಾರ್' ಎಂದು ತಿಳಿಸಿದೆ. ಅವರು ಮತ್ತು ಹೊರಗಿನಿಂದ ಪರೀಕ್ಷಕರಾಗಿ ಬಂದಿದ್ದ ಡಾ. ಬಾಪುರೆಡ್ಡಿಯವರಿಗೆ ಮಲೆನಾಡನ್ನು ವರ್ಣಿಸಿ ಅಲ್ಲಿನ ಜನರ ಆತ್ಮೀಯತೆ ಹಾಗೂ ಉಪಚಾರಗಳನ್ನು ಡಾ. ಪುಟ್ಟರುದ್ರಯ್ಯನವರು ವಿವರಿಸುತ್ತಿದ್ದರು. ಸಂದರ್ಶನದ ಪರೀಕ್ಷೆಯಲ್ಲಿ ಅವರು ನನಗೆ ಏಲಕ್ಕಿ ಕಂಬಳಿ ಹುಳುವಿನ ಹಾವಳಿಯ ಕುರಿತು ಒಂದು ಪ್ರಶ್ನೆಯನ್ನು ಕೇಳಿದ್ದರಷ್ಟೆ. ನಂತರ ನನ್ನ ಅವರ ಆತ್ಮೀಯ ಸಂಪರ್ಕ ನಾನು 1958-60ರಲ್ಲಿ ನನ್ನ ಮಾಸ್ಟರ್ ಡಿಗ್ರಿ ಮಾಡಲು ನವದೆಹಲಿಯ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಗೆ ತೆರಳಿದ್ದೆ. ಅವರು ಆಗಾಗ ಅಲ್ಲಿಗೆ ಬರುತ್ತಿದ್ದರು. ಅಲ್ಲಿ ಅವರನ್ನು ಭೇಟಿಯಾಗುತ್ತಿದ್ದೆ. ಡಾ. ಪುಟ್ಟರುದ್ರಯ್ಯನವರು ಆಗಿಂದ್ದಾಗ್ಗೆ ಭಾರತೀಯ ಕೃಷಿ ಅನುಸಂದಾನ ಪರಿಷತ್(ICAR)ನಲ್ಲಿ ಕೆಲವು ಸಭೆಗಳಲ್ಲಿ ಭಾಗವಹಿಸಲು ಬರುತ್ತಿದ್ದರು. ಆಗ ದೆಹಲಿಯ ಅತಿಥಿ ಗೃಹಗಳ ಅಭಾವದಿಂದಾಗಿ ನಮ್ಮ ಹಾಸ್ಟೆಲ್ ರೂಮುಗಳಲ್ಲೇ ಸ್ಥಳಾವಕಾಶವನ್ನು ಮಾಡಬೇಕಾಗುತ್ತಿತ್ತು. ಆಗ ಅವರು ವಿದ್ಯಾರ್ಥಿಗಳ ಮಂಚಗಳ ಮೇಲೆ ಮಲಗುತ್ತಿರಲಿಲ್ಲ. ನೆಲದ ಮೇಲೆ ಹಾಸಿಗೆ ಹಾಸಿ ಮಲಗುತ್ತಿದ್ದರು.

ನಾನು ಸ್ನಾತಕೋತ್ತರ ಡಿಗ್ರಿ ಮುಗಿಸಿದನಂತರ ಕೃಷಿ ಇಲಾಖೆ ನಿರ್ದೇಶಕರಿಗೆ ಪತ್ರವೊಂದನ್ನು ಕೊಟ್ಟು ಕೀಟಶಾಸ್ತ್ರ ವಿಭಾಗದಲ್ಲಿ ಉಪನ್ಯಾಸಕರಾಗಿ ನನ್ನನ್ನು ನೇಮಕ ಮಾಡುವಂತೆ ತಿಳಿಸಿದ್ದರು. ನಂತರ ಕೀಟಶಾಸ್ತ್ರ ವಿಭಾಗದಲ್ಲಿ ಕಡಿಮೆ ಉಪನ್ಯಾಸಕರಿದ್ದುದರಿಂದ ಹೆಚ್ಚಿನ ಕೆಲಸದ ಭಾರ ನನ್ನ ಮೇಲಿದ್ದಿದುರಿಂದ ಅದು ನನ್ನ ಮುಂದಿನ ಭವಿಷ್ಯವನ್ನು ಉತ್ತಮವಾಗಿ ರೂಪಿಸಿಕೊಳ್ಳಲು ಸದೃಢ ತಳಪಾಯವಾಯಿತು.

ವಿದ್ಯಾರ್ಥಿಗಳು ತಪ್ಪು ಮಾಡಿದಾಗ ಹಾಗೂ ಬೇಜವಾಬ್ದಾರಿಯಿಂದ ವರ್ತಿಸಿದಾಗ ಸಿಟ್ಟುಮಾಡಿಕೊಂಡು ಬೈದರೂ ಸಹ ನಂತರ ಅವರ ಮನಸ್ಸಿನಲ್ಲಿ ತಾವೇ ತಪ್ಪು

ಮಾಡಿರುವರೆಂಬ ಭಾವನೆ ಬಂದು ಬೆಣ್ಣೆಯಂತೆ ಮನಸ್ಸು ಕರಗಿ ವಿದ್ಯಾರ್ಥಿಗಳಿಗೆ ಸಂತೈಸಿ ಸಮಾಧಾನ ಮಾಡುತ್ತಿದ್ದರು.

ಡಾ. ಪುಟ್ಟರುದ್ರಯ್ಯನವರಿಗೆ ಗೊತ್ತಾಗದೆ ಕೇಂದ್ರ ಸರ್ಕಾರದ ಒಂದು ಹುದ್ದೆಗೆ ಅರ್ಜಿಯನ್ನು ಸಲ್ಲಿಸಿದ್ದೆ. ಈ ಹುದ್ದೆಗೆ ಸಂದರ್ಶನಕ್ಕೇನಾದರೂ ಕರೆದರೆ ಸರ್ಕಾರದ ಖರ್ಚಿನಲ್ಲಿ ದೆಹಲಿಗೆ ಹೋಗಬಹುದು ಹಾಗೂ ಸ್ನೇಹಿತರನ್ನೆಲ್ಲ ಭೇಟಿಯಾಗಬಹುದೆಂಬ ಆಲೋಚನೆಯಲ್ಲಿ ಈ ವಿಷಯ ಡಾ.ಪುಟ್ಟರುದ್ರಯ್ಯನವರಿಗೆ ತಿಳಿಸಿರಲಿಲ್ಲ. ಅದು ಬಿಹಾರ ರಾಜ್ಯದ ರಾಂಚಿಯಲ್ಲಿನ ನಾಂಕುಂ ಲ್ಯಾಕ್ ರಿಸರ್ಚ್ ಇನ್‌ಸ್ಟಿಟ್ಯೂಟಿನಲ್ಲಿ ಸಹಾಯಕ ಕೀಟಶಾಸ್ತ್ರಜ್ಞ ಹುದ್ದೆಯಾಗಿತ್ತು. ಸಂದರ್ಶನಕ್ಕೆ ಕರೆಯೂ ಬಂದಿತು. ಸಂದರ್ಶನದ ಪ್ಯಾನೆಲ್‌ನಲ್ಲಿ ಡಾ. ಪುಟ್ಟರುದ್ರಯ್ಯನವರಿಗೆ ಆಪ್ತರಾಗಿದ್ದ ಕೃಷಿ ಆಯುಕ್ತರಾದ ಡಾ. ಪಟೇಲ್ ಮತ್ತು ಸಸ್ಯ ಸಂರಕ್ಷಣಾ ಸಲಹೆಗಾರರಾಗಿದ್ದ ಡಾ. ಬಾಪುರೆಡ್ಡಿಯವರಿದ್ದರು. ಈ ಕೆಲಸ ನನಗೆ ಸಿಕ್ಕುತದೆಂಬ ಭರವಸೆ ಇರಲಿಲ್ಲವಾದರೂ ಸಂದರ್ಶನ ಉತ್ತಮವಾಗಿದ್ದುದರಿಂದ ನಾನು ಆಯ್ಕೆಯಾಗಿ ರಿಪೋರ್ಟ್ ಮಾಡಿಕೊಳ್ಳಲು ಆದೇಶವು ಬಂದಿತು. ರಾಂಚಿಗೆ ಹೋಗಿ ರಿಪೋರ್ಟ್ ಮಾಡಿಕೊಳ್ಳಲು ಬಹಳ ಹೆಮ್ಮೆಯಿಂದ ಆ ಪತ್ರವನ್ನು ತೆಗೆದುಕೊಂಡು ಹೋಗಿ ಡಾ. ಪುಟ್ಟರುದ್ರಯ್ಯನವರಿಗೆ ತೋರಿಸಿ ಅವರು ನೋಡಿದ ಮೇಲೆ ಬಹಳ ಸಂತೋಷದಿಂದ ಆಶೀರ್ವದಿಸುತ್ತಾರೆಂಬ ನಂಬಿಕೆಯಿಂದ ಹೆಮ್ಮೆಯಿಂದ ಅವರೆದುರು ನಿಂತಿದ್ದೆ. ಪತ್ರ ಓದಿದ ಮೇಲೆ ಖಿನ್ನರಾಗಿ ಅದನ್ನು ಎಸೆದು, 'ನನಗೆ ನೀನು ಒಂದು ಕಾಲು ಒಳಗೆ, ಮತ್ತೊಂದು ಕಾಲು ಹೊರಗೆ ಇಟ್ಟಿರುವುದು ಇಷ್ಟವಿಲ್ಲ. ಯಾವುದೇ ಗುರುತರವಾದ ಕೆಲಸ ಮಾಡದೇ ಮುಂದೆ ಹೋಗಬೇಕೆಂಬ ಚಪಲ ಹಿಡಿಸುವುದಿಲ್ಲ. ನಿನಗೆ ಇಷ್ಟವಿದ್ದಂತೆ ಮಾಡು' ಎಂದಷ್ಟೇ ಹೇಳಿದರು. ಅವರ ಆ ಮಾತು ನನಗೆ ದೊಡ್ಡ ಕೆಲಸ ಸಿಕ್ಕಿದೆ ಎಂಬ ಅಸೂಯೆಯಿಂದಲ್ಲ. ಆದರೆ ಈಗಿನ ಕಾಲದ ಹುಡುಗರು ಒಂದೆಡೆ ಉಳಿದು ಕೆಲಸ ಮಾಡುವ ಅವಕಾಶವನ್ನು ಬಿಟ್ಟು ಮತ್ತೊಂದು ಕಡೆ ಹಾರುವ ಅಭ್ಯಾಸ ಅವರಿಗೆ ಇಷ್ಟವಾಗುತ್ತಿರಲಿಲ್ಲ. ಹೋದಲ್ಲಿಯೂ ಸರಿಯಾಗಿ ಕೆಲಸ ಮಾಡದೇ ಮುಂದೆ ಏನಾದರೂ ದೊಡ್ಡಹುದ್ದೆ ಸಿಕ್ಕಬಹುದೆಂದು ಯೋಚಿಸುತ್ತಿರುತ್ತಾರಲ್ಲ ಎಂದು ತಿಳಿಸಿದ್ದರು.

ಒಂದು ಸಾರಿ ಜಯನಗರದಿಂದ ಅವರು ಕಾರಿನಲ್ಲಿ ಬರುವಾಗ ಅತಿ ವೇಗದಿಂದ ಕಾರು ಓಡಿಸುತ್ತಿದ್ದರೆಂದು ಪೊಲೀಸರು ಅವರಿಗೆ ಕೋರ್ಟ್ ಮೆಟ್ಟಿಲು ಹತ್ತುವಂತೆ ಮಾಡಿದ್ದರಂತೆ. ತಪ್ಪು ಮಾಡದೇ ಇದ್ದರೂ ಪೊಲೀಸರು ನನ್ನನ್ನು ಶಿಕ್ಷೆಗೆ ಗುರಿಪಡಿಸಿದ್ದರೆಂದು ಬಹಳ ಬೇಸರದಿಂದ ಇದ್ದರಂತೆ. ಪೋಲಿಸರು ಹೆಚ್ಚಿನ ವೇಗದಲ್ಲಿ ಓಡಿಸುವವರನ್ನು ಬಿಟ್ಟು ಕಡಿಮೆ ವೇಗದಲ್ಲಿ ಓಡಿಸುವವರನ್ನು ಅತ್ಯಂತ ಹೆಚ್ಚಿನ ವೇಗದಲ್ಲಿ ಓಡಿಸುತ್ತಾರೆಂದು ಕೇಸ್ ಬುಕ್ ಮಾಡಿ ತಪ್ಪು ಮಾಡಿರುವರೆಂದು ಕೋರ್ಟ್ ಮೆಟ್ಟಲೇರಿಸಿದ ವ್ಯಸನವನ್ನು ಆಗಾಗ್ಗೆ ಅವರು ವ್ಯಕ್ತ ಪಡಿಸುತ್ತಿದ್ದರು.

ಇವರು ನಿವೃತ್ತಿಯಾದ ಮೇಲೆ ಒಂದು ಸಾರಿ ಹುಷಾರಿಲ್ಲದೇ ಆಸ್ಪತ್ರೆಯಲ್ಲಿರುವಾಗ ನಾನು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಭೇಟಿಯಾದಾಗ ಅವರು ಬರೆದಿರುವ ಪುಸ್ತಕಗಳ

ಸಂಭಾವನೆ ಹಾಗೂ ಕೃಷಿ ವಿಶ್ವವಿದ್ಯಾಲಯದಿಂದ ಬರುವಂತಹ ಹಣವನ್ನು ಒಟ್ಟು ಸೇರಿಸಿ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ನೀಡುವಂತೆ ತಿಳಿಸಿದರು. ಕಾರಣಾಂತರದಿಂದ ತಡವಾದದ್ದರಿಂದ ಅವರ ಹಳೆ ವಿದ್ಯಾರ್ಥಿಗಳೆಲ್ಲರೂ ಸೇರಿ ಅವರ ನೆನಪಿಗಾಗಿ ಒಂದು ದತ್ತಿ ಸಮಿತಿ ಮಾಡಿ ಸೂಕ್ತ ಕಾರ್ಯಕ್ರಮಗಳನ್ನು ಕೃಷಿ ವಿಶ್ವವಿದ್ಯಾಲಯದಲ್ಲಿ ಹಾಗೂ ಬೆಂಗಳೂರಿನ ಕೃಷಿ ತಂತ್ರಜ್ಞರ ಸಂಸ್ಥೆಯಲ್ಲಿ ನಡೆಸುವಂತೆ ತಿರ್ಮಾನಗೊಳಿಸಿ ನಡೆಸಿಕೊಂಡು ಹೋಗುತ್ತಿದ್ದೇವೆ.

ನಾನೇನಾದರೂ ಸ್ವಲ್ಪಮಟ್ಟಿಗೆ ಹೆಚ್ಚಿನ ಉತ್ತಮ ಕೆಲಸವನ್ನು ಮಾಡಿದ್ದರೆ ಅದಕ್ಕೆ ಮುಖ್ಯ ಕಾರಣ ನನ್ನ ಗುರುಗಳಾದ ಡಾ. ಪುಟ್ಟರುದ್ರಯ್ಯರವರು. ಅವರು ನಡೆದ ಹೆಜ್ಜೆ ಹಾಗೂ ನಡೆದ ಹಾದಿಯನ್ನು ನನ್ನ ಅಂತರಾಳದಲ್ಲಿಟ್ಟುಕೊಂಡಿದ್ದೇನೆ ಹಾಗೂ ನನ್ನ ಕೊನೆಯುಸಿರುವವರೆಗೂ ಆ ಸವಿನೆನಪು ನನ್ನ ಹೃದಯದಲ್ಲಿ ಸದಾ ಉಳಿದಿರುತ್ತದೆ.

(ಡಾ. ಜಿ.ಕೆ.ವಿರೇಶ್‌ರವರು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳು ಹಾಗೂ ಡಾ.ಪುಟ್ಟರುದ್ರಯ್ಯನವರ ಮೊದಲ ಡಾಕ್ಟರೇಟ್ ವಿದ್ಯಾರ್ಥಿ.)

## ಪ್ರೊ. ಆರ್.ರಾಮಯ್ಯ

ಡಾ. ಪುಟ್ಟರುದ್ರಯ್ಯನವರು ಅತ್ಯುನ್ನತ ದರ್ಜೆಯ ಕೀಟಶಾಸ್ತ್ರಜ್ಞರು ಹಾಗೂ ಶಿಕ್ಷಕರು. ಉತ್ತಮ ವಾಗ್ಮಿಗಳಾಗಿ ವಿದ್ಯಾರ್ಥಿಗಳ ಹಾಗೂ ರಾಜ್ಯದ ರೈತರ ಮನಗಳನ್ನು ಗೆದ್ದವರು. ರಾಜ್ಯದಲ್ಲಿ ಕೀಟಶಾಸ್ತ್ರಜ್ಞರಾಗಿ ಹಾಗೂ ಸಸ್ಯ ಸಂರಕ್ಷಣಾ ಅಧಿಕಾರಿಯಾಗಿ ಇಡೀ ಕೃಷಿ ಕ್ಷೇತ್ರದಲ್ಲಿ ಉನ್ನತ ವಿಜ್ಞಾನಿಯೆಂದು ಗುರುತಿಸಿಕೊಂಡಿದ್ದರು. ಗುರುಗಳು ಎಂದರೆ ವಿದ್ಯಾರ್ಥಿಗಳ ಒಳಿತನ್ನು ಬಯಸುವವರಾಗಿರಬೇಕು. ಭಕ್ತಿ ಭಾವ ಹೊರಹೊಮ್ಮುವಂತಿರಬೇಕು. ಅವರ ಉದಾತ್ತ ಭಾವ ಆದರ್ಶಗಳನ್ನು ವಿದ್ಯಾರ್ಥಿಗಳು, ಹಿತೈಷಿಗಳು ಅತ್ಯಂತ ಒಲವಿನಿಂದ ಪಾಲಿಸುವಂತಾಗಬೇಕು. ಈ ಎಲ್ಲಾ ಗುಣಗಳನ್ನು ಡಾ. ಪುಟ್ಟರುದ್ರಯ್ಯರವರು ಮೈಗೂಡಿಸಿಕೊಂಡಿದ್ದರು.

ಆದುದರಿಂದ ಡಾ. ಪುಟ್ಟರುದ್ರಯ್ಯರವರ ಕೊಡುಗೆ, ಸೇವೆ ಮತ್ತು ವಿದ್ಯಾರ್ಥಿಗಳ ಮತ್ತು ರೈತರುಗಳ ಮೇಲಿದ್ದ ಪ್ರೀತಿಯನ್ನು ಸ್ಮರಿಸುತ್ತಾ ಅವರ ಹಳೆ ವಿದ್ಯಾರ್ಥಿಗಳು ಮತ್ತು ಸಹಪಾಠಿಗಳು ಸೇರಿ ಇವರ ಸವಿನೆನಪಿನಲ್ಲಿ ಕೃಷಿವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿವೇತನ ಹಾಗೂ ಚಿನ್ನದಪದಕವನ್ನು ನೀಡುವ ಸಲುವಾಗಿ ಡಾ.ಪುಟ್ಟರುದ್ರಯ್ಯನವರ ಹೆಸರಿನಲ್ಲಿ ಅವರ ಜ್ಞಾಪಕಾರ್ಥವಾಗಿ ಒಂದು ದತ್ತಿ ಸಮಿತಿಯನ್ನು ಮಾಡಲಾಗಿದ್ದು ಇದೇ ರೀತಿಯಾಗಿ ಕೃಷಿ ತಂತ್ರಜ್ಞರ ಸಂಸ್ಥೆಯಲ್ಲಿ ಸಸ್ಯ ಸಂರಕ್ಷಣಾ ಕ್ಷೇತ್ರದಲ್ಲಿ ಉತ್ತಮ ಕೊಡುಗೆಗಾಗಿ ರಾಷ್ಟ್ರಿಯ ಪ್ರಶಸ್ತಿಯನ್ನು ನೀಡುವಂತೆ ಮತ್ತು ಅವರ ಹೆಸರಿನಲ್ಲಿ ಉಪನ್ಯಾಸಗಳನ್ನು ಕೈಗೊಳ್ಳುವಂತೆ ತೀರ್ಮಾನಿಸಲಾಗಿದೆ. ಇಂದಿಗೂ ಈ ಎರಡು ಸಂಸ್ಥೆಗಳು ಅರ್ಥಪೂರ್ಣವಾದ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿವೆ.

(ಪ್ರೊಫೆಸರ್ ಆರ್.ರಾಮಯ್ಯನವರು ಕೃಷಿವಿಶ್ವವಿದ್ಯಾಲಯದಲ್ಲಿ ದೀರ್ಘಕಾಲ ಕೃಷಿ ಇಂಜಿನಿಯರಿಂಗ್ ವಿಭಾಗದಲ್ಲಿ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾಗಿ ಸೇವೆಯನ್ನು ಸಲ್ಲಿಸಿ ನಿವೃತ್ತಿಯಾಗಿರುತ್ತಾರೆ.)

## ಶ್ರೀ ಹಳಸೆ ಬೈರೇಗೌಡರು

ನನಗೆ ಡಾ.ಪುಟ್ಟರುದ್ರಯ್ಯನವರ ಮೊಟ್ಟ ಮೊದಲ ಸಂಪರ್ಕವಾದದ್ದು ಸುಮಾರು 1940ರ ಅವಧಿಯಲ್ಲಿ. ಅವರು ಹಳೇಕೋಟೆ ಗ್ರಾಮಕ್ಕೆ ಭೇಟಿಕೊಟ್ಟು ಕಾಫಿ ತೋಟಗಳಲ್ಲಿ ಬೆಳೆಗೆ ಬರುವ ಹಲವಾರು ತೊಂದರೆಗಳ ಬಗ್ಗೆ ಕೂಲಂಕುಶವಾಗಿ ಚರ್ಚಿಸುತ್ತಿದ್ದರು. ಡಾ.ಪುಟ್ಟರುದ್ರಯ್ಯನವರನ್ನು ಕಂಡಾಗಲೆಲ್ಲ ಅವರಲ್ಲಿ ಒಂದು ಮನೋವ್ಯಥೆ ಎದ್ದು ಕಾಣುತ್ತಿತ್ತು. ಅದೇನೆಂದರೆ, ಹೊರದೇಶದಿಂದ ಬಂದು ಈ ಕಾಡು ಮೇಡುಗಳನ್ನೆಲ್ಲಾ ಸುತ್ತಿ ಕಾಫಿಯನ್ನು ಬೆಳೆಯುತ್ತಿದ್ದ ಯೂರೋಪಿಯನ್ನರ ಜೀವನಕ್ಕೂ, ಇಲ್ಲಿಯೇ ಹುಟ್ಟಿ ಬೆಳೆದ ಅಷ್ಟೋ ಇಷ್ಟೋ ಕಾಫಿಯನ್ನು ಬೆಳೆಯುತ್ತಿದ್ದ ಸ್ಥಳಿಯ ಬೆಳೆಗಾರರಿಗೂ ಇದ್ದ ಅಂತರ. ಈ ಸಂಗತಿಯಿಂದ ಅವರು ಬಹಳಷ್ಟು ವ್ಯಥೆಪಟ್ಟುಕೊಳ್ಳುತ್ತಿದ್ದರು. ಹಾಗೆಯೇ ದೇಶೀಯರೇ ಹೊರ ರಾಜ್ಯಗಳಿಂದ ಬಂದು ಅಂದಿನ ಮೈಸೂರು ಸಂಸ್ಥಾನದ ಕಾಡುಗಳನ್ನು ಬರಿದು ಮಾಡುತ್ತಿದ್ದುದು ಅವರ ಮಾನಸಿಕ ನೋವಿಗೆ ಕಾರಣವಾಗಿತ್ತು. ಸ್ಥಳೀಯರಿಗೆ, 'ನೀವೇಕೆ ಅವರಂತೆ ಬಾಳಬಾರದು, ಬುದ್ಧಿವಂತರಾಗಬಾರದು ಕಾಫಿ ಕೃಷಿಯಲ್ಲಿ ನಿಮಗೇಕೆ ಆಲಸ್ಯ?' ಇಂತಹ ಹಲವಾರು ಪ್ರಶ್ನೆಗಳನ್ನು ಕಂಡ ಕಂಡ ಸ್ಥಳೀಯ ಬೆಳೆಗಾರರನ್ನೆಲ್ಲಾ ಪ್ರಶ್ನಿಸುತ್ತಿದ್ದರು.

ಡಾ. ಪುಟ್ಟರುದ್ರಯ್ಯನವರು ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೆಲಸ ಮಾಡುವಾಗ ಯಾವುದೇ ವಾಹನ ಸಂಪರ್ಕವಿರಲಿಲ್ಲ. ಪ್ರತಿದಿನ ಹತ್ತಾರು ಮೈಲಿ ಕಾಲ್ನಡಿಗೆಯಲ್ಲಿ ಹೋಗಿ ಕಾಫಿ ಬೆಳೆಯಲ್ಲಿ ಕಾಣಿಸಿಕೊಳ್ಳುವಂತಹ ಕಾಂಡ ಕೊರೆಯುವ ಹುಳುಗಳು ಮತ್ತು ಇತರ ಕೀಟ-ರೋಗಗಳನ್ನು ಪತ್ತೆ ಮಾಡಿ ಗುರುತಿಸಿ ಸೂಕ್ತ ನಿಯಂತ್ರಣ ಮಾಹಿತಿಯನ್ನು ಒದಗಿಸುತ್ತಿದ್ದರು. ಅವರಿಗೆ ದಿನದ 24 ಗಂಟೆಗಳು ಸಾಕಾಗುತ್ತಿರಲಿಲ್ಲ. ಅತ್ಯಂತ ಶ್ರಮಜೀವಿಗಳು, ಯಾವುದೇ ಆಡಂಬರವಿಲ್ಲದ ಜೀವನ, ಕರ್ತವ್ಯದಲ್ಲಿ ನಿಷ್ಠೆ ತೋರುತ್ತಿದ್ದರು ಹಾಗೂ ರೈತರಿಗೆ ಆಗುತ್ತಿದ್ದ ನಷ್ಟ ತಮಗೇ ಆದ ನಷ್ಟದಂತೆ ಚಡಪಡಿಸುತ್ತಿದ್ದರು.

ಡಾ.ಪುಟ್ಟರುದ್ರಯ್ಯನವರು ಸಸ್ಯಸಂರಕ್ಷಣಾ ತಜ್ಞರಾಗಿ ಮಲೆನಾಡಿನ ಚಿಕ್ಕಮಗಳೂರು, ಮೂಡಿಗೆರೆ, ಸಕಲೇಶಪುರ ತಾಲ್ಲೂಕುಗಳಲ್ಲಿದ್ದ ಜನರಿಗೆ ಮನೆಮಾತಾಗಿದ್ದರು. ಈ ಪ್ರಾಂತ್ಯದ ರೈತರಿಗೆ ಹಾಗೂ ವಿದ್ಯಾರ್ಥಿಗಳಿಗೆ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣವನ್ನು ಪಡೆಯುವಲ್ಲಿ ಹೆಚ್ಚಿನ ಉತ್ತೇಜನವನ್ನು ನೀಡುತ್ತಿದ್ದರು. ಮಲೆನಾಡಿನಿಂದ ಬಂದಿರುವ ಹುಡುಗರ ವಿದ್ಯಾಭ್ಯಾಸದ ಬಗ್ಗೆ ಪಾಲಕರು ಕೇಳಿದಾಗಲೆಲ್ಲಾ ಸಂಬಂಧಪಟ್ಟ ಉಪಾಧ್ಯಾಯರನ್ನು ಕರೆಸಿ ಸೂಕ್ತ ಮಾಹಿತಿಯನ್ನು ಕೊಡಿಸುತ್ತಿದ್ದರು. ಎಲ್ಲಾ ಪಾಲಕರು ಹೀಗೆ ಬಂದು ವಿಚಾರಿಸುತ್ತಿದ್ದರೆ ಇನ್ನು ಹೆಚ್ಚಿನ ಪ್ರಗತಿ ನಮ್ಮ ವಿದ್ಯಾರ್ಥಿಗಳು

ಸಾಧಿಸುತ್ತಾರೆಂದು ಹೇಳುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ತಾವೇ ಖುದ್ದಾಗಿ ವಿದ್ಯಾರ್ಥಿಗಳನ್ನು ವಿಚಾರಿಸಿ ಕಾಳಜಿ ತೋರುತ್ತಿದ್ದರು.

(ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಹಳಸೆ ಎಸ್ಟೇಟಿನ ಮಾಲೀಕರಾಗಿದ್ದ ಬೈರೇಗೌಡರು ಡಾ. ಪುಟ್ಟರುದ್ರಯ್ಯನವರ ಒಡನಾಟದ ಕೆಲವು ಸವಿನೆನಪುಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ. ಹಳಸೆ ಬೈರೇಗೌಡರ ಹಿರಿಯ ಮಕ್ಕಳಾದ ಎಚ್.ಬಿ.ರಾಜಗೋಪಾಲ್‌ರವರು ಡಾ.ಪುಟ್ಟರುದ್ರಯ್ಯನವರ ಶಿಷ್ಯರಾಗಿ 1967ನೇ ಸ್ನಾತಕ ಪದವಿಯಲ್ಲಿ ತೇರ್ಗಡೆ ಹೊಂದಿ ಸ್ವತಃ ಕೃಷಿಕರಾಗಿ ಬಾಳೆಹೊನ್ನೂರಿನ ಹತ್ತಿರವಿರುವ ಹೂವಿನಕ್ಕಲು ಎಸ್ಟೇಟಿನ ಮಾಲೀಕರಾಗಿರುತ್ತಾರೆ.)

## ಶ್ರೀ ಎನ್.ಕೆ.ಪುಟ್ಟೇಗೌಡರು

ಡಾ. ಪುಟ್ಟರುದ್ರಯ್ಯನರು ಒಬ್ಬ ಸರಳ ವ್ಯಕ್ತಿ, ರೈತರ ಸ್ನೇಹಿ, ಸಸ್ಯ ಸಂರಕ್ಷಣೆಯಲ್ಲಿ ಆಳವಾದ ಜ್ಞಾನವನ್ನು ಸಂಪಾದಿಸಿದವರು. ಯಾವುದೇ ಸಮಸ್ಯೆಯನ್ನು ವಿಚಾರಿಸಿದರೆ ಅತ್ಯಂತ ಸಂತೋಷದಿಂದ ಹಸನ್ಮುಖಿಗಳಾಗಿ ಮಾರ್ಗದರ್ಶನ ನೀಡುತ್ತಿದ್ದರು. 1940ರ ದಶಕದಲ್ಲಿ ಕಾಫಿ ಬೆಳೆಯಲ್ಲಿ ಸಸ್ಯ ಸಂರಕ್ಷಣೆಯ ಸಮಸ್ಯೆಗಳ ಬಗ್ಗೆ ಸೂಕ್ತ ಸಲಹೆ ನೀಡುತ್ತಿದ್ದರು. ಆವತ್ತಿನ ದಿನಗಳಲ್ಲಿ ನಾವು ಕಂಡಂತ ಅಪರೂಪದ ವಿಜ್ಞಾನಿ.

ಕಾಫಿಗೆ ಮಾರಕವಾಗಿದ್ದ ಕಾಂಡ ಕೊರೆಯುವ ಹುಳು ಮತ್ತು ರಸ ಹೀರುವ ತಿಗಣೆಗಳ ಬಗ್ಗೆ ಹಾಗೂ ರೋಗಗಳ ನಿಯಂತ್ರಣಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಇಡೀ ಚಿಕ್ಕಮಗಳೂರು ಜಿಲ್ಲೆಯ ರೈತರುಗಳಿಗೆ ಮೊದಲು ಒದಗಿಸಿದವರೇ ಡಾ. ಪುಟ್ಟರುದ್ರಯ್ಯನವರೆಂದು. ಇವರು ನಮ್ಮ ಕಾಫಿ ಬೆಳೆ ಬಂಧುವೆಂದರೆ ಉತ್ತ್ರೇಕ್ಷೆಯಾಗಲಾರದು.

(ಶ್ರೀ ಎನ್.ಕೆ.ಪುಟ್ಟೇಗೌಡರು ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಸಿರಿಗೂರು ಎಸ್ಟೇಟಿನ ಮಾಲಿಕರು.)

## ಎಚ್.ಎಲ್. ಕೇಶವಮೂರ್ತಿ

ಡಾ. ಮಾಗಡಿ ಪುಟ್ಟರುದ್ರಯ್ಯನವರು ಒಬ್ಬ ಪ್ರಖ್ಯಾತ ವಿಜ್ಞಾನಿ, ಮಾನವೀಯತೆಯ ಸಾಕಾರ ಮೂರ್ತಿ. ಬಡ ವಿದ್ಯಾರ್ಥಿಗಳ ಬಗ್ಗೆ ಇವರಿಗಿದ್ದ ಕಾಳಜಿ ಅನೇಕ ಶಿಕ್ಷಕರು ಕಲಿಯುವಂತಹದು. ಪರಿಸರವನ್ನು ಹಾಳುಮಾಡುವವರ ವಿರುದ್ಧ ಹಾಗೂ ವಿಜ್ಞಾನಿಗಳ ಗೊಡ್ಡು ಆಚರಣೆಗಳ ವಿರುದ್ಧ ಇವರು ತಳೆದಂತ ನಿಲುವು ಇವರ ವ್ಯಕ್ತಿತ್ವವನ್ನು ತೆರೆದು ಬಿಂಬಿಸುತ್ತದೆ. ಇವರು ಹೆಚ್ಚು ಕಡಮೆ ಎಲ್ಲಾ ರೀತಿಯ ಕೀಟಪೀಡೆಗಳ ಬಗ್ಗೆ ಸಂಶೋಧನೆ ನಡೆಸಿದ್ದಾರೆ, ಅವುಗಳ ನಿಯಂತ್ರಣದ ಬಗ್ಗೆಯೂ ತಿಳಿಸಿದ್ದಾರೆ. ವಿದ್ಯಾರ್ಥಿಗಳ ಹಾಸ್ಟೆಲಿಗೂ ಭೇಟಿ ಇತ್ತು ವಿದ್ಯಾರ್ಥಿಗಳಿಗೆ 'ಆಹಾರವನ್ನು ಅಪವ್ಯಯ ಮಾಡಬೇಡಿ, ತಾವು ಬಿಸಾಕೊ ಅನ್ನದಿಂದ ಬಡತನದಲ್ಲಿನ ಹತ್ತು ಜನ ಬದುಕುಬಹುದು' ಎಂದು ತಿಳಿಸುತ್ತಿದ್ದರು. ವಿದ್ಯಾರ್ಥಿಗಳಿಂದ ಅಥವಾ ಸಹೋದ್ಯೋಗಿಗಳಿಂದ ಯಾವುದೇ ರೀತಿಯ ಸನ್ಮಾನಕ್ಕೆ ಹಾತೊರೆಯುತ್ತಿರಲಿಲ್ಲ. 'ನನ್ನ ಸನ್ಮಾನಕ್ಕಾಗಿ ನೀವು ಖರ್ಚು

ಮಾಡುವ ಹಣವನ್ನು ಬಡ ವಿದ್ಯಾರ್ಥಿಗಳ ನಿಧಿಗೆ ಕೊಡಿ, ಒಂದಷ್ಟು ಓದಿಸಿದ ಪುಣ್ಯವಾದರೂ ನಿಮಗೆ ಬರುತ್ತದೆ' ಎಂದು ಬುದ್ಧಿ ಹೇಳುತ್ತಿದ್ದರು. ನಮ್ಮ ಸಮಾಜದಲ್ಲಿ ಇಂತಹ ಕರುಣಾಮಯಿ ಹಾಗೂ ಉದಾರ ಮನೋಭಾವವುಳ್ಳ ವ್ಯಕ್ತಿಗಳು ಅಪರೂಪ.

ಇವರ ಮತ್ತೊಂದು ವಿಚಿತ್ರ ಗುಣವೆಂದರೆ ತಾವು ವೃತ್ತಿಯಲ್ಲಿದ್ದಾಗ ರಜೆ ಹಾಕಿರುವುದೇ ಅಪರೂಪ. ತಮ್ಮ ಮಗಳ ಮದುವೆ ದಿವಸವೂ ಕಾಲೇಜಿಗೆ ಬಂದು ಪಾಠ ಮುಗಿಸಿ ಹೋದವರು. ಸೋಮಾರಿ ವಿದ್ಯಾರ್ಥಿಗಳು ಹಾಗೂ ಸಹೋದ್ಯೋಗಿಗಳು ತಮ್ಮ ಕೆಲಸ ಕಾರ್ಯಗಳಲ್ಲಿ ಜವಾಬ್ದಾರಿ ಇಲ್ಲದಿದ್ದರೆ ನೇರವಾಗಿ ಬೈದು ಬಿಡುತ್ತಿದ್ದರು. ಅವರಿಗೆ ಗೊತ್ತಿದ್ದ ಬೈಗಳೆಂದರೆ, 'ಒದ್ದು ಬುಡ್ತೀನಿ' ಎನ್ನುವುದು. ಆದರೆ ಬೈದ ಮೇಲೆ ಮನಸ್ಸಿನಲ್ಲಿಯೇ ಕೊರಗುತ್ತಿದ್ರು, ಬೈಸಿಕೊಂಡವರ ಹತ್ತಿರ ಹೋಗಿ ಇವರೇ ಪುನಃ ಮಾತನಾಡಿಸುತ್ತಿದ್ದರು. ಬೈಸಿಕೊಂಡವರಿಗೆ ಅವರು ಕಾಳಜಿಯಿಂದ ಬೈದದ್ದು ಎಂದು ಮನವರಿಕೆಯಾಗುತ್ತಿತ್ತು. ಇಂತಹ ಮಹಾನ್ ಮಾನವತಾವಾದಿ 1983ರಲ್ಲಿ ಮರಣ ಹೊಂದಿದ್ದು ಯಾರಗಮನವನ್ನೂ ಸೆಳೆಯಲಿಲ್ಲ. ನಮ್ಮ ದೇಶದ ದೊಡ್ಡ ದುರಂತಗಳಲ್ಲಿ ಇದೂ ಒಂದು. ಡಾ. ಪುಟ್ಟರುದ್ರಯ್ಯರವರು ಒಬ್ಬ ದೊಡ್ಡಮನುಷ್ಯ ಆದರೆ ಯಾರೂ ಅರಿಯದ ಪ್ರತಿಭಾವಂತರು.

(ಶ್ರೀ ಎಚ್.ಎಲ್. ಕೇಶವಮೂರ್ತಿಯವರು ಮಂಡ್ಯದ ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು ಹಾಗೂ 'ಉದಯಕಾಲ'ವೆಂಬ ಪತ್ರಿಕೆಯ ಸಂಪಾದಕರಾಗಿದ್ದರು. 1984ರಲ್ಲಿ 'ಲಂಕೇಶ್ ಪತ್ರಿಕೆ'ಯಲ್ಲಿ 'ಯಾರೂ ಅರಿಯದ ಪ್ರತಿಭಾವಂತರು' ಹಾಗೂ 'ಪುಟ್ಟರುದ್ರಯ್ಯ ಎಂಬ ದೊಡ್ಡಮನುಷ್ಯ' ಎಂಬ ಲೇಖನ ಬರೆದು ಅವರನ್ನು ನಾಡಿಗೆ ಪರಿಚಯಿಸಿದ್ದರು.)

## ಶ್ರೀ ಎಸ್.ವಿ.ರಂಗಸ್ವಾಮಿ

ಡಾ. ಪುಟ್ಟರುದ್ರಯ್ಯನವರು ನಾಚಿಕೆ ಸ್ವಭಾವದವರಾಗಿದ್ದರೂ ಸಹ ತಮ್ಮ ಜ್ಞಾನವನ್ನು ಕಾರ್ಯರೂಪಕ್ಕೆ ತರುವಾಗ ಯಾವಾಗಲೂ ಮುಂದಿರುತ್ತಿದ್ದರು. ಒಟ್ಟಾರೆ ಕನ್ನಡದ ನುಡಿಗಟ್ಟಿನಂತೆ ಎಲೆ ಮರೆಯಕಾಯಿಯಂತಿದ್ದರು. ಅವರು ಮೈಸೂರು ರಾಜ್ಯ ಕೃಷಿ ಇಲಾಖೆಯಲ್ಲಿ ಸಹಾಯಕ ಕೀಟಶಾಸ್ತ್ರಜ್ಞರಾಗಿದ್ದಾಗಲೇ ನನಗೆ ಅವರ ಪರಿಚಯವಾಯಿತು.

ಅಂದು ಕೃಷಿ ಇಲಾಖೆ ಕರ್ನಾಟಕದಲ್ಲಿ ಒಂದು ಸಣ್ಣ ವಿಭಾಗ. ಕೃಷಿ ರಾಸಾಯನಶಾಸ್ತ್ರ, ಕೀಟಶಾಸ್ತ್ರ, ಶಿಲೀಂಧ್ರಶಾಸ್ತ್ರ ಮತ್ತು ಸಸ್ಯಶಾಸ್ತ್ರ ಪ್ರಯೋಗಾಲಯಗಳೂ ಇದ್ದವು. ನನಗೆ ಬೇಯರ್‌ರವರ ಕೃಷಿ ರಾಸಾಯನಿಕಗಳು ಮೈಸೂರು ರಾಜ್ಯದಲ್ಲಿ ಪ್ರಚಾರವಾಗಬೇಕಿತ್ತು. ಡಾ. ಪುಟ್ಟರುದ್ರಯ್ಯನವರ ಮುಖಾಂತರ ಅನೇಕ ಪ್ರಗತಿಪರ ರೈತರನ್ನು ಕೃಷಿ ವಿಜ್ಞಾನಿಗಳನ್ನು ಪರಿಚಯಿಸಿಕೊಂಡೆ, ನಂತರ ಇವರಿಗೆಲ್ಲ ಪರೀಕ್ಷಿಸಲು ಬೇಯರ್ ಇಂಡಿಯಾರವರ ಪೀಡೆನಾಶಕಗಳ ಮಾದರಿಯನ್ನು ಕೊಡುತ್ತಿದ್ದೆ. ಗ್ರಾಮೀಣ ಪ್ರದೇಶದಲ್ಲಿ ರೈತರೊಂದಿಗೆ ಬೆರೆತು ಸಂಪರ್ಕವನ್ನು ಇಟ್ಟುಕೊಂಡು ಅವರ ಭಾಷೆಯಲ್ಲಿಯೇ ಅರ್ಥವಾಗುವಂತೆ ಬೆಳೆಗಳಲ್ಲಿ ಕೀಟರೋಗಗಳ ಹಾನಿಯ ಚಿನ್ಹೆಗಳನ್ನು ಗುರುತಿಸುವುದು, ಸೂಕ್ತ ನಿಯಂತ್ರಣವನ್ನು ಕೈಗೊಳ್ಳುವುದು ಮತ್ತು ಸಿಂಪರಣೆ ಅಥವಾ

ಧೂಳೀಕರಿಸುವ ವಿಧಾನಗಳನ್ನು ವಿವರಿಸುತ್ತಿದ್ದರು. ಕೃಷಿ ಕ್ಷೇತ್ರಗಳಿಗೆ ಭೇಟಿಕೊಡುವಾಗ ಬಿಸಿಲಿದ್ದರೂ ಲೆಕ್ಕಿಸದೇ ತಲೆಗೆ ಟೋಪಿ ಹಾಕಿಕೊಂಡು ಯುವಕರಂತೆ ನುಗ್ಗುತ್ತಿದ್ದರು. ಅವರು ಯಾವಾಗಲೂ ತಮ್ಮ ಕಚೇರಿಗೆ ಸೈಕಲ್ ತುಳಿದುಕೊಂಡೇ ಹೋಗುತ್ತಿದ್ದರು.

ಅವರು ಹೊರದೇಶದಲ್ಲಿ ತಮ್ಮ ಉನ್ನತ ವಿದ್ಯಾಭ್ಯಾಸ ಮುಗಿಸಿದ ಮೇಲೆ ಜಂಟಿ ಕೀಟಶಾಸ್ತ್ರಜ್ಞರಾಗಿ ಬಡ್ತಿ ದೊರೆಯಿತು. ನಂತರ ನಮ್ಮ ಕಂಪನಿಯ ಪಾಲಿಡಾಲ್ ಅನ್ನು ಭತ್ತದ ಕಾಂಡ ಕೊರೆಯುವ ಹುಳುಗಳಿಗೆ ಪರಿಣಾಮಕಾರಿಯಾಗಿ ಬಳಕೆ ಮಾಡಲಾಯಿತು. ಆಗ 'ಹೆಚ್ಚ ಆಹಾರ ಬೆಳೆಯಿರಿ' ಎಂಬ ಆಂದೋಲನ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ನಡೆಯುತ್ತಿತ್ತು. ಡಾ. ಪುಟ್ಟರುದ್ರಯ್ಯನವರು ಈ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿದ್ದರು. ಕನ್ನಡ ಮತ್ತು ಆಂಗ್ಲಭಾಷೆಯಲ್ಲಿ ಅತ್ಯುತ್ತಮ ವಾಕ್ ಚಾತುರ್ಯವನ್ನು ಬೆಳೆಸಿಕೊಂಡಿದ್ದರು. ವಿಜ್ಞಾನ ಸಮ್ಮೇಳನಗಳಲ್ಲಿ ಆಂಗ್ಲಭಾಷೆಯಾದರೆ, ರೈತರೊಡನೆ ಮಾತನಾಡುವಾಗ ಕನ್ನಡದಲ್ಲಿ ನಿರರ್ಗಳವಾಗಿ ಮಾತನಾಡುತ್ತಿದ್ದರು.

ಡಾ. ಪುಟ್ಟರುದ್ರಯ್ಯನವರು ಕೃಷಿ ವಿಶ್ವವಿದ್ಯಾಲಯದಿಂದ ನಿವೃತ್ತಿಯಾದನಂತರ ನನಗೆ ಅದೃಷ್ಟದ ಬಾಗಿಲು ತೆರೆಯಿತೆಂದು ನಾನು ಭಾವಿಸಿದೆ. ನಾನು ಅವರನ್ನು ನೇರವಾಗಿ ಭೇಟಿಯಾದೆ. 'ನನ್ನ ಸಂಸ್ಥೆಗೆ ತಮ್ಮ ಜ್ಞಾನಪ್ರಸಾರದ ಮೂಲಕ ಸಹಾಯ ಮಾಡಬೇಕು' ಎಂದು ಕೇಳಿಕೊಂಡೆ. ಅವರನ್ನು ಸಲಹೆಗಾರರಾಗುವಂತೆ ಕೇಳಿದಾಗ ಅವರು ಒಪ್ಪಿಕೊಂಡು ಅನೇಕ ರೈತರಿಗೆ ಹಾಗೂ ನಮ್ಮ ಸಂಸ್ಥೆಯ ಎಲ್ಲಾ ಸಿಬ್ಬಂದಿಗೆ ತರಬೇತಿ ನೀಡುತ್ತಿದ್ದರು ಹಾಗೂ ಹಲವಾರು ಕೃಷಿ ಜ್ಞಾನದ ಕರಪತ್ರಗಳನ್ನು ಮತ್ತು ಪುಸ್ತಕಗಳನ್ನು ಬರೆದು ಕೊಟ್ಟಿದ್ದಾರೆ.

ನಮ್ಮ ಸಂಸ್ಥೆಯ ಕಚೇರಿ ನಗರದ ಮಧ್ಯ ಭಾಗದಲ್ಲಿ ನರಸಿಂಹರಾಜ ರಸ್ತೆ ಹಾಗೂ ನಗರದ ಪ್ರಮುಖ ಕೃಷ್ಣರಾಜೇಂದ್ರ ಮಾರುಕಟ್ಟೆಯ ಸಮೀಪವಿದ್ದುದ್ದರಿಂದ ಎಲ್ಲಾ ರೀತಿಯ ಸರಕುಗಳನ್ನು ಮಾರುಕಟ್ಟೆಗೆ ಸಾಗಿಸುವಾಗ ಹಾಗೂ ತರಕಾರಿ ಹಣ್ಣು ಹೂವು ಮುಂತಾದುವನ್ನು ಮಾರುವಾಗ ರೈತರು ಸುಲಭವಾಗಿ ನಮ್ಮ ಸಂಸ್ಥೆಗೆ ಬಂದು ರಾಸಾಯನಿಕ ಪೀಡೆನಾಶಕಗಳನ್ನು ಕೊಂಡುಕೊಳ್ಳುತ್ತಿದ್ದರು. ಡಾ. ಪುಟ್ಟರುದ್ರಯ್ಯನವರು ರೈತರೊಡನೆ ಚರ್ಚಿಸಿ ಸೂಕ್ತ ಮಾಹಿತಿ ನೀಡುತ್ತಿದ್ದರು. ಅವಶ್ಯಕತೆ ಇದ್ದರೆ ರೈತರ ಬೇಡಿಕೆ ಮೇರೆಗೆ ಬೆಳೆಗಳ ಕ್ಷೇತ್ರಗಳಿಗೆ ಭೇಟಿ ನೀಡಿ ಸೂಕ್ತ ಮಾಹಿತಿಯನ್ನು ಒದಗಿಸುತ್ತಿದ್ದರು.

ಡಾ. ಪುಟ್ಟರುದ್ರಯ್ಯನವರು ನಮ್ಮ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಿದ 3 ವರ್ಷಗಳ ಅವಧಿಯಲ್ಲಿ 1280 ಪುಟಗಳ 'A Guide for Cultivation and Protection of Important Crops' ಎಂಬ ಬೃಹದ್ ಗ್ರಂಥವನ್ನು ರಚಿಸಿದರು. ಕೃಷಿ ಕ್ಷೇತ್ರದಲ್ಲಿರುವ ವಿಸ್ತರಣಾ ಕಾರ್ಯಕರ್ತರಿಗೆ ಸಂಪೂರ್ಣ ಮಾಹಿತಿ ಕೊಡುವಲ್ಲಿ ಈ ಪುಸ್ತಕ ಒಂದು ಪರಿಪೂರ್ಣ ಮಾರ್ಗದರ್ಶಿಯಾಗಿದೆ. ಈ ಪುಸ್ತಕಕ್ಕೆ ಹೊರ ರಾಜ್ಯಗಳಿಂದಲೂ ಸಾಕಷ್ಟು ಬೇಡಿಕೆಯಿತ್ತು.

ಡಾ. ಪುಟ್ಟರುದ್ರಯ್ಯನವರ ಕೊನೆಯ ಕಾಲದವರೆಗೂ ಅವರಿಗೆ ತಮ್ಮ ಕರ್ತವ್ಯದ ಬಗ್ಗೆ ಆದಮ್ಯ ಆಸಕ್ತಿ, ಉತ್ಸಾಹ, ಶ್ರದ್ಧೆ ಎಲ್ಲವೂ ಹಾಗೆಯೇ ಉಳಿದಿತ್ತು. ಪ್ರತಿಯೊಬ್ಬರಿಗೂ ಸಮಾಧಾನವಾಗಿ, ಅರ್ಥಪೂರ್ಣವಾದ ತೃಪ್ತಿಕರವಾದ ಉತ್ತರವನ್ನು ನೀಡುತ್ತಿದ್ದರು. ವಿನಯಶೀಲತೆ ಅವರ ಲಾಂಛನ ಮತ್ತು ಜ್ಞಾನ ಹಾಗೂ ಅನುಭವ ಅವರಿಗಿದ್ದ ಶಕ್ತಿ. ಅವರದು ಅಸೀಮ ಜ್ಞಾನ ಭಂಡಾರ.

(ಶ್ರೀ.ರಂಗಸ್ವಾಮಿಯವರು ಬೆಂಗಳೂರು ನಗರದ ನರಸಿಂಹರಾಜ ರಸ್ತೆಯಲ್ಲಿರುವ ಮೆ. ಎಸ್.ವಿ.ರಂಗಸ್ವಾಮಿ ಆಂಡ್ ಕಂಪನಿ ಲಿ.ನ ಮಾಲಿಕರು. ಶ್ರೀ ರಂಗಸ್ವಾಮಿಯವರು ಡಾ. ಪುಟ್ಟರುದ್ರಯ್ಯರವರನ್ನು ಅತ್ಯಂತ ಸಮೀಪದಿಂದ ಕಂಡವರು.)

## ಶ್ರೀ ಬಿ.ಕೆ.ರಾಜಗೋಪಾಲ್

ನಾನು 1968ರಲ್ಲಿ 46 ವರ್ಷಗಳ ಹಿಂದೆ ಬೋಧಕನಾಗಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕೀಟಶಾಸ್ತ್ರ ವಿಭಾಗದಲ್ಲಿ ನನ್ನ ವೃತ್ತಿಯನ್ನು ಪ್ರಾರಂಭಿಸಿದೆ. ಆಗ ಡಾ. ಪುಟ್ಟರುದ್ರಯ್ಯನವರು ಕೃಷಿ ಶಿಕ್ಷಣ ನಿರ್ದೇಶಕರಾಗಿದ್ದರು ಹಾಗೂ ಕೀಟಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾಗಿದ್ದರು. ಒಮ್ಮೆ ನನ್ನನ್ನು ತಮ್ಮ ಛೇಂಬರಿಗೆ ಕರೆಸಿ ಗಾಜಿನ ಟ್ಯೂಬಿನಲ್ಲಿರುವ ಕಾಫಿ ಕಾಂಡ ಕೊರಕ ದುಂಬಿಯನ್ನು ತೋರಿಸಿ, 'ಇದು ಬೆಂಗಳೂರಿನಲ್ಲಿ ಇರಲು ಹೇಗೆ ಸಾಧ್ಯ? ಇಲ್ಲಿ ಯಾವ ಕಾಫಿ ತೋಟಗಳಿಲ್ಲ. ಕೊಡಗು, ಹಾಸನ ಅಥವಾ ಚಿಕ್ಕಮಗಳೂರಿನಿಂದ ಅಷ್ಟು ದೂರದಿಂದ ಇಲ್ಲಿಗೆ ಹಾರಿ ಬರಲು ಸಾಧ್ಯವಿಲ್ಲ. ಇಲ್ಲಿಗೆ ಹೇಗೆ ಬಂದಿರಬಹುದು?' ಎಂದು ಕೇಳಿದರು. ನಾನು ತಕ್ಷಣ ಉತ್ತರಿಸಲು ಸಾಧ್ಯವಾಗದೆ ನಂತರ ಸ್ವಲ್ಪ ಯೋಚಿಸಿ, 'ಅಲ್ಲಿಂದ ತರುವ ಸೌದೆಗಳ ಮುಖಾಂತರ ಇಲ್ಲಿಗೆ ಬಂದಿರಬಹುದು' ಎಂದು ತಿಳಿಸಿದೆ.

ಆಗಿನ ಕಾಲದಲ್ಲಿ ಬೆಂಗಳೂರಿನಲ್ಲಿ ಹೆಚ್ಚು ಸೌದೆ ಡಿಪೋಗಳು ಇದ್ದುವು. ಮನೆಗಳಲ್ಲಿ ಹಾಗೂ ಹೋಟೆಲ್‌ನವರು ಹೆಚ್ಚಾಗಿ ಸೌದೆಯನ್ನು ಉಪಯೋಗಿಸುತ್ತಿದ್ದು, ಆಗ ಗ್ಯಾಸ್ ಸಪ್ಲೈ ಇರಲಿಲ್ಲ. ಮನೆ ಕಟ್ಟುವವರು ಮರದ ಸಾಮಾನಿಗೆಂದು ಕಾಡಿನಲ್ಲಿ ಮರಗಳನ್ನು ಕಡಿದು ಲಾರಿಗಳ ಮುಖಾಂತರ ಮಲೆನಾಡು ಅರಣ್ಯ ಪ್ರದೇಶಗಳಿಂದ ಬೆಂಗಳೂರಿಗೆ ತರುತ್ತಿದ್ದರು. 'ಬಹುಶಃ ಕಾಫಿ ಗಿಡದಲ್ಲಿ ಕಾಂಡ ಕೊರೆದು ಒಣಗಿದ ಕಾಂಡಗಳನ್ನು ಸಹ ಕಾಡು ಸೌದೆಗಳ ಜೊತೆ ಬೆಂಗಳೂರಿಗೆ ತಂದಿರಬಹುದು. ಚೆನ್ನಾಗಿ ಬೆಳೆದ ಮರಿಹುಳು ತನ್ನ ಕೋಶಾವಸ್ಥೆ ಮುಗಿಸಿ, ದುಂಬಿ ಅವಸ್ಥೆಯಲ್ಲಿ ಬಂದಿರಲು ಸಾಧ್ಯ' ಎಂದು ತಿಳಿಸಿದೆ. 'ಹೌದು ನೀವು ಹೇಳುವುದು ಸರಿ ಇರಬಹುದು' ಎಂದರು. ನಾನು ಹೇಳಿದ ಉತ್ತರ ಸರಿಯೊ ತಪ್ಪೊ ಗೊತ್ತಿಲ್ಲ. ಅವರು ಬೇರೆಯವರನ್ನು ಸಹ ಕೇಳಿ ಚರ್ಚಿಸಿರಬಹುದೆಂದು ನನಗೆ ಮನವರಿಕೆಯಾಯಿತು. ಇಂತಹ ಸಮಸ್ಯೆಗಳನ್ನು ನಮ್ಮ ಇತರ ಶಿಕ್ಷಕ ಸಿಬ್ಬಂದಿಗಳ ಜೊತೆಯಲ್ಲಿ ಕೂಲಂಕಷವಾಗಿ ಚರ್ಚಿಸುತ್ತಿದ್ದರು.

ಡಾ. ಪುಟ್ಟರುದ್ರಯ್ಯನವರು ಕೃಷಿ ಕಾಲೇಜಿನ ಶಿಕ್ಷಣ ನಿರ್ದೇಶಕರಾಗಿದ್ದ ಅವಧಿಯಲ್ಲಿ ಸ್ನಾತಕೋತ್ತರ ಪಠ್ಯಕ್ರಮವನ್ನು ಕೀಟಶಾಸ್ತ್ರ ವಿಭಾಗದಲ್ಲಿ ತ್ರೈಮಾಸಿಕ ಪದ್ಧತಿಯಲ್ಲಿ ಬೋಧಿಸುತ್ತಿದ್ದಾಗ ಥಿಯರಿ ಪಠ್ಯಕ್ರಮವನ್ನು ಅವರು ಬೋಧಿಸಿದ್ದರೆ ಪ್ರಾಯೋಗಿಕ (ಪ್ರಾಕ್ಟಿಕಲ್ಸ್) ತರಗತಿಯ ಪಠ್ಯಕ್ರಮವನ್ನು ನನಗೆ ವಹಿಸುತ್ತಿದ್ದರು. ತರಗತಿಯಲ್ಲಿ ಕೀಟ ಮತ್ತು ಹಾನಿಯ ಮಾದರಿಗಳನ್ನು ಸರಿಯಾಗಿ ಇಟ್ಟಿರುತ್ತಾರೋ ಇಲ್ಲವೋ ಎಂದು ಮೇಲಿಂದ ಮೇಲೆ ಪ್ರಯೋಗಶಾಲೆಗೆ ಬಂದು ಪರೀಕ್ಷಿಸುತ್ತಿದ್ದರು. ಕೆಲವು ವಿಚಾರಗಳಲ್ಲಿ ನೇರವಾಗಿ ವಿದ್ಯಾರ್ಥಿಗಳೊಂದಿಗೆ ಸ್ಪಷ್ಟೀಕರಣ ಪಡೆಯುತ್ತಿದ್ದರು. ಸೂಕ್ತ ಮಾಹಿತಿ ಮತ್ತು ಪ್ರಯೋಗ ಶಾಲೆಗೆ ಕೊಡಬೇಕಾದ ಕೀಟನಮೂನೆ ಇಲ್ಲದಿದ್ದಾಗ ಪ್ರಯೋಗ ಶಾಲೆಯ ಸಹಾಯಕರನ್ನು ಕಳಿಸಿ, ಬೆಳೆಗಳ ಕ್ಷೇತ್ರಗಳಿಂದ ತರಿಸಿ ಇಡಿಸುತ್ತಿದ್ದರು. ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸುವಾಗ ನಂಬಿಕೆಯಿಂದ ಪ್ರಶ್ನೆ ಪತ್ರಿಕೆಗಳನ್ನು ನನ್ನಲ್ಲಿ ಕೊಟ್ಟು ಪರೀಕ್ಷೆ ನಡೆಸುವ ಜವಾಬ್ದಾರಿಯನ್ನು ಸಹ ನನಗೆ ವಹಿಸುತ್ತಿದ್ದರು.

ಡಾ. ಪುಟ್ಟರುದ್ರಯ್ಯನವರು ಹಲವಾರು ಪುಸ್ತಕಗಳನ್ನು ಕನ್ನಡದಲ್ಲಿ ಕೀಟಗಳ ಬಗ್ಗೆ, ಬೆಳೆಗಳಿಗೆ ಬರುವ ಕೀಟಗಳ ಮತ್ತು ಅವುಗಳ ಹತೋಟಿ ಬಗ್ಗೆ ವಿವರವಾಗಿ ಬರೆದಿದ್ದಾರೆ. ನನಗೆ ಕೆಲವು ಸೂಕ್ತ ಕೀಟಗಳ ಚಿತ್ರಗಳನ್ನು ಮತ್ತು ಸಂಬಂಧಪಟ್ಟ ಇತರ ಚಿತ್ರಗಳನ್ನು ಇಂಗ್ಲೀಷ್ ಪುಸ್ತಕಗಳಿಂದ ಆರಿಸಿ ತಮ್ಮ ಪುಸ್ತಕಗಳಿಗೆ ಅಳವಡಿಸಬೇಕೆಂದು ತಿಳಿಸುತ್ತಿದ್ದರು. (ಆಗಿನ ಕಾಲದಲ್ಲಿ ಜೆರಾಕ್ಸ್ ಅನುಕೂಲವಿರಲಿಲ್ಲ). ನಮ್ಮ ಪ್ರಯೋಗ ಶಾಲೆಯ ಸಹಾಯಕ ಶ್ರೀ ಜಾಧವ್‌ರವರು ಆಯ್ದ ಚಿತ್ರಗಳನ್ನು ಚೆನ್ನಾಗಿ ಬಿಡಿಸುತ್ತಿದ್ದರು ಹಾಗೂ ಅವರ ಒರಟು ಹಸ್ತಪ್ರತಿಯನ್ನು ನೀಟಾಗಿ ಬರೆದು ಕೊಡುತ್ತಿದ್ದರು. ನಮ್ಮ ಹೆಸರುಗಳನ್ನು ತಪ್ಪದೇ ತಮ್ಮ ಪುಸ್ತಕಗಳ ಮುನ್ನುಡಿಯಲ್ಲಿ ನಾವು ಮಾಡಿದ ಸಹಾಯವನ್ನು ಸ್ಮರಿಸುತ್ತಿದ್ದರು. ಇದು ಅವರ ದೊಡ್ಡ ಗುಣವೆಂದು ನಾನು ಭಾವಿಸಿದ್ದೇನೆ.

ನನಗೆ ತಿಳಿದುಬಂದ ಒಂದು ಸಂಗತಿ- ನಮ್ಮಲ್ಲಿ ನಂಜುಂಡಶಾಸ್ತ್ರಿ ಎಂಬ ಹಿರಿಯ ಪ್ರಯೋಗ ಶಾಲೆಯ ಸಹಾಯಕರು ಈ ಮಾಹಿತಿಯನ್ನು ನೀಡಿದ್ದಾರೆ. ಸುಮಾರು 1958-60ರಲ್ಲಿ ಫಾಲಿಡಾಲ್ ಎಂಬ ಕೀಟನಾಶಕವನ್ನು ನಮ್ಮ ರಾಜ್ಯದಲ್ಲಿ ಕೀಟಪೀಡೆಗಳ ಹತೋಟಿಗೆ ಅತ್ಯುತ್ತಮ ರಾಸಾಯನಿಕವೆಂದು ಅದನ್ನು ಪರಿಗಣಿಸಲಾಗಿತ್ತು. ಡಾ. ಪುಟ್ಟರುದ್ರಯ್ಯನವರು ಆಗ ಸರ್ಕಾರದ ಕೀಟಶಾಸ್ತ್ರಜ್ಞರಾಗಿದ್ದರು. ಈ ರಾಸಾಯನಿಕವನ್ನು ಉಪಯೋಗಿಸಲು ಅವರ ಅನುಮತಿ ಪಡೆಯಬೇಕಾಗಿತ್ತು. ಅದು ಹೆಚ್ಚು ಪರಿಣಾಮಕಾರಿ ಎಂದು ತಿಳಿದು ರೈತರು ಹೆಚ್ಚಾಗಿ ಉಪಯೋಗಿಸಲು ಪ್ರಾರಂಭಿಸಿದರು. ಅದರ ಮಾರಾಟವೂ ಹೆಚ್ಚಾಯಿತು. ಆಗ ಎಸ್.ವಿ.ರಂಗಸ್ವಾಮಿ ಕಂಪೆನಿಯವರು ಅದಕ್ಕೆ ವಿತರಕರಾಗಿದ್ದರು. ಶಿಫಾರಸ್ಸು ಮಾಡಿದ್ದರಿಂದ ಮತ್ತು ಮಾರಾಟದಿಂದ ತಮಗೆ ಅಧಿಕ ಲಾಭವಾಗಿದ್ದರಿಂದ ಅವರು ಡಾ.ಪುಟ್ಟರುದ್ರಯ್ಯನವರಿಗೆ

ಒಂದು ಬಂಗಾರದ ಬಿಸ್ಕತ್ತನ್ನು ಉಡುಗೊರೆಯಾಗಿ ಕೊಡಲು ಹೋದರಂತೆ. ಆದರೆ ಡಾ. ಪುಟ್ಟರುದ್ರಯ್ಯನವರು ಅದನ್ನು ತಿರಸ್ಕರಿಸಿ ನೆಲಕ್ಕೆ ಬಿಸಾಡಿದರೆಂದು ಶ್ರೀ ನಂಜುಂಡಶಾಸ್ತ್ರಿಯವರು ಹೇಳುತ್ತಿದ್ದರು. ಆ ಉಡುಗೊರೆ ಲಂಚದ ರೂಪವೆಂದು ತಿಳಿದು ತಮಗೆ ಮತ್ತು ತಮ್ಮ ವಿಭಾಗಕ್ಕೆ ಕೆಟ್ಟಹೆಸರು ಬರುವುದೆಂದು ಹಾಗೆ ಮಾಡಿದ್ದರು ಎನ್ನುತ್ತಾರೆ. ಇದು ಅವರ ಜೀವನ ತತ್ವ ಮತ್ತು ಆದರ್ಶಗಳನ್ನು ತೋರಿಸುತ್ತದೆ ಹಾಗೂ ಎಲ್ಲಾ ಶಿಕ್ಷಕ ಮತ್ತು ಸಂಶೋಧಕರಿಗೆ ಮಾದರಿ ಎನ್ನಿಸುವಂತಿದೆ.

ಡಾ.ಪುಟ್ಟರುದ್ರಯ್ಯನವರು, ಜವಾನರಿಂದ ಹಿಡಿದು ವಿಭಾಗದ ಎಲ್ಲಾ ಸಿಬ್ಬಂದಿಯವರನ್ನು ಸಮಾನ ದೃಷ್ಟಿಯಿಂದ ನೋಡುತ್ತಿದ್ದರು. ಅವರು 'ಸಿನಿಯಾರಿಟಿಗೆ' ಹೆಚ್ಚು ಆದ್ಯತೆ ಕೊಡುತ್ತಿದ್ದರು. 1964ರಲ್ಲಿ ಬೆಂಗಳೂರಿನಲ್ಲಿ ಕೃಷಿ ವಿಶ್ವವಿದ್ಯಾನಿಲಯ ಪ್ರಾರಂಭವಾಯಿತು. ಆಗ ಅವರು ಕೃಷಿ ಕಾಲೇಜಿನ ಪ್ರಾಂಶುಪಾಲರಾಗಿದ್ದರು. ಅವರನ್ನು ಕಡೆಗಣಿಸಿ, ಸರ್ಕಾರ ಬೇರೆ ರಾಜ್ಯದ ಮತ್ತು ವಯಸ್ಸಿನಲ್ಲಿ ಅವರಿಗಿಂತಾ ಕಿರಿಯ ರಾಗಿದ್ದವರನ್ನು ಡೀನ್ ಆಗಿ ನೇಮಿಸಿದರು. ಇದು ಅವರಿಗೆ ಅಸಮಾಧಾನ ತಂದಿತು. ನಾವೆಲ್ಲ ಅವರೇ ಡೀನ್ ಆಗುತ್ತಾರೆಂದು ನಂಬಿದ್ದೆವು. ಇದರಿಂದ ಅವರಿಗೆ ಬೇಸರವಾಗಿದ್ದರೂ ಸಹ ಮುಂದಿನ ದಿನಗಳಲ್ಲಿ ತಮ್ಮ ಕರ್ತವ್ಯಕ್ಕೆ ಯಾವುದೇ ಲೋಪ ಬರದ ಹಾಗೆ ಕೃಷಿ ಕಾಲೇಜಿನಲ್ಲಿ ಆಡಳಿತ ಮತ್ತು ಶಿಕ್ಷಣವನ್ನು ಅಭಿವೃದ್ಧಿಪಡಿಸುವಲ್ಲಿ ಶ್ರಮಿಸಿದರು.

(ಶ್ರೀ ಬಿ.ಕೆ.ರಾಜಗೋಪಾಲ್‌ರವರು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕೀಟಶಾಸ್ತ್ರ ವಿಭಾಗದ ನಿವೃತ್ತ ಸಹಪ್ರಾಧ್ಯಾಪಕರು.)

## ಶ್ರೀ ಕೆ. ಮಿಯಾ ಸಾಹೇಬ್

ದಿವಂಗತ ಡಾ. ಪುಟ್ಟರುದ್ರಯ್ಯರವರದು ಕೀಟಶಾಸ್ತ್ರ ವಿಜ್ಞಾನದಲ್ಲಿ ಅಚ್ಚಳಿಸದ ಹೆಸರು. ಹೆಬ್ಬಾಳದ ಕೃಷಿ ಕಾಲೇಜಿನ ಪ್ರಾಂಶುಪಾಲರಾಗಿ, ಕೀಟಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾಗಿ, ಕರ್ನಾಟಕ ಸರ್ಕಾರದಲ್ಲಿ ಮತ್ತು ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಹಲವಾರು ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದ ಧೀಮಂತ ಕೀಟಶಾಸ್ತ್ರ ವಿಜ್ಞಾನಿ. ಭಾರತ ಮತ್ತು ವಿದೇಶಗಳಲ್ಲಿ ಸಸ್ಯ ಸಂರಕ್ಷಣೆಯ ವೈಜ್ಞಾನಿಕ ಪ್ರಬಂಧಗಳಿಂದ ಹೆಸರುವಾಸಿಯಾದ ಮೇರುವ್ಯಕ್ತಿ. ಘನವಿದ್ಯೆ, ಹುದ್ದೆಗಳನ್ನು ಹೊಂದಿದ್ದವರು. ಅವರು ಸರಳ ಮತ್ತು ನಮ್ರ ವ್ಯಕ್ತಿತ್ವವುಳ್ಳವರು. ಹೆಬ್ಬಾಳದ ಕೃಷಿಕಾಲೇಜನ್ನು ಕಟ್ಟಿ, ಪೋಷಿಸಿ ಈಗಿನ ಮಟ್ಟಕ್ಕೆ ಬೆಳೆಸಿದವರಲ್ಲಿ ಅವರ ಶ್ರಮವೊಂದು ಇತಿಹಾಸ ಎಂಬುದರಲ್ಲಿ ಅತಿಶಯೋಕ್ತಿ ಇಲ್ಲ.

ನಾನು 1963ರಿಂದ 1967ರವರೆಗೆ ಕೃಷಿ ಕಾಲೇಜು ಹೆಬ್ಬಾಳದಲ್ಲಿ 4 ವರ್ಷಗಳ ಕಾಲ ಅಧ್ಯಯನ ಮಾಡಿದ್ದೇನೆ. ನಾನು ಕೃಷಿ ಕಾಲೇಜಿಗೆ ಸೇರಿದ ಮೊದಲ ವರ್ಷ ಆರ್ಥಿಕ ತೊಂದರೆಯಿಂದ ಬಳಲುತ್ತಿದ್ದೆ. ನಮ್ಮದು ಬಳ್ಳಾರಿ ಜಿಲ್ಲೆಯ ಬರಗಾಲದ

ಪ್ರದೇಶ. ನಾನು ಆಗ ತಾನೆ ಹೊಸದಾಗಿ ಕಾಲೇಜಿಗೆ ಸೇರಿದ್ದೆ. ಈ ವಿಷಯವಾಗಿ ನಾನು ಪ್ರಾಂಶುಪಾಲರನ್ನು ಕಂಡು ನನ್ನ ಕಷ್ಟ-ಸುಖ ಹೇಳಿಕೊಂಡಿದ್ದೆ. ಮಾರನೆ ದಿನ ನನಗೇ ಅಚ್ಚರಿಯಾಗುವಂತೆ ನನಗೆ ವಿದ್ಯಾರ್ಥಿ ವೇತನ ಮಂಜೂರು ಮಾಡಲಾಗಿತ್ತು. ಆ ವರ್ಷದ ನನ್ನ ಎಲ್ಲಾ ಸಮಸ್ಯೆಗಳು ಅದರಿಂದ ಬಗೆಹರಿದವು. ಆಗಿನ ಸಮಯದಲ್ಲಿ ಡಾ. ಪುಟ್ಟರುದ್ರಯ್ಯನವರಲ್ಲಿದ್ದ ಅವರ ಪರಿಣಿತೆ, ಜ್ಞಾನ ಪ್ರಸಾರದಲ್ಲಿದ್ದ ಅವರ ಕಳಕಳಿ, ಕೀಟಶಾಸ್ತ್ರದ ಬಗೆಗಿನ ಅವರ ಆಳವಾದ ಅಧ್ಯಯನ, ರೈತರ ಬಗೆಗಿನ ಅವರ ಕಳಕಳಿ, ಕೃಷಿ ವಿಜ್ಞಾನವನ್ನು ಮೇರು ದರ್ಜೆಗೇರಿಸುವ ಹುಮ್ಮಸ್ಸು, ನಗುಮುಖ, ಸರಳತೆ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಯ ಬಗ್ಗೆ ಚಿಂತನೆ, ಯಾವುದೇ ವಿದ್ಯೆಯನ್ನು ಕಾಟಾಚಾರಕ್ಕೆ ಮುಗಿಸದೆ ಆಳವಾಗಿ ಅಭ್ಯಸಿಸಿ ಪರಿಣತೆ ಪಡೆಯುವ ಬಗ್ಗೆ ಅವರಲ್ಲಿದ್ದ ಆಸಕ್ತಿ ಹೀಗೆ ಬಹು ರೀತಿಯಲ್ಲಿ ಅವರು ನನಗೆ ಆದರ್ಶ ವ್ಯಕ್ತಿಯಾಗಿದ್ದರು. ಇದು ವೈಯಕ್ತಿಕವಾಗಿ ಹೇಳುವಂತಹ ಮಾತಲ್ಲ. ಅವರು ಹೆಬ್ಬಾಳದ ಕೃಷಿ ಕಾಲೇಜಿನಲ್ಲಿ, ಎಲ್ಲಾ ವಿದ್ಯಾರ್ಥಿಗಳ ಕಣ್ಮಣಿಯಾಗಿದ್ದರು. ಅವರನ್ನು ಯಾರೇ ವಿದ್ಯಾರ್ಥಿ ಯಾವುದೇ ಸಂಕೋಚ, ಭಯವಿಲ್ಲದೆ ಭೇಟಿಮಾಡಿ ಸಮಸ್ಯೆಗಳನ್ನು ಚರ್ಚಿಸುವುದು ಸಾಧ್ಯವಿತ್ತು. ತರಗತಿಯ ಹೊರಗೂ ಸಹ ಹಲವಾರು ಕಾಲೇಜಿನ ಕಾರ್ಯಕಲಾಪಗಳಲ್ಲಿ ವಿದ್ಯಾರ್ಥಿಗಳೊಂದಿಗೆ ಸಂಕೋಚವಿಲ್ಲದೇ ಬೆರೆಯುತ್ತಿದ್ದರು ಮತ್ತು ಅವರ ಕಷ್ಟ, ಸುಖಗಳನ್ನು ಅತ್ಯಂತ ಸಂಯಮದಿಂದ ಆಲಿಸುತ್ತಿದ್ದರು. ವಿದ್ಯಾರ್ಥಿಗಳ ನೈತಿಕ ಮತ್ತು ಕಲಿಯುವಿಕೆಯ ಆಸಕ್ತಿ ಹೆಚ್ಚಿಸಿ ಕಾಲೇಜಿಗೆ ಕೀರ್ತಿ ತರುವಂತವರಾಗಬೇಕೆಂಬುದೇ ಅವರ ಮಹದಾಸೆಯಾಗಿತ್ತು. ಹೀಗಾಗಿ ಡಾ. ಪುಟ್ಟರುದ್ರಯ್ಯ ಎಂದರೆ ಕೃಷಿಕಾಲೇಜು, ಕೃಷಿ ಕಾಲೇಜು ಎಂದರೆ ಡಾ. ಪುಟ್ಟರುದ್ರಯ್ಯ ಎಂಬ ಮಾತು ಜನಜನಿತವಾಗಿತ್ತು.

ಕೀಟಶಾಸ್ತ್ರದ ಪಠ್ಯಕ್ರಮದಲ್ಲಿ ಅವರು ಬೋಧಿಸುತ್ತಿದ್ದ ಮಾರ್ಫಾಲಜಿ (ಕೀಟಗಳ ರಚನೆ), ಟ್ಯಾಕ್ಸಾನಮಿ (ಕೀಟಗಳ ವರ್ಗೀಕರಣ) ಮತ್ತು ಕೀಟಗಳನ್ನು ಗುರುತಿಸುವ ತಾಂತ್ರಿಕ ಶಬ್ದಗಳು ವಿದ್ಯಾರ್ಥಿಗಳಲ್ಲಿ ಹಾಸುಹೊಕ್ಕಾಗಿದ್ದವು. ಈ ವಿಷಯದಲ್ಲಿ ಅವರ ಪಾಠದಿಂದ ಪ್ರಭಾವಿತನಾದ ವಿದ್ಯಾರ್ಥಿಗಳಲ್ಲಿ ನಾನು ಒಬ್ಬ. ಎಲ್ಲಿ ಯಾವುದೇ ಕೀಟಕಂಡರೂ, ಅದು ಹೊಲದಲ್ಲಾಗಲಿ ಇತರ ಪರಿಸರದಲ್ಲಾಗಲಿ ಕಂಡಕೂಡಲೇ ಆ ಕೀಟ ರಚನೆಯನ್ನು ಗುರುತಿಸಿ ತಾಂತ್ರಿಕವಾಗಿ ವರ್ಗೀಕರಣ ಮಾಡುವ ಆಸಕ್ತಿ ಬೆಳೆಸಿಕೊಂಡಿದ್ದೆ.

ನಾನು ಕೃಷಿ ಇಲಾಖೆಯಲ್ಲಿ ಸಹಾಯಕ ಕೃಷಿ ಅಧಿಕಾರಿಯಾಗಿ ಸೇರಿ, ವಿವಿಧ ಹುದ್ದೆಗಳಲ್ಲಿ 34 ವರ್ಷಗಳ ಸೇವೆ ಸಲ್ಲಿಸಿ ಉಪ ಕೃಷಿ ನಿರ್ದೇಶಕ ಹುದ್ದೆಯಿಂದ 2002ರಲ್ಲಿ ನಿವೃತ್ತಿಯಾಗಿ, ಈಗ ನಿವೃತ್ತ ಜೀವನ ನಡೆಸುತ್ತಿದ್ದೇನೆ. ವಿಧಿ ಯಾವ ದಾರಿಯಲ್ಲಿ ಒಯ್ದರೂ ನಾನು ವಹಿಸಿದ ಕೆಲಸವನ್ನು ಆತ್ಮ ಸಂತೃಪ್ತಿಯಿಂದ ಕೆಲಸ ನಿರ್ವಹಿಸಿದ್ದೇನೆ ಮತ್ತು ನನಗೆ ನನ್ನ ಕೃಷಿ ಇಲಾಖೆಯಿಂದ ರೈತರೊಂದಿಗೆ, ರೈತರಿಗಾಗಿ

ಕೆಲಸ ಮಾಡುವ ಅವಕಾಶ ಸಿಕ್ಕಿದ್ದು ನನಗೆ ತೃಪ್ತಿ ತಂದಿದೆ. ಹಲವಾರು ಆದರ್ಶಗಳನ್ನು ಬೆಳೆಸಿ ಉಳಿಸಿಕೊಳ್ಳುವಲ್ಲಿ ನಮ್ಮ ಕೃಷಿಕಾಲೇಜು ಮತ್ತು ನಮ್ಮ ಗುರುಗಳು ಹಾಗೂ ಪ್ರಾಂಶುಪಾಲರಾದ ಡಾ. ಪುಟ್ಟರುದ್ರಯ್ಯನವರು ನಮಗೆ ಮಾದರಿಯಾಗಿದ್ದರು. ಕಾಲೇಜಿನ ದಿನಗಳ ಸವಿನೆನಪು ಒಂದೊಂದಾಗಿ ನೆನಪಿಗೆ ಬಂದು ಮನಸ್ಸು ಹರ್ಷಿತವಾಗುತ್ತದೆ. ಡಾ. ಪುಟ್ಟರುದ್ರಯ್ಯನವರ ವ್ಯಕ್ತಿತ್ವ, ಅವರ ಬಣ್ಣದ 'ಟೈ' ಮತ್ತು ಅವರು ಕಾಲೇಜಿಗೆ ಬರುವ ಕಪ್ಪುಬಣ್ಣದ ಆಸ್ಟಿನ್ ಚಿಕ್ಕ ಕಾರು ನನ್ನ ಕಣ್ಣೆದುರು ಈಗಲೂ ಕಟ್ಟಿದಂತಾಗುತ್ತದೆ.

(ಶ್ರೀ ಕೆ. ಮಿಯಾ ಸಾಹೇಬ್‌ರವರು ನಿವೃತ್ತ ಉಪ ಕೃಷಿನಿರ್ದೇಶಕರು, ಕೃಷಿ ಇಲಾಖೆ, ಹಗರಿಬೊಮ್ಮನಹಳ್ಳಿ, ಬಳ್ಳಾರಿ ಜಿಲ್ಲೆ.)

## ಪ್ರೊ. ಗುಬ್ಬಯ್ಯ

ನನ್ನ ಪಿ.ಯು.ಸಿ. ವ್ಯಾಸಂಗದ ನಂತರ ಮೈಸೂರು ಮೆಡಿಕಲ್ ಮತ್ತು ಬೆಂಗಳೂರು ಕೃಷಿ ಕಾಲೇಜುಗಳಲ್ಲಿ ಮುಂದಿನ ವ್ಯಾಸಂಗಕ್ಕಾಗಿ ಸೀಟು ಲಭ್ಯವಾಗಿದ್ದವು. ಯಾವ ಕಾಲೇಜಿಗೆ ಸೇರಬೇಕೆಂಬ ಗೊಂದಲ ನನ್ನಲ್ಲಿತ್ತು. ನನ್ನ ಹಿತೈಷಿ ಬಂಧುಗಳು ಮೆಡಿಕಲ್ ಸೇರುವುದರಿಂದ ಒಳ್ಳೆಯ ಭವಿಷ್ಯವಿದೆ ಎಂಬ ಹಿತವಚನ ನೀಡುತ್ತಿದ್ದರು, ಆದರೆ ಆರ್ಥಿಕ ಮುಗ್ಗಟ್ಟು ಕಾಡುತ್ತಿತ್ತು. ಕೊನೆಗೆ ಅವಧಿ ಮುಗಿದಿದ್ದರೂ ಸಹ ಕೃಷಿ ಕಾಲೇಜಿಗೆ ಸೇರುವುದು ಲೇಸೆಂದು ದೃಢ ನಿರ್ಧಾರ ಮಾಡಿ ರಾತ್ರಿ ಟ್ರೈನು ಹತ್ತಿ ಬೆಳಿಗ್ಗೆ ಬೆಂಗಳೂರು ಸೇರಿದೆ. ಕಾಲೇಜಿನ ಫೀಸು ತುಂಬಲು ಹೋದಾಗ ಅವಧಿ ಮುಗಿದಿರುವ ಕಾರಣ ಅಲ್ಲಿಯ ಕಛೇರಿಯ ಅಧಿಕಾರಿ ಹಣ ಕಟ್ಟಿಸಿಕೊಳ್ಳಲು ನಿರಾಕರಿಸಿದರು. ಮುಂದೇನು ಮಾಡುವುದೆಂದು ಯೋಚಿಸಿದಾಗ ಪ್ರಾಂಶುಪಾಲರನ್ನು ಭೇಟಿ ಮಾಡಿ ಇರುವ ಸಂಗತಿಯನ್ನು ಹೇಳಿ ಸೀಟು ಪಡೆಯಬಹುದೆಂದು ನಿರ್ಣಯಿಸಿದೆ. ಅಲ್ಲಿಯ ಮೆಸೆಂಜರ್ ಅವರನ್ನು ಕಾಡಿ ಬೇಡಿ ರೂಂನೊಳಕ್ಕೆ ಹೋದೆ. ಭಯ, ಭಕ್ತಿಯಿಂದ ನಮಸ್ಕರಿಸಿದೆ. ಇದೇ ನನ್ನ ಪೂಜ್ಯ ಗುರುಗಳಾದ ಡಾ.ಮಾಗಡಿ ಪುಟ್ಟರುದ್ರಯ್ಯನವರ ಮೊದಲ ದರ್ಶನ. ಅವರಿಗೆ ಇದ್ದ ವಿಷಯಗಳನ್ನು ಕೂಲಂಕುಷವಾಗಿ ಹೇಳಿದೆ. ಬಂದ ಉತ್ತರ 'ನೋಡಪ್ಪ ಮೆಡಿಕಲ್‌ಗೆ ಸೀಟು ಸಿಕ್ಕುವುದು ಈ ಕಾಲದಲ್ಲಿ ಕಷ್ಟ, ಸೀಟು ಸಿಕ್ಕಿದೆ ಎಂದು ಹೇಳುತ್ತಿದ್ದೀ ಮೆಡಿಕಲ್ ಓದು. ಈ ಕಾಲೇಜಿನಲ್ಲಿ ನಿನಗೆ ಸೀಟನ್ನು ಇನ್ನು ಎರಡು ದಿನ ಲೇಟಾಗಿ ಬಂದರೂ ಕೊಡುತ್ತೇವೆ. ಯೋಚಿಸಿ ನೋಡು' ಎಂದರು. ನನಗೆ ಧೈರ್ಯ, ಸಂತೋಷ ತುಂಬಿಬಂತು. 'ಇಲ್ಲ ಸರ್, ಪ್ರೌಢ ಶಾಲೆಯಲ್ಲಿ ಕೃಷಿಯನ್ನೇ ಐಚ್ಛಿಕ ಭಾಗವಾಗಿ ಓದಿದ್ದೇನೆ, ನಾನು ಇದೇ ಕಾಲೇಜಿಗೆ ಸೇರುವ ಆಸೆ ಇದೆ' ಎಂದೆ. ಅವರು ಕೂಡಲೇ ಸಂಬಂಧ ಪಟ್ಟ ಅಧಿಕಾರಿಗಳನ್ನು ಕರೆದು ಫೀಸು ಕಟ್ಟಿಸಿಕೊಳ್ಳಲು ಹೇಳಿದರು.

ಎರಡನೇ ವರ್ಷದಲ್ಲಿದ್ದಾಗ ಮತ್ತೊಬ್ಬ ಗುರು ಡಾ. ಜಿ.ಪಿ.ಚನ್ನಬಸವಣ್ಣನವರ ಕೀಟ ವಿಂಗಡಣೆಯ ಪಾಠ ಕೇಳಿದಾಗಲೇ ಕೀಟಗಳ ಬಗ್ಗೆ ಒಲವು ಪ್ರಾರಂಭವಾಯಿತು. ಮೂರನೆ ವರ್ಷದ ವಿದ್ಯಾರ್ಥಿಗಳಿಗೆ ಡಾ.ಪುಟ್ಟರುದ್ರಯ್ಯನವರ ಬೆಳೆಗಳ ಪೀಡೆ

ನಿರ್ವಹಣೆಯ ಪಾಠ ತೆಗೆದು ಕೊಳ್ಳುತ್ತಿದ್ದರು. ಪಾಠಮಾಡುವಾಗ ಅವರು ಕೀಟಗಳೊಂದಿಗೆ ಮಾತನಾಡುತ್ತಿದ್ದಾರೆ ಎಂದೆನ್ನಿಸುತ್ತಿತ್ತು. 'Look at this notorious polyphagous fellow' ಎಂದು *ಹಿಲಿಯೋಥಿಸ್* ಹುಳುವಿನ ಬಗ್ಗೆ ಹೇಳುತ್ತಿದ್ದರೆ, ನನಗೆ ಯಾರನ್ನೋ ಬಯ್ಯುತ್ತಿದ್ದಾರೆ ಎನ್ನುವ ಭ್ರಮೆ. ಅದು ಪಾಠವೋ ಪ್ರಾತ್ಯಕ್ಷಿಕೆಯೋ ಹೀಗೆ ಬಹು ರೀತಿಯ ಪರಿಣಾಮ ಉಂಟಾಗುತ್ತಿತ್ತು. ಡಾ.ಪುಟ್ಟರುದ್ರಯ್ಯನವರ ವ್ಯಕ್ತಿತ್ವ ತಿಳಿದಿದ್ದು ಮೂರನೇ ವರ್ಷದ ವಿದ್ಯಾರ್ಥಿಯಾಗಿದ್ದಾಗ. ಇವತ್ತಿಗೂ ಅದು ನನ್ನ ಮನದಲ್ಲಿದೆ. ಕಾಲಕಾಲಕ್ಕೆ ಟೆಸ್ಟ್ ನಡೆಯುತ್ತಿತ್ತು. ನನಗೂ ನನ್ನ ಮಿತ್ರ ಮಿಯಾ ಸಾಹೇಬ್‌ಗೂ ಸ್ಪರ್ಧೆ– ಥಿಯರಿಯಲ್ಲಿ ಅವನು ಹೆಚ್ಚಿನ ಅಂಕಗಳಿಸಿದ್ದರೆ ಪ್ರಾಕ್ಟಿಕಲ್‌ನಲ್ಲಿ ನನ್ನ ಗೆಲುವಾಗಿರುತ್ತಿತ್ತು. ಗುರುಗಳು ಸಂತೋಷ ತೋರುತ್ತಿದ್ದರು ಅದು ನಮಗೆ ಪ್ರೇರಣೆಯಾಗಿರುತ್ತಿತ್ತು.

ಡಾ.ಪುಟ್ಟರುದ್ರಯ್ಯನವರಿಗೆ ಆ ದಿನಗಳಲ್ಲೇ ಪರಿಸರದ ಬಗ್ಗೆ ಹೆಚ್ಚಿನ ಕಾಳಜಿಯಿತ್ತು. ಯಾವುದೇ ಬೆಳೆಯ ಪೀಡೆ ಹತೋಟಿಯ ಬಗ್ಗೆ ಹೇಳುವಾಗ ಮೊದಲು 'ಕಲ್ಚರಲ್ ಪ್ರಾಕ್ಟೀಸ್', ನಂತರ ಭೌತಿಕ ವಿಧಾನ ಅನುಸರಿಸಬೇಕೆನ್ನುತ್ತಿದ್ದರು. ಹೆಚ್ಚು ಒತ್ತು ಕೊಡುತ್ತಿದ್ದದ್ದು ಜೈವಿಕ ನಿಯಂತ್ರಣದ ಬಗೆಗೆ; ಅನಿವಾರ್ಯವೆಂದಾಗ ಮಾತ್ರ ರಾಸಾಯನಿಕ ಪೀಡೆನಾಶಕಗಳು. ಇದನ್ನುಇತ್ತೀಚಿನ ದಿನಗಳಲ್ಲಿ ಸಮಗ್ರ ಪೀಡೆ ನಿರ್ವಹಣೆ (IPM) ಎಂದು ಕರೆಯುತ್ತಿದ್ದೇವೆ.

ಡಾ. ಪುಟ್ಟರುದ್ರಯ್ಯನವರಿಗೆ ಸಾಮಾನ್ಯವಾಗಿ ಕೋಪ ಬರುತ್ತಿರಲಿಲ್ಲ. ಕೋಪ ಬಂದಾಗ ಅವುಗಳ ಚಿಹ್ನೆಗಳನ್ನು ನಾನು ಗುರುತಿಸಿದ್ದು– ತಮ್ಮ ಬಲಗಾಲನ್ನು ಎತ್ತಿ ನೆಲಕ್ಕೆ ಅಪ್ಪಳಿಸುತ್ತಿದ್ದರು. ಒಮ್ಮೆ ಯಾಕೋ ಏನೋ ಜೈವಿಕ ಹತೋಟಿ ಪಾಠ ಮಾಡುತ್ತ ಇದ್ದಕ್ಕಿದ್ದಂತೆಯೆ ಕೋಪದ ಚಿಹ್ನೆಯನ್ನು ಪ್ರದರ್ಶಿಸಿದರು– ಕಾಲನ್ನು ನೆಲಕ್ಕೆತ್ತಿ ಅಪ್ಪಳಿಸಿದರು. ಅದಕ್ಕೆ ಕಾರಣ 1964ರಲ್ಲಿ ಮಂಡ್ಯ ಜಿಲ್ಲೆಯಲ್ಲಿ ಭತ್ತದ ಪೀಡೆಗಳ ಹತೋಟಿಗೆ ಏರೋಪ್ಲೇನ್‌ನಲ್ಲಿ ಬೆಳೆಗೆ ರಾಸಾಯನಿಕ ಸಿಂಪರಣೆ ಮಾಡಿದ್ದು. ಇದು ಅವರಿಗೆ ಇಷ್ಟ ಇಲ್ಲದಿರುವುದನ್ನು ಬಿಡಿಸಿ ಹೇಳಿಬಿಟ್ಟರು, ಮಂಡ್ಯದಲ್ಲಿ ಕಬ್ಬಿನ ಸುಳಿ ಕೊರೆಯುವ ಹುಳುಗಳ ಹತೋಟಿಗೆ ಪರತಂತ್ರ ಜೀವಿಗಳ ಪ್ರಯೋಗಾಲಯವಿದೆ. ಇವರು ಏರೋಪ್ಲೇನ್‌ನಲ್ಲಿ ಸಿಂಪರಣೆ ಮಾಡಿದರೆ ಪರೋಪಜೀವಿಗಳ ನಾಶಕ್ಕೆ ನಾಂದಿಯಲ್ಲವೆ ಎಂಬ ವಾದ ಅವರದು. ಅವರು ಪಾಠ ಮಾಡುವಾಗ ಸಮಯ ಹೋದದ್ದೇ ತಿಳಿಯುತ್ತಿರಲಿಲ್ಲ. ಕೊಡುತ್ತಿದ್ದ ಉದಾಹರಣೆಗಳು 'ಪ್ರಾಕ್ಟಿಕಲ್' ಆಗಿಯೇ ಇರುತ್ತಿದ್ದವು. ಇದಕ್ಕೊಂದು ಉದಾಹರಣೆ ಹೇಳುವುದಾದರೆ– ಜೋಳದ ತೆನೆ ತಿಗಣೆ ಆರುಕಾಲು ಚಿಟ್ಟೆಯ ಹತೋಟಿಗೆ ಚಾಮರಾಜನಗರ ಜಿಲ್ಲೆಯ ಗ್ರಾಮಗಳಲ್ಲಿ ಜೋಳದ ಬಿತ್ತನೆ ಭರಣಿ ಮಳೆಯಲ್ಲಿಯೇ ಮಾಡುತ್ತಾರೆ. ನಾನು ಕೆಲವು ಗ್ರಾಮಗಳಿಗೆ ಹೋದಾಗ ಜೂನ್ ತಿಂಗಳಲ್ಲಿ ಜೋಳ ಬಿತ್ತನೆ ಮಾಡಲು ನಿರಾಕರಿಸಿದರು; ರೈತರು ಹೇಳುವಂತೆ ಆರುಕಾಲು ಚಿಟ್ಟೆಯ ಕಾಟವು ಭರಣಿ ಮಳೆಯಲ್ಲಿ ಬಿತ್ತಿದರೆ ಮಾತ್ರ ತಪ್ಪಿಸಬಹುದೆಂಬ ವಾದ. ಆಗ ನನಗೆ ಗುರು ಕಲಿಸಿದ್ದ ತಾಂತ್ರಿಕತೆ ಜ್ಞಾಪಕಕ್ಕೆ ಬಂತು.

ನಾನು ಸ್ನಾತಕೋತ್ತರ ವಿದ್ಯಾರ್ಥಿಯಾಗಿದ್ದಾಗ ಬ್ಯಾಂಕಿನ ಕೆಲವು ಹುದ್ದೆಗಳು ದಿನಪತ್ರಿಕೆಯಲ್ಲಿ ಪ್ರಕಟವಾಗಿದ್ದವು. ಆ ಹುದ್ದೆಗಳಿಗೆ ಅರ್ಜಿ ಹಾಕಲು ಒಂದು ಪ್ರಮಾಣಪತ್ರ ಕೇಳಲು ಕಛೇರಿಗೆ ಹೋದೆ, ವಿಷಯ ತಿಳಿಸಿ ಪ್ರಮಾಣ ಪತ್ರ ಕೊಡುವಂತೆ ಕೋರಿದೆ. ಅದಕ್ಕೆ ಗುರುಗಳು, 'ಸರ್ಟಿಫಿಕೇಟ್ ಕೊಡ್ತೋಣ. ಆದರೆ ಕೀಟಶಾಸ್ತ್ರ ಓದಿ ಒಬ್ಬ ಕೀಟಶಾಸ್ತ್ರಜ್ಞನಾಗದೆ ಬ್ಯಾಂಕಿನಲ್ಲಿ ಸಾಲ ಕೊಟ್ಟು ಸಾಲ ವಸೂಲಿ ಕೆಲಸಕ್ಕೆ ಹೋಗಬೇಕೆ? ಈ ಕೆಲಸಕ್ಕೆ ಬಿ.ಎಸ್ಸಿ.(ಅಗ್ರಿ)ಯೇ ಸಾಕಾಗಿತ್ತು. ಇದರಿಂದ ನೀನು ಒಂದು ಎಂಟಮಾಲಜಿ ಸೀಟು ಹಾಳು ಮಾಡಿದಂತೆ' ಎಂದು ಹೇಳಿದರು. ತಕ್ಷಣ ನಾನು, 'ಸಾರ್ ಬಿಡಿ. ನಾನು ಆ ಕೆಲಸಕ್ಕೆ ಹೋಗೋದಿಲ್ಲ' ಎಂಟಮಾಲಜಿಯಲ್ಲಿಯೇ ಇರುತ್ತೇನೆಂದು ತಿಳಿಸಿದೆ.

ಡಾ.ಪುಟ್ಟರುದ್ರಯ್ಯನವರು ಎಲ್ಲಾ ವರ್ಗಗಳ ಜನರ ಜೊತೆಯಲ್ಲಿ ತಮ್ಮ ಅಧಿಕಾರದ ಅಂತಸ್ತನ್ನು ಬಿಟ್ಟು ಸೌಮ್ಯವಾಗಿ ನಡೆದುಕೊಳ್ಳುತ್ತಿದ್ದ ವ್ಯಕ್ತಿಯಾಗಿದ್ದರು. ನಾನು ಸ್ನಾತಕೋತ್ತರ ವಿದ್ಯಾರ್ಥಿಯಾಗಿದ್ದಾಗ ರಾಜ್ಯದ ಶೈಕ್ಷಣಿಕ ಪ್ರವಾಸಕ್ಕೆ ಅವರೇ ನಾಯಕರಾಗಿ ನಮ್ಮೊಡನೆ ಬಂದರು. ತಾವು ಹಿಂದೆ ಕೆಲಸ ಮಾಡಿದ ಮಂಡ್ಯದ ಕಬ್ಬಿನ ಸುಳಿ ಕೊರೆಯುವ ಹುಳುವಿನ 'ಪರತಂತ್ರ ಜೀವಿ ಪ್ರಯೋಗಶಾಲೆಗೆ' ಭೇಟಿ ಕೊಟ್ಟಾಗ ಅವರ ಜೊತೆ ಕೆಲಸ ಮಾಡಿದ ಕ್ಷೇತ್ರ ಮಟ್ಟದ ನೌಕರರ ಜೊತೆ ಮಾತನಾಡಿ ಕುಟುಂಬದವರ ಬಗ್ಗೆ ವಿಚಾರಿಸುತ್ತಿದ್ದನ್ನು ಕೇಳಿ ನನಗೆ 'ಏನಪ್ಪ ಒಬ್ಬ ಕಾಲೇಜಿನ ಶೈಕ್ಷಣಿಕ ನಿರ್ದೇಶಕರಾಗಿ ಇಷ್ಟೊಂದು ಮಮತೆಯಿಂದ ಮಾತನಾಡಿಸುತ್ತಿದ್ದಾರಲ್ಲ' ಎಂಬ ಆಶ್ಚರ್ಯ. ಇದು ಅವರ ವ್ಯಕ್ತಿತ್ವದ ಹೆಗ್ಗುರುತು. ಮುಂದೆ ಮಂಗಳೂರಿನ ಕಂಕನಾಡಿ ಭತ್ತದ ಸಂಶೋಧನಾ ಕ್ಷೇತ್ರಕ್ಕೆ ಭೇಟಿ ಕೊಟ್ಟಾಗ, ಅಲ್ಲಿನ ಕೃಷಿ ಇಲಾಖೆಯ ಉಪ ನಿರ್ದೇಶಕರಾಗಿದ್ದ ಶ್ರೀ ಅಂಕೇಗೌಡರು ಶ್ರೀಯುತರಿಗೆ ಅತಿಥಿ ಗೃಹದಲ್ಲಿ ರಾತ್ರಿ ತಂಗಲು ಸಕಲ ಸಿದ್ಧತೆಗಳನ್ನು ಮಾಡಿದ್ದರು. ಆದರೆ ಅವರು ವಿದ್ಯಾರ್ಥಿಗಳಿಗೆ ತಂಗಲು ಮಾಡಿದ್ದ ಹಿಂದಿ ಪ್ರಚಾರ ಸಭಾ ಕಟ್ಟಡದಲ್ಲಿ ವಿದ್ಯಾರ್ಥಿಗಳೊಂದಿಗೆಯೇ ವಾಸ್ತವ್ಯ ಮಾಡಿದರು. ಅವರು 'ಲಗ್ಷುರಿ ಜೀವಿ'ಗಳಲ್ಲ ಎಂಬುದಕ್ಕೆ ಇದೊಂದು ನಿದರ್ಶನ. ಮುಂದೆ ಮೂಡಿಗೆರೆ ಸಂಶೋಧನಾ ಕೇಂದ್ರ, ಅಲ್ಲಿಯ ಸಂಶೋಧನೆಗಳ ಬಗ್ಗೆ ಚರ್ಚೆ ಮಾಡುತ್ತಿದ್ದಾಗ ಒಬ್ಬ ನಿಷ್ಠಾವಂತ ರಾಜಕಾರಣಿ ಬಂದು ಗುರುಗಳಿಗೆ ನಮಸ್ಕರಿಸಿ ಮಾತುಕತೆ ಮುಗಿಯುತ್ತಿದ್ದಂತೆ ರಾಜಕಾರಣಿ ಅವರ ಎಸ್ಟೇಟಿಗೆ ಭೋಜನಕ್ಕೆ ಬರುವಂತೆ ವಿನಂತಿಸಿಕೊಂಡರು. ಇವರು ಆಹ್ವಾನವನ್ನು ನಮ್ರತೆಯಿಂದಲೇ ನಿರಾಕರಿಸಿದರು. ಆದರೂ ಆ ವ್ಯಕ್ತಿ ಬಿಡಲಿಲ್ಲ, ಒತ್ತಾಯ ಮಾಡಿದರು. ಗುರುಗಳು, 'ಇಲ್ಲಿ ನೋಡಿ ನನ್ನ ಸ್ಟೂಡೆಂಟುಗಳಿದ್ದಾರೆ. ಅವರನ್ನು ಬಿಟ್ಟು ಬರುವುದು ಸರಿಯಲ್ಲ' ಎಂದರು. ಅದಕ್ಕೆ ಅವರು 'ಅವರನ್ನೂ ಕರೆದುಕೊಂಡು ಬನ್ನಿ ಸಾರ್' ಎಂದರು. ಈ ಮಾತು ಬಂದಾಗ ನನಗಂತೂ ರಾಜಕಾರಣಿ ಮನೆಯಲ್ಲಿ ಭೋಜನವೆಂದರೆ ಜೋರಾಗಿರುತ್ತದೆ ಎಂಬ ಭಾವನೆ. ಈ ಆಹ್ವಾನಕ್ಕೂ ಗುರುಗಳು ಒಪ್ಪಲಿಲ್ಲ. 'ಏಕೆ ಸಾರ್, ಅವರು ಕರೆದರೂ ನೀವು ಹೋಗಲಿಲ್ಲ?' ಎಂದು ಕೇಳುವ ಧೈರ್ಯ ನಮಗಿರಲಿಲ್ಲ. ಆದರೂ ನಮ್ಮ ಜೊತೆ ಬಂದಿದ್ದ ಡಾ. ಹನುಮಂತರಾಯ ಶೆಟ್ಟರು, 'ಯಾಕ್ ಸಾರ್, ಪಾಪ

ಅವರು ಕೇಳಿಕೊಂಡರೂ ನೀವು ಒಪ್ಪಲಿಲ್ಲ?' ಎಂಬ ಪ್ರಶ್ನೆಗೆ ಅವರ ಉತ್ತರ 'ಹೌದಪ್ಪಾ, ಇಂದು ಊಟಕ್ಕೆ ಹೋದರೆ ಎಂದೋ ಒಂದು ದಿನ ಫೋನ್ ಮಾಡಿ ಸರ್ ನಮ್ಮ ಹುಡುಗನಿಗೆ ಒಂದು ಸೀಟ್ ಕೊಡೀಂತ ಕೇಳ್ತಾರೆ, ಆಗ ಅವರ ಹಂಗಿನಲ್ಲಿರಬೇಕಾಗುತ್ತದೆ' ಎಂದರು. ನಾವು ಯಾರೂ ತುಟ್ ಪಿಟ್ ಎನ್ನಲಿಲ್ಲ.

ಡಾ.ಪುಟ್ಟರುದ್ರಯ್ಯನವರು ನನಗೆ ತಿಳಿದಂತೆ ಅವರು ಆಫೀಸಿಗೆ ಎಂದೂ ರಜೆ ಹಾಕಿದವರಲ್ಲ. ಆ ದಿನ ಸೋಮವಾರ. ಅವರ ಹಿರಿಯ ಮಗಳ ಮದುವೆ. ಈ ದಿನ ಮದುವೆ ಇರುವುದರಿಂದ ಅವರ ಕ್ಲಾಸ್ ಇಲ್ಲವೆಂದು ಕ್ಯಾಂಟೀನಿನಲ್ಲಿ ಹರಟೆಯಲ್ಲಿದ್ದೆವು. 9.45ಕ್ಕೆ ಕಪ್ಪು ಕಾರು ಬಂದೇ ಬಿಟ್ಟಿತು! ಕ್ಲಾಸ್ ತೆಗೆದುಕೊಂಡರು. ಪಾಠ ಮಾಡುವುದೆಂದರೆ ಅವರಿಗೆ ಎಲ್ಲಿಲ್ಲದ ಆಸಕ್ತಿ. ಶಿಕ್ಷಣ ನಿರ್ದೇಶಕರಾಗಿದ್ದಾಗ ಆಡಳಿತದ ಒತ್ತಡವಿದ್ದರೂ ಪಾಠ, ಸಂಶೋಧನೆ ಮಾಡುವುದನ್ನು ನಿಲ್ಲಿಸಿದವರಲ್ಲ. ಊಟದ ಬಿಡುವಿನ ವೇಳೆಯಲ್ಲಿ ಪಿ.ಜಿ. ಲ್ಯಾಬಿಗೆ ಭೇಟಿಕೊಟ್ಟು ವಿದ್ಯಾರ್ಥಿಗಳ ಸಂಶೋಧನೆ ಬಗ್ಗೆ ವಿಚಾರಿಸುತ್ತಿದ್ದರು. ಕೆಲವು ಕೆಲಸಗಳನ್ನು ಹೇಳುತ್ತಿದ್ದರು. ಮುಂದಿನ ದಿನ ಬಂದು ಹೇಳಿದ ಕೆಲಸದ ಪ್ರಗತಿ ವಿಚಾರಿಸುತ್ತಿದ್ದರು. ಇನ್ನೂ ಮಾಡಿಲ್ಲ ಸರ್ ನಾಳೆ ಮಾಡುತ್ತೇನೆ ಎಂದರೆ 'I say do it today. Today is a good day than tomorrow' ಎಂದು ಎಚ್ಚರಿಸುತ್ತಿದ್ದರು.

ಸ್ನಾತಕೋತ್ತರ ಅಧ್ಯಯನ ಮುಗಿಯುತ್ತಿದ್ದಂತೆ ಕೃಷಿ ವಿಶ್ವವಿದ್ಯಾನಿಲಯದಲ್ಲಿ ನನಗೆ ಇನ್‌ಸ್ಟ್ರಕ್ಟರ್ ಹುದ್ದೆಗೆ ಆಯ್ಕೆಯಾಗಿ ಧಾರವಾಡ ಕೃಷಿ ಕಾಲೇಜಿಗೆ ನಿಯೋಜನೆಯಾಯಿತು. ಆದರೆ ಧಾರವಾಡಕ್ಕೆ ಹೋಗಲು ಮನಸ್ಸಿರಲಿಲ್ಲ. ಒಂದು ಪ್ರಶಾಂತ ಸಮಯದಲ್ಲಿ ಗುರುಗಳನ್ನು ಕಛೇರಿಯಲ್ಲಿ ಭೇಟಿ ಮಾಡಿ, 'ಧಾರವಾಡಕ್ಕೆ ಹೋಗಲು ಇಚ್ಛೆ ಇಲ್ಲ ಸಾರ್' ಎಂದ ತಕ್ಷಣ ಕುಳಿತಿದ್ದ ಕುರ್ಚಿಯನ್ನು ತಳ್ಳಿ, 'ನಿಮಗೆ ನಿಮ್ಮ ಮನೆಯೊಳಗೇ ಕೆಲಸ ಕೊಡುತ್ತಾರೆ! ಹೋಗ್ರಿ, ಹೊರ ಜಿಲ್ಲೆಗಳಿಗೆ ಹೋಗಿ ಕೆಲಸ ಮಾಡಿ ಅನುಭವ ಪಡೆಯಿರಿ' ಎಂದು ಕೋಪದಿಂದಲೇ ಹೇಳಿದರು. ಅದರಂತೆ ಆ ದಿನ ರಾತ್ರಿಯೇ ಧಾರವಾಡಕ್ಕೆ ಪ್ರಯಾಣ ಮಾಡಿ ಡ್ಯೂಟಿಗೆ ಸೇರಿಕೊಂಡೆ.

ಡಾ.ಪುಟ್ಟರುದ್ರಯ್ಯರವರು ನಿವೃತ್ತಿಯಾದ ಮೇಲೆ ನಾನು ಬೆಂಗಳೂರಿಗೆ ಬಂದಾಗಲೆಲ್ಲಾ ಎಸ್.ವಿ.ರಂಗಸ್ವಾಮಿ ಕಂಪೆನಿಗೆ ಹೋಗಿ ಅವರೊಡನೆ ಕೆಲವು ಪೀಡೆಗಳ ಬಗ್ಗೆ ಚರ್ಚಿಸುತ್ತಿದ್ದೆ. ವಿ.ಸಿ.ಫಾರಂನಲ್ಲಿ ಒಂದು ತಾಕಿನಲ್ಲಿ ಕಬ್ಬಿಗೆ ಬಿಳಿನೊಣಗಳ ಕಾಟ ಕಾಣಿಸಿಕೊಂಡಿದೆ ಸಾರ್ ಎಂದರೆ, 1934ರಲ್ಲಿ ಹಾಡ್ಯ ಬ್ಲಾಕಿನಲ್ಲಿ ಕಾಣಿಸಿಕೊಂಡಿತ್ತು ಎಂದು ಮರು ಉತ್ತರಿಸಿದರು. ಅದು ಅವರ ಜ್ಞಾಪಕ ಶಕ್ತಿಯ ಫಲದ ಗುರುತು.

ಒಂದು ಸಾರಿ ಅರಸೀಕೆರೆಯಲ್ಲಿ ಕೃಷಿ ಅಧಿಕಾರಿಗಳಿಗೆ ತಿಂಗಳ ತರಬೇತಿ ಮತ್ತು ಕ್ಷೇತ್ರ ಭೇಟಿ ಕಾರ್ಯಕ್ರಮದಲ್ಲಿ ಉದ್ಭವಿಸಿದ ಪ್ರಶ್ನೆ 'ಕೇರೆ ಹಾವು ಭತ್ತದ ಸಸಿಗಳನ್ನು ಕತ್ತರಿಸುತ್ತದೆಯೆ?' ಎಂಬುದು. ಕೇರೆ ಹಾವಲ್ಲ ಇದು ಇಲಿಯ ಕಾಟದಿಂದ ಎಂದು ಹೇಳಿದರೂ ಯಾರೂ ಇದಕ್ಕೆ ಒಪ್ಪಲಿಲ್ಲ. ಇದರಿಂದ ತಾಂತ್ರಿಕ ಚರ್ಚೆಯೇ ನಡೆದು

ಹೋಯಿತು. ನನಗೂ ನನ್ನ ಉತ್ತರ ತಪ್ಪಿರಬಹುದೆಂದು ಭಾವಿಸಿ, ಮರು ದಿನವೇ ಗುರುವಿಗೆ ಈ ವಿಚಾರವಾಗಿ ಒಂದು ಪತ್ರ ರವಾನಿಸಿದೆ. ಮರು ಪತ್ರದಲ್ಲಿ 1954ರಲ್ಲಿ ಗಂಗಾವತಿ ಕೃಷಿ ಫಾರಂನ ಅನುಭವ ಹಂಚಿಕೊಂಡರು. ಅದು ಇಲಿಯೇ ಹೊರತು ಕೇರೆ ಹಾವಲ್ಲ. ಕೇರೆ ಹಾವಿನ ಬಾಯಿ ರಚನೆ ಗಿಡಗಳನ್ನು ಕತ್ತರಿಸಲು ಸಾಧ್ಯವಿಲ್ಲವೆಂದು, ವಿವರಿಸಿದಾಗ ಯಾರು ತುಟಿಪಿಟಕ್ ಎನ್ನಲಿಲ್ಲ, ಕಾರಣ ಡಾ.ಪುಟ್ಟರುದ್ರಯ್ಯನವರ ತಾಂತ್ರಿಕತೆ ಅಷ್ಟು ಖಚಿತವೆಂಬುದು ಎಲ್ಲರಿಗೂ ಗೊತ್ತಿತ್ತು. ಮತ್ತೊಂದು ಸಂದರ್ಭದಲ್ಲಿ ಕೃಷಿ ಅಧಿಕಾರಿಗಳ ತರಬೇತಿ ಸಮಯದಲ್ಲಿ, ಭತ್ತದಲ್ಲಿ ಎರೆಹುಳುಗಳ ಕಾಟ ಎಂಬ ಪ್ರಶ್ನೆ. ಇದರ ಬಗ್ಗೆ ನನಗೂ ತಿಳಿದಿರಲಿಲ್ಲ ಪುನಃ ಅವರ ಮೊರೆ ಹೋದೆ. ಕೆಲವು ಬಗೆಯ ಎರೆಹುಳುಗಳು ವೀಳೆಯದೆಲೆಗೂ ಸಹ ತೊಂದರೆ ಕೊಡುತ್ತವೆ. ಇವುಗಳ ಹತೋಟಿಗೆ ಅಮೋನಿಯಂ ಸಲ್ಫೇಟ್ ಬಳಸುವಂತೆ ಸೂಚಿಸಿದರು. ಈ ರೀತಿಯ ಅನೇಕ ತಾಂತ್ರಿಕತೆಗಳನ್ನು ಅವರಿಂದ ಕಲಿತೆ. ಇದು ನನ್ನ ಸೌಭಾಗ್ಯವೆಂದೇ ಪರಿಗಣಿಸಿದ್ದೇನೆ. ಡಾ. ಪುಟ್ಟರುದ್ರಯ್ಯನವರು ತಾಂತ್ರಿಕತೆಯಲ್ಲಿ ಮಹಾ ಚತುರರು, ಆಡಳಿತದಲ್ಲಿ ನಿಪುಣರು. ಗುರುವೇ ಮತ್ತೊಮ್ಮೆ ಹುಟ್ಟಿ ಬನ್ನಿ. ನಿಮ್ಮ ದಿವ್ಯ ಮಾರ್ಗದರ್ಶನ ವಿದ್ಯಾರ್ಥಿಗಳಿಗೆ, ಕೀಟಶಾಸ್ತ್ರಜ್ಞರಿಗೆ, ವಿಸ್ತರಣಾಧಿಕಾರಿಗಳಿಗೆ ಮತ್ತು ರೈತ ಸಮುದಾಯಕ್ಕೆ ಸಿಗುವಂತಾಗಲಿ ಎಂದು ಪ್ರಾರ್ಥಿಸುತ್ತೇನೆ.

(ಪ್ರೊ. ಗುಬ್ಬಯ್ಯನವರು ನಿವೃತ್ತ ಕೀಟಶಾಸ್ತ್ರ ಪ್ರಾಧ್ಯಾಪಕರು, ಕೃಷಿ ಮಹಾವಿದ್ಯಾಲಯ, ವಿ.ಸಿ.ಫಾರಂ, ಮಂಡ್ಯ)

## ಡಾ. ಟಿ.ಸಿ.ಚನ್ನಕೃಷ್ಣಯ್ಯ

ನನಗೆ ಬಾಲ್ಯದಿಂದಲೇ ಪುಸ್ತಕಗಳನ್ನೋದುವ ಅಭ್ಯಾಸ, ಚಟವೆನ್ನುವ ಮಟ್ಟದ್ದು. ಈ ಚಟಕ್ಕೆ ಕಾರಣ ನನ್ನ ತಂದೆಯವರು. ನಾನು ಓದುತ್ತಿದ್ದ ಪುಸ್ತಕಗಳು ಕಥೆ, ಕಾದಂಬರಿಗಳಷ್ಟೇ ಅಲ್ಲದೆ ಆಗೀಗ ಇನ್ನಿತರ ವಿಷಯಗಳ ಪುಸ್ತಕಗಳನ್ನು ಸಹ ಓದುತ್ತಿದ್ದೆ. ಹಾಗೆ ಓದುತ್ತಿದ್ದಾಗ ಒಮ್ಮೆ ಮೈಸೂರು ರಾಜ್ಯದ ಕೀಟಗಳು ಎಂತಲೋ, ಮೈಸೂರಿನ ಕೀಟಗಳು ಎಂತಲೋ ಒಂದು ಪುಸ್ತಕವನ್ನು ಓದಿದೆ.

ಕೃಷಿಕ ಹಿನ್ನೆಲೆಯಿಂದ ಬಂದ ನನಗೆ, ಬೆಳೆಗಳನ್ನು ಬಾಧಿಸುವ ಕೀಟಗಳ ಪರಿಚಯ ಸಾಮಾನ್ಯ ರೈತನಿಗಿರುವಂತೆ ನನಗೂ ಇದ್ದದ್ದು ಸಹಜವೇ. ಆ ಕಾರಣದಿಂದ, ಸದ್ರಿ ಪುಸ್ತಿಕೆಯ ಲೇಖಕರಾದ ಡಾ. ಪುಟ್ಟರುದ್ರಯ್ಯನವರ ಬಗ್ಗೆ ಆಸಕ್ತಿ ಹುಟ್ಟಿ ವಿಚಾರಿಸಲಾಗಿ ಅವರು ನನ್ನ ತಾಲ್ಲೂಕಿ(ಮಾಗಡಿ)ನವರೇ ಆಗಿದ್ದುದು ನನಗೆ ಹೆಮ್ಮೆಯ ವಿಷಯವೆನಿಸಿತು. ಅದೂ ಅಲ್ಲದೆ ಮುಂದೆ ನಾನು ಸರ್ಕಾರಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ನಮ್ಮ ಅಧ್ಯಾಪಕಿ ನನ್ನಂತಹ ಹಳ್ಳಿಗಾಡಿನ ವಿದ್ಯಾರ್ಥಿಗಳೊಡನೆ ವಿಶೇಷವಾಗಿ ಆತ್ಮೀಯವಾಗಿದ್ದ ಶ್ರೀಮತಿ ಎಂ.ಪಿ.ಸತ್ಯವತಿಯವರು ಡಾ.ಪುಟ್ಟರುದ್ರಯ್ಯನವರ ಪುತ್ರಿಯಾಗಿದ್ದರು, ಇವೆಲ್ಲವೂ ಯೋಗಾಯೋಗ ಎನ್ನಬಹುದೇ?

ಡಾ.ಎಂ.ಪಿ.ಯವರನ್ನೊಮ್ಮೆ ಕಾಣಬೇಕು ಅವರೊಡನೆ ಮಾಡನಾಡಬೇಕೆಂಬ ಹಂಬಲ ನನ್ನದು. ಅದೇ ವೇಳೆಗೆ ಕೃಷಿ ಕಾಲೇಜಿನಲ್ಲಿ ನಡೆಸಲಾಗುತ್ತಿದ್ದ ಚನ್ನಮ್ಮ ಮೆಮೋರಿಯಲ್ ಚರ್ಚಾಸ್ಪರ್ಧೆಯಲ್ಲಿ ಸರ್ಕಾರಿ ಕಾಲೇಜನ್ನು ಪ್ರತಿನಿಧಿಸಲು ನಾನು ಆಯ್ಕೆಯಾಗಿ ಭಾಗವಹಿಸಿದ್ದೆ. ಆ ಸಮಯದಲ್ಲಿ ಅಲ್ಲಿ ಪ್ರಾಚಾರ್ಯರಾಗಿದ್ದ ಡಾ. ಎಂ.ಪಿ.ಯವರು ಭೇಟಿಯಾಗಿದ್ದು ನನ್ನ ಭಾಗ್ಯವೆಂದೇ ಇಂದೂ ನಂಬಿದ್ದೇನೆ. ನನ್ನಂತಹ ಒಬ್ಬ ಚಿಕ್ಕವಯಸ್ಸಿನ ವ್ಯಕ್ತಿಯೊಡನೆ ಅವರು ವೈಜ್ಞಾನಿಕ ವಿಷಯ ಮಾತಾಡಬಹುದೇ ಎಂದು ಅನುಮಾನವಿತ್ತು. ಆದರೂ ಅವರ ಪುಸ್ತಿಕೆಯ ವಿಷಯವನ್ನು ನಾನು ಪ್ರಸ್ತಾಪಿಸಿದಾಗ ಆ ಬಗ್ಗೆ ಸಂತೋಷದಿಂದ ಕೆಲಕಾಲ ಚರ್ಚಿಸಿದ್ದಲ್ಲದೇ, ನನ್ನ ಮುಂದಿನ ವಿದ್ಯಾಭ್ಯಾಸ ಕೃಷಿಕರಿಗೆ ಸಂಬಂಧಿಸಿದ್ದರೆ ಒಳ್ಳೆಯದೆಂದು ಸೂಚಿಸಿದರು.

ತದನಂತರ ನಾನು ಪಶುವೈದ್ಯಕೀಯ ಕಾಲೇಜು ಸೇರಿದಾಗ ಸಹಜವಾಗಿ ಅವರನ್ನು ಪಕ್ಕದ ಕಾಲೇಜಿನಲ್ಲಿ ಭೇಟಿಯಾಗಿ ವಿಷಯ ತಿಳಿಸಿದಾಗ ಸಂತೋಷಪಟ್ಟರು. ಆನಂತರ ನಾನು ಅವರನ್ನು ಆಗಾಗ ಭೇಟಿಯಾಗುತ್ತಲೇ ಇದ್ದೆ. ನಾನು ಸ್ವಭಾವದಿಂದ 'ಕಿಡಿಗೇಡಿ' ಎಂದೇ ವರ್ಗೀಕರಿಸಬಹುದಾದ ವಿದ್ಯಾರ್ಥಿಯಾಗಿಯೇ ಇದ್ದೆ. ಆದರೆ ಡಾ.ಎಂ.ಪಿ.ಯವರ ಸಾನಿಧ್ಯದಲ್ಲೆಂದೂ ತರಲೇ ಮಾಡಿಯೇ ಇಲ್ಲ. 1965ರಲ್ಲಿ ನಡೆದ ಪಶುವೈದ್ಯ ವಿದ್ಯಾರ್ಥಿಗಳ ದೀರ್ಘ ಮುಷ್ಕರದ ಸಂದರ್ಭದಲ್ಲಿ, ವಿದ್ಯಾರ್ಥಿ ಧುರೀಣರಲ್ಲಿ ನಾನೂ ಒಬ್ಬ. ನಾವು ಮುಷ್ಕರ ಕೈಬಿಡದೇ ಮುಂದುವರಿಸುತ್ತಿದ್ದಾಗ, ನಮ್ಮ ಮುಂದಿನ ಭವಿಷ್ಯದ ಬಗ್ಗೆ ನಮಗೆ ಮನಮುಟ್ಟುವಂತೆ ತಿಳಿಸಿದ್ದು ನಮ್ಮ ವಿದ್ಯಾಲಯದ ಇತರ ಪ್ರಾಧ್ಯಾಪಕರುಗಳಿಗಿಂತ ಪಕ್ಕದ ಕಾಲೇಜಿನ ಪ್ರಾಚಾರ್ಯ ಡಾ.ಎಂ.ಪಿ.ಯವರೇ ಎಂಬುದು ಉಲ್ಲೇಕನಾರ್ಹ.

ಜನಾಂಗದ ಅದರಲ್ಲೂ ಕೃಷಿಕರ ಒಳಿತನ್ನು ಅವರು ಸದಾ ಉಸಿರಾಗಿಸಿ ಕೊಂಡಿದ್ದರೆಂಬುದಕ್ಕೆ ಒಂದು ಪ್ರಸಂಗ ಉಲ್ಲೇಖಿಸಿ ವಿರಮಿಸುತ್ತೇನೆ. ನಾನು ಮಲೆನಾಡಿನ ಪ್ರದೇಶದಲ್ಲಿ ನನ್ನ ವೃತ್ತಿ ನಿರ್ವಹಿಸುತ್ತಿದ್ದಾಗ, ಅಲ್ಲಿನ ಒಬ್ಬ ಪ್ರಗತಿಪರ ರೈತರೂ, ನನ್ನ ಸ್ನೇಹಿತರೂ ಆದವರೊಬ್ಬರು ಅವರ ತೋಟ ಹಾಗೂ ಗದ್ದೆಗಳಲ್ಲಿನ ಕೀಟಬಾಧೆಗಳ ಬಗ್ಗೆ ಮಾತನಾಡುತ್ತಿದ್ದಾಗ ನಾನು ಡಾ.ಎಂ.ಪಿ.ಯರವರ ಬಗ್ಗೆ ಪ್ರಸ್ತಾಪಿಸಿದೆನಲ್ಲದೇ ನನ್ನ ಮುಂದಿನ ಬೆಂಗಳೂರಿನ ಭೇಟಿಯ ಸಂದರ್ಭದಲ್ಲಿ, ಅವರ ಸಮಸ್ಯೆ ಬಗ್ಗೆ ಡಾ.ಎಂ.ಪಿ.ಯವರಲ್ಲಿ ಪ್ರಸ್ತಾಪಿಸಿ ಅವರು ಸಲಹೆ ಕೊಟ್ಟರೆ ತಿಳಿಸುವುದಾಗಿ ತಿಳಿಸಿದ್ದೆ.

ಬೆಂಗಳೂರಿಗೆ ಬಂದಾಗ ಎಂ.ಪಿ.ಯವರು ಮೆ||ಎಸ್.ವಿ.ರಂಗಸ್ವಾಮಿ ಕಂಪೆನಿಯಲ್ಲಿ ಸಲಹೆಗಾರರಾಗಿ ಮಾರ್ಗದರ್ಶನ ಮಾಡುತ್ತಿದ್ದಲ್ಲಿಗೆ ಹೋಗಿ, ನನ್ನ ಸ್ನೇಹಿತರ ಸಮಸ್ಯೆಯನ್ನು ತಿಳಿಸಿದೆ. ಆಗ ಎಂ.ಪಿ.ಯವರು ಖುಷಿಯಿಂದಲೇ ಸಂಪೂರ್ಣ ವಿವರಗಳನ್ನು, ಸಲಹೆಗಳನ್ನು ಸ್ವತಃ ಬರೆದು ಕೊಟ್ಟಿದ್ದಲ್ಲದೇ, ದೂರವಾಣಿ ಉಪಯೋಗ ಅಷ್ಟೇನೂ ಸಾಮಾನ್ಯವಲ್ಲದ ಆ ದಿನಗಳಲ್ಲಿ ಅವರೇ ನನ್ನ ಸ್ನೇಹಿತರಿಗೆ ಕರೆಮಾಡಿ, ಚರ್ಚಿಸಿ ಸಮಸ್ಯೆಗೆ ಸೂಕ್ತ ಪರಿಹಾರ ಸೂಚಿಸಿದ್ದನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ನಾನು ಸದಾ ಸ್ಮರಿಸುವ ಕೃಷಿ ಕಾಲೇಜಿನ ಪ್ರಾಚಾರ್ಯರುಗಳಲ್ಲಿ, ಡಾ. ಎಂ.ಪುಟ್ಟರುದ್ರಯ್ಯನವರು, ಡಾ.ಕೆ.ಕೃಷ್ಣಮೂರ್ತಿಯವರು, ಡಾ.ರಾಮಣ್ಣರವರು ಪ್ರಮುಖರು. ಅವರಲ್ಲಿ ಪ್ರತ್ಯಕ್ಷವಾಗಿ ನನಗೇ ಪಾಠ ಹೇಳಿದವರು ಕಡೆಯ ಇಬ್ಬರು. ಪರೋಕ್ಷ ಗುರು ಡಾ.ಎಂ.ಪುಟ್ಟರುದ್ರಯ್ಯರವರು. ಇವರೊಂದಿಗೆ ಇಂತಹ ಅನುಭವಗಳು ನನ್ನಂತೆ ಹಲವರಿಗೂ ಆಗಿರಬೇಕೆಂದು ಭಾವಿಸುವೆ.

(ಡಾ॥ ಟಿ.ಸಿ. ಚನ್ನಕೃಷ್ಣಯ್ಯನವರು ಹಿರಿಯ ಸಹಾಯಕ ನಿರ್ದೇಶಕರು (ನಿವೃತ್ತ), ಪಶುಪಾಲನ ಇಲಾಖೆ, ಕರ್ನಾಟಕ ಸರ್ಕಾರ.)

## ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದ ಕೆಲವು ವಿಜ್ಞಾನಿಗಳ ಹಾಗೂ ಅಧ್ಯಾಪಕರ ಅನಿಸಿಕೆಗಳು

### ಪ್ರೊ. ಇ.ಒ.ಎಸ್ಸಿಗ್

ಡಾ. ಪುಟ್ಟರುದ್ರಯ್ಯನವರು ಅಮೇರಿಕಾದ ಕ್ಯಾಲಿಪೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿಯನ್ನು ಗಳಿಸುವಾಗ ಉತ್ತಮ ಸಂಶೋಧನೆಯನ್ನು ಮಾಡಿದ್ದಾರೆ. ಹೆಚ್ಚಿನ ಸಮಯವನ್ನು ಕ್ಷೇತ್ರ ಪ್ರಯೋಗಗಳ ಕಾರ್ಯದಲ್ಲಿ ಕಳೆಯುತ್ತಿದ್ದರು. ಕೆಲವು ಕೀಟನಾಶಕಗಳ ಪರೀಕ್ಷೆಯನ್ನು ಹಾಗೂ ಕೀಟದ ಮೇಲೆ ಪ್ರಯೋಗಗಳನ್ನು ನಡೆಸುತ್ತಿದ್ದರು. ಇವರು ಸಂಶೋಧನೆಗೆ ಸಂಬಂದಿಸಿದ ಲೇಖನಗಳನ್ನು ಗ್ರಂಥಾಲಯಗಳಲ್ಲಿ ಹುಡುಕಿ ತಂದು ಅಧ್ಯಯನ ಮಾಡಿ ಮುಂದಿನ ಕಾರ್ಯಯೋಜನೆಯನ್ನು ತಯಾರಿಸಿಕೊಳ್ಳುತ್ತಿದ್ದರು. ಭಾರತೀಯನಾಗಿ ವಿನಯ, ವಿಧೇಯತೆ ಮತ್ತು ಸ್ಪರ್ಧಾತ್ಮಕ ವ್ಯಕ್ತಿತ್ವವನ್ನು ರೂಢಿಸಿಕೊಂಡಿದ್ದರು. ಮತ್ತು ಅತ್ಯಂತ ಪ್ರಾಮಾಣಿಕ ವ್ಯಕ್ತಿಯೂ ಸಹ. ಡಾ. ಪುಟ್ಟರುದ್ರಯ್ಯನವರಿಗೆ ಕೀಟಶಾಸ್ತ್ರದಲ್ಲಿ ವಿಶೇಷ ಆಸಕ್ತಿ. ಅದರಲ್ಲಿಯು ಆರ್ಥಿಕ ಕೀಟಶಾಸ್ತ್ರದಲ್ಲಿ ವಿಶೇಷ ಅಭಿರುಚಿ.

ಅವರು ತಮ್ಮ ರಾಷ್ಟ್ರಕ್ಕೆ ಹಿಂದಿರುಗಿದ ಮೇಲೆ ಅವರಿಗೆ ಒಳ್ಳೆಯ ಸ್ಥಾನ ಹಾಗೂ ಸಂಶೋಧನೆಗೆ ಬೇಕಾಗಿರುವ ಸೂಕ್ತ ಸಲಕರಣೆಗಳನ್ನು ಒದಗಿಸಬೇಕಾಗುತ್ತದೆ. ಅದಕ್ಕೆ ತಕ್ಕಂತೆ ಗ್ರಂಥಾಲಯದ ಅವಶ್ಯಕತೆ ಇರಬೇಕು. ನಮ್ಮ ಕಡೆಯಿಂದ ಮುಂದೆ ಯಾವುದಾದರು ಸಹಾಯ ಬೇಕಾಗಿದ್ದರೆ ಅವರಿಗೆ ತಕ್ಷಣ ಒದಗಿಸಲು ನಾವು ಸಿದ್ಧರಿದ್ದೇವೆ. ಅವರಿಂದ ಕೀಟಶಾಸ್ತ್ರಕ್ಕೆ ಹೆಚ್ಚಿನ ಲಾಭವಿದೆ.

(ಇ.ಒ.ಎಸ್ಸಿಗ್‌ರವರು ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದ ಕೀಟಶಾಸ್ತ್ರ ಮತ್ತು ಪರೋಪಜೀವಿಶಾಸ್ತ್ರ ವಿಭಾಗದ ಅಧ್ಯಕ್ಷರು.)

### ಪ್ರೊ. ಎಡ್ವರ್ಡ್ ಎ. ಸ್ಟೇನ್‌ಹೌಸ್

ಡಾ. ಪುಟ್ಟರುದ್ರಯ್ಯನವರು ಸ್ನಾತಕೋತ್ತರ ಪಠ್ಯಕ್ರಮದ ಕಾರ್ಯ ನಿರ್ವಹಣೆ ಅತ್ಯುನ್ನತ ಮಟ್ಟದ್ದಾಗಿತ್ತು. ಅವರು ತರಗತಿಯ ಪಠ್ಯ ಕ್ರಮದಲ್ಲಿ ಅತ್ಯಂತ ಹೆಚ್ಚಿನ

ಅಂಕಗಳನ್ನು ಪಡೆದಿದ್ದರು. ಇಲ್ಲಿಯವರೆಗೆ ಯಾವ ಭಾರತೀಯ ವಿದ್ಯಾರ್ಥಿಗಳು ಪಡೆಯದಂತ ಹೆಚ್ಚಿನ ಅಂಕಗಳನ್ನು ಪಡೆದಿದ್ದರು. ಡಾ. ಪುಟ್ಟರುದ್ರಯ್ಯನವರು ತಮ್ಮ ವ್ಯಾಸಂಗದಲ್ಲಿ ಧೃಡ ಪ್ರಯತ್ನ, ಕಾರ್ಯತತ್ಪರತೆ ಹಾಗೂ ಪರಿಶ್ರಮಶೀಲ ವಿದ್ಯಾರ್ಥಿಯಾಗಿದ್ದರು. ತಮ್ಮ ವಿದ್ಯಾಭ್ಯಾಸದಲ್ಲಿ ನಿಜವಾದ ಶ್ರದ್ಧೆ ಆಸಕ್ತಿಯನ್ನು ಹೊಂದಿದ್ದರು. ಅವರ ಡಾಕ್ಟರೇಟ್‌ನಲ್ಲಿ ಯೋಗ್ಯತಾ ಅರ್ಹತಾ ಪರೀಕ್ಷೆಯ ಸಮಿತಿಯ ಸದಸ್ಯನಾಗಿ ಕೀಟರೋಗ ಶಾಸ್ತ್ರದ ಬಗ್ಗೆ ಕೇಳಿದ ಎಲ್ಲಾ ಪ್ರಶ್ನೆಗಳಿಗೆ ಬಹಳ ಸುಲಭವಾಗಿ ಉತ್ತರ ನೀಡಿದ್ದರು. ಬೇರೆ ವಿದ್ಯಾರ್ಥಿಗಳಿಗಿಂತ ಸ್ಪರ್ಧಾತ್ಮಕವಾಗಿ ಉತ್ತರಿಸುತ್ತಿದ್ದರು. ಪಠ್ಯಕ್ರಮವನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದರು. ಅವರ ಕಾರ್ಯತಾತ್ಪರತೆಯನ್ನು ನಾನು ಎಂದೂ ಮರೆಯುವಂತಿಲ್ಲ.

ಡಾ.ಪುಟ್ಟರುದ್ರಯ್ಯರವರು ತಮ್ಮ ವ್ಯಾಸಂಗ ಹಾಗೂ ಸಂಶೋಧನೆಯಲ್ಲಿ ದೃಢ ಹಾಗೂ ಅವಿರತ ಪ್ರಯತ್ನಶೀಲರು. ವಿನಯಶೀಲತೆ, ಸಂತೋಷಕರವಾದ ಸ್ನೇಹ ಜೀವಿ. ಅವರದು ಇಡೀ ರಾಷ್ಟ್ರವೇ ಹೆಮ್ಮೆ ಪಡುವಂತಹ ವ್ಯಕ್ತಿತ್ವ, ಇವರ ಅಸಾಧಾರಣ ವ್ಯಕ್ತಿತ್ವವನ್ನು ಭಾರತೀಯ ವಿಜ್ಞಾನ ಚರಿತ್ರೆಯ ಪುಟಗಳಲ್ಲಿ ದಾಖಲಿಸಬೇಕಾಗಿದೆ.

(ಪ್ರೊ. ಸ್ಟೇನ್‌ಹೌಸ್‌ರವರು ಕೀಟರೋಗಶಾಸ್ತ್ರಜ್ಞರು ಹಾಗೂ 'ಕೀಟರೋಗಶಾಸ್ತ್ರ' (Insect Pathology) ಎಂಬ ಜಗತ್ಪ್ರಸಿದ್ಧ ಪುಸ್ತಕದ ಲೇಖಕರು ಮತ್ತು ಒಬ್ಬ ಅಂತರಾಷ್ಟ್ರೀಯ ವಿಜ್ಞಾನಿ. ಇವರು ಡಾ. ಪುಟ್ಟರುದ್ರಯ್ಯನವರಿಗೆ 1948ರಲ್ಲಿ ಕೀಟಗಳ ರೋಗಶಾಸ್ತ್ರವನ್ನು ಬೋಧಿಸಿದ್ದರು ಹಾಗೂ ಸ್ನಾತಕೋತ್ತರ ಸಂಶೋಧನಾ ಸಲಹಾ ಮಂಡಳಿಯ ಸದಸ್ಯರಾಗಿದ್ದರು.)

## ಪ್ರೊ. ಎ.ಆರ್.ಮಿಚೆಲ್ ಬೇಚರ್

ಡಾ. ಪುಟ್ಟರುದ್ರಯ್ಯನವರು ತಮ್ಮ ಸಂಶೋಧನಾ ಪ್ರಬಂಧವನ್ನು ಸ್ವತಃ ಅವರೇ ಬರೆದು ಮುಗಿಸಿದ್ದರು. ಡಾಕ್ಟರೇಟ್‌ನಲ್ಲಿ ಅವರು ತೆಗೆದುಕೊಂಡ ಪಠ್ಯಕ್ರಮಗಳಲ್ಲಿ ಅಸಾಧಾರಣಾ ಪ್ರತಿಭೆಯಿಂದ ಹೆಚ್ಚಿನ ಅಂಕಗಳನ್ನು ಪಡೆಯುತ್ತಿದ್ದರು. ಪುಟ್ಟರುದ್ರಯ್ಯರವರು ಡಾಕ್ಟರೇಟ್ ಮಾಡುವಾಗ ಅವರ ಸಂಶೋಧನಾ ಮಾರ್ಗದರ್ಶನದ ಜವಾಬ್ದಾರಿ ನನ್ನ ಮೇಲಿತ್ತು. ಅವರೇ ಸ್ವತಃ ಅತ್ಯುನ್ನತ ಮಟ್ಟದ ಅವಿಷ್ಕಾರದಲ್ಲಿ ಭಾಗಿಯಾಗುತ್ತಿದ್ದರು. ಸಂಶೋಧನಾ ಮಾರ್ಗದರ್ಶನವನ್ನು ಸರಳ ಮಾಡಿದಂತಹ ಪ್ರತಿಭೆ ಡಾ. ಪುಟ್ಟರುದ್ರಯ್ಯನವರದು.

ತಮ್ಮ ವ್ಯಾಸಂಗದಲ್ಲಿ ಹಾಗೂ ಸಂಶೋಧನೆಯಲ್ಲಿ ಸದಾ ಅತ್ಯುನ್ನತ ಆಸಕ್ತಿಯನ್ನು ತೋರಿಸುತ್ತಿದ್ದರು ಹಾಗೂ ಇಲಾಖೆಯ ಶಿಕ್ಷಕ ಸಿಬ್ಬಂದಿ ಮತ್ತು ಇತರ ಸಹಪಾಠಿಗಳ ಜೊತೆಯಲ್ಲಿ ಬೆರೆತು ಸಹಕಾರ ನೀಡುತ್ತಿದ್ದರು. ಇವರ ಸರಳತೆ, ಸ್ವಾಭಿಮಾನ, ಬಹಳ ಒಳ್ಳೆಯ ಅಭ್ಯಾಸ, ನಡತೆ ಕಾರ್ಯತತ್ಪರತೆಗಳ ಬಗ್ಗೆ ವಿಶೇಷವಾಗಿ ಶಿಫಾರಸ್ಸು ಮಾಡಲು ನನಗೆ ಅತೀವ ಸಂತೋಷವಾಗಿದೆ.

(ಪ್ರೊ. ಎ.ಆರ್.ಮಿಚೆಲ್ ಬೇಚರ್‌ರವರು ಡಾ. ಪುಟ್ಟರುದ್ರಯ್ಯನವರ ಡಾಕ್ಟರೇಟ್ ಪದವಿಯ ಮಾರ್ಗದರ್ಶಕರು.)

# ಅನುಬಂಧ–1

## ಡಾ. ಪುಟ್ಟರುದ್ರಯ್ಯನವರು ರಚಿಸಿದ ಪುಸ್ತಕಗಳು

1. ಕೀಟಗಳ ರಚನೆ ಮತ್ತು ಬೆಳವಣಿಗೆ (1970)
2. ಸುಭಿಕ್ಷತೆಗೆ ತೆರೆದ ಬಾಗಿಲು (1971)
3. ಪೀಡೆ ನಿರ್ವಹಣೆ (1971)
4. ಕೀಟ ವಿಂಗಡಣೆ (1971)
5. ಕೀಟ ಹತೋಟಿ (1972)
6. ಧಾನ್ಯದ ಬೆಳೆಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ (1975)
7. ಕಬ್ಬಿನ ಬೆಳೆಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ (1975)
8. ಬೇಳೆಕಾಳು ಬೆಳೆಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ (1975)
9. ತರಕಾರಿ ಬೆಳೆಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ (1975)
10. ಹಣ್ಣಿನ ಬೆಳೆಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ (1975)
11. ಅಲಂಕಾರ ಸಸ್ಯಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ (1976)
12. ತೆಂಗು, ಅಡಿಕೆ ಮತ್ತು ಇತರ ಗರಿಮರಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ (1976)
13. ಪ್ಲಾಂಟೇಶನ್ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ (1976)
14. ಎಣ್ಣೆ ಕಾಳು ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ (1976)
15. ಹತ್ತಿ ಮತ್ತು ನಾರಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ (1977)
16. ಹಸುರೆಲೆ ಗೊಬ್ಬರ, ಮೇವು, ಹಾಗೂ ಹಿಪ್ಪು ನೇರಳೆ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ (1977)
17. ಮಾದಕ (ಹೊಗೆಸೊಪ್ಪು, ಗಾಂಜಾ) ಮತ್ತು ಸಾಂಬಾರು ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ (1977)
18. ಕೃಷಿ ಉಪಯೋಗಿ ಕೆಲವು ವೃಕ್ಷಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ (1977)
19. ಬೆಳೆ ಕೀಟಗಳು ಹಾಗೂ ಅವುಗಳ ಹತೋಟಿ (1702 ಪುಟಗಳು) (1977)

20. ದಾಸ್ತಾನು ಮನೆ, ಜಾನುವಾರುಗಳು ಹಾಗೂ ಮನುಷ್ಯರಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ (1979)
21. ಮನೆ ಕೀಟಗಳು, ಇತರೇ ಪೀಡೆಗಳು ಹಾಗೂ ಅವುಗಳ ಹತೋಟಿ (1979)
22. ಜಾನುವಾರುಗಳು ಹಾಗೂ ಮನುಷ್ಯರಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ (1979)
23. ದಾಸ್ತಾನು, ಮನೆ ಕೀಟಗಳು ಹಾಗೂ ಅವುಗಳ ಹತೋಟಿ (1979)
24. ಬೆಳೆಗಳ ಪ್ರಾಣಿ ಪೀಡೆಗಳು (1983)
25. A Guide for Cultivation and Protection of Important Crops (1280 Pages) (1983)


# ಅನುಬಂಧ-2

## ಡಾ. ಪುಟ್ಟರುದ್ರಯ್ಯನರವರ ಕಿರು ಹೊತ್ತಿಗೆಗಳು


1. Insect Pests of Horticultural Crops (1957)
2. A list of the Insects of Mysore including mites (1955) Entomology Series Bulletin no.110, Department of Agriculture, Mysore State, Govt. Press, Bangalore
3. ರಾಗಿಗೆ ಬೀಳುವ ಕೀಟಗಳು ಮತ್ತು ಅವುಗಳ ಹತೋಟಿ (ಸಜ್ಜೆ, ನವಣೆ, ಗೋದಿ, ಮುಸುಕಿನ ಜೋಳ ಸೇರಿವೆ)
4. ಬೆಳೆಗಳಿಗೆ ಬೀಳುವ ಕೀಟಗಳು, ಸಸ್ಯ ಸಂರಕ್ಷಣೆಯ ಕೈಪಿಡಿ, ಕರ್ನಾಟಕ ಸರ್ಕಾರ (1949)
5. ಕೀಟ ಮಿತ್ರರು ಸಸ್ಯ ಸಂರಕ್ಷಣೆ ಕೈಪಿಡಿ – ಪ್ರಭುದ್ಧ ಕರ್ನಾಟಕ ಪ್ರಕಾಶನ ಬೆಂಗಳೂರು
6. ಸಸ್ಯ ಸಂರಕ್ಷಣೆಯ ದಿಗಂತ 1975 – ಸಿಂಡಿಕೇಟ್ ಅಗ್ರಿಕಲ್ಚರ್ ಫೌಂಡೇಷನ್ ಮಣಿಪಾಲ
7. Biology of Corn earworm, Heliothis zea Fab Agricultural Dept. Bangalore
8. ಸಸ್ಯ ಸಂರಕ್ಷಣೆ, ಸಂಕ್ಷೇಪ ಕೈಪಿಡಿ, ಎಸ್. ವಿ. ರಂಗಸ್ವಾಮಿ ಅಂಡ್ ಕಂಪನಿ ಲಿ. ಬೆಂಗಳೂರು
9. ಸಸ್ಯ ಪೋಷಕಗಳ ಕೊರತೆಯ ಚಿಹ್ನೆಗಳು, ಮೈಸೂರು ವ್ಯವಸಾಯ ಇಲಾಖೆ ಬೆಂಗಳೂರು
10. ಸಸ್ಯ ಸಂರಕ್ಷಣೆಯ ಕೈಪಿಡಿ, ಮೈಸೂರು ವ್ಯವಸಾಯ ಇಲಾಖೆ, ಬೆಂಗಳೂರು.
11. ವಿಶಾಲ ಪ್ರಮಾಣದ ಕ್ರಿಮಿ ಕೀಟಗಳ ಹತೋಟಿ ಕ್ರಮಗಳಲ್ಲಿರುವ ಕೆಲವು ಪ್ರಧಾನ ಸಮಸ್ಯೆಗಳು, ಮೈಸೂರು ವ್ಯವಸಾಯ ಇಲಾಖೆ, ಬೆಂಗಳೂರು.
12. ಮನುಷ್ಯರ ಮತ್ತು ಪ್ರಾಣಿವರ್ಗದ ಸಂಬಂಧ, ಪ್ರಬುದ್ಧ ಕರ್ನಾಟಕ, ಬೆಂಗಳೂರು.
13. ಆಹಾರೋತ್ಪತ್ತಿಯಲ್ಲಿ ಕ್ರಿಮಿಕೀಟಗಳ ಪಾತ್ರ, ಮೈಸೂರು ವ್ಯವಸಾಯ ಇಲಾಖೆ, ಬೆಂಗಳೂರು.
14. ದ್ವಿದಳ ಧಾನ್ಯ ಪೀಡೆಗಳು, ಮೈಸೂರು ವ್ಯವಸಾಯ ಇಲಾಖೆ, ಬೆಂಗಳೂರು.



ಚಿತ್ರ 1. ಡಾ. ಎಂ.ಪುಟ್ಟರುದ್ರಯ್ಯನವರ ಕೆಲವು ಭಾವಚಿತ್ರಗಳು



ಚಿತ್ರ 2. ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದ ಪ್ರಯೋಗಾಲಯದಲ್ಲಿ ಡಾ. ಎಂ.ಪುಟ್ಟರುದ್ರಯ್ಯ



ಚಿತ್ರ 3. ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದ ವಿಜ್ಞಾನಿಯೊಂದಿಗೆ ಹಾಗೂ
ತಮ್ಮ ಪಿಎಚ್.ಡಿ. ಪದವಿ ಪ್ರದಾನ ಸಮಾರಂಭದಲ್ಲಿ ಡಾ. ಎಂ.ಪುಟ್ಟರುದ್ರಯ್ಯ





ಚಿತ್ರ 4. ವಿದೇಶದಲ್ಲಿ ಡಾ. ಎಂ.ಪುಟ್ಟರುದ್ರಯ್ಯ



ಚಿತ್ರ 5. 19.12.1966ರಂದು ನಡೆದ ಕೃಷಿ ವಿಶ್ವವಿದ್ಯಾನಿಲಯದ ಮೊಟ್ಟ ಮೊದಲ ಘಟಿಕೋತ್ಸವದಲ್ಲಿ ಡಾ. ಎಂ.ಪುಟ್ಟರುದ್ರಯ್ಯ. ಘಟಿಕೋತ್ಸವ ಭಾಷಣ ಮಾಡುತ್ತಿರುವವರು ಶ್ರೀ ಸಿ.ಸುಬ್ರಮಣಿಯಂ.



ಚಿತ್ರ 6. ಲೂಧಿಯಾನಾ ವಿಶ್ವವಿದ್ಯಾನಿಲಯದಲ್ಲಿ ನಡೆದ ಮೊಟ್ಟ ಮೊದಲ ಅಖಿಲ ಭಾರತ ಅಂತರ ಕೃ.ವಿ.ವಿ. ಕ್ರೀಡಾ ಸಮಾವೇಶದಲ್ಲಿ ಕೃಷಿ ವಿಶ್ವವಿದ್ಯಾನಿಲಯದ ವಿಜೇತ ತಂಡದೊಂದಿಗೆ ಡಾ. ಎಂ.ಪುಟ್ಟರುದ್ರಯ್ಯ



ಚಿತ್ರ **7.** ಕೀಟ ವಿಜ್ಞಾನಕ್ಕೆ ಡಾ. ಎಂ.ಪುಟ್ಟರುದ್ರಯ್ಯನವರ ಕೊಡುಗೆಯನ್ನು ಪರಿಗಣಿಸಿ
ಅವರ ಹೆಸರು ನೀಡಿರುವ ಕೀಟ ಪ್ರಭೇದ – *ಆಕ್ಸಿನೋಸ್ಕಿಮ್ನಸ್ ಪುಟ್ಟರುದ್ರಯಿ*



ಚಿತ್ರ **8.** ನಿವೃತ್ತಿಯ ನಂತರ ಮೆ.ಎಸ್.ವಿ.ರಂಗಸ್ವಾಮಿ ಅಂಡ್ ಕಂಪೆನಿಯಲ್ಲಿ ಸಲಹಾಗಾರರಾಗಿದ್ದ
ಸಂದರ್ಭದಲ್ಲಿ ಅವರ ಪುಸ್ತಕ ಬಿಡುಗಡೆ ಸಂದರ್ಭದಲ್ಲಿ ಡಾ. ಎಂ.ಪುಟ್ಟರುದ್ರಯ್ಯನವರನ್ನು
ಸನ್ಮಾನಿಸುತ್ತಿರುವ ಆಗಿನ ಕೃಷಿ ಸಚಿವರಾಗಿದ್ದ ಶ್ರೀ ಬಿ.ಎಲ್.ಗೌಡರು







ಚಿತ್ರ 9. ಡಾ. ಎಂ.ಪುಟ್ಟರುದ್ರಯ್ಯ ಹಾಗೂ ಅವರ ಪತ್ನಿ ಶ್ರೀಮತಿ ಸರಸ್ವತಮ್ಮ



ಚಿತ್ರ 10. ಡಾ. ಎಂ.ಪುಟ್ಟರುದ್ರಯ್ಯನವರ ತಾಯಿ ಶ್ರೀಮತಿ ಪುಟ್ಟಮ್ಮ




ಚಿತ್ರ 11. ಡಾ.ಎಂ.ಪುಟ್ಟರುದ್ರಯ್ಯ ಸ್ಮಾರಕ ದತ್ತಿ ಉಪನ್ಯಾಸ ಮತ್ತು ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪುಟ್ಟರುದ್ರಯ್ಯನವರ ಪುತ್ರಿಯರು, ಅಳಿಯಂದಿರು ಹಾಗೂ ಮೊಮ್ಮಗಳು





ಚಿತ್ರ **12.** ಡಾ. ಎಂ.ಪುಟ್ಟರುದ್ರಯ್ಯನವರ ಪುತ್ರಿಯ ವಿವಾಹ ಸಂದರ್ಭದಲ್ಲಿ ವಧು-ವರರನ್ನು ಹಾರೈಸಲು ಆಗಮಿಸಿದ್ದ ಕರ್ನಾಟಕದ ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಕೆಂಗಲ್ ಹನುಮಂತಯ್ಯನವರು ಹಾಗೂ ಮಾಜಿ ಪ್ರಧಾನಿಗಳಾದ ಶ್ರೀ ಎಚ್.ಡಿ.ದೇವೇಗೌಡರು

## ಕನ್ನಡ ಅಧ್ಯಯನ ವಿಭಾಗದ ಇತ್ತೀಚಿನ ಪ್ರಕಟಣೆಗಳು

| ಪ್ರಸಂ. | ಪುಸ್ತಕದ ಹೆಸರು | ಬೆಲೆ ರೂ. |
|---|---|---|
| 154 | ಮೆಣಸಿನಕಾಯಿ ಬೆಳೆ (ಪರಿಷ್ಕೃತ) | 44–00 |
| 181 | ಬಾಳೆ ಬೇಸಾಯ (ಪರಿಷ್ಕೃತ) | 48–00 |
| 206 | ಆರೋಗ್ಯ ಸಂಪರ್ಧನೆಗೆ ಆಹಾರ (ದ್ವಿಮು.) | 44–00 |
| 207 | ದನಗಳ ಪೌಷ್ಟಿಕ ಆಹಾರ ಮತ್ತು ತಳಿ ಅಭಿವೃದ್ಧಿ | 30–00 |
| 209 | ಸಸ್ಯರೋಗಶಾಸ್ತ್ರ ಪ್ರವೇಶಿಕೆ | 44–00 |
| 210 | ಮಣ್ಣಿನ ರಸಾಯನಶಾಸ್ತ್ರ | 52–00 |
| 211 | ಜಾನುವಾರು ಸಾಂಕ್ರಾಮಿಕ....,ಭಾಗ–3 (ದ್ವಿಮು.) | 56–00 |
| 212 | ಕೃಷಿ ಭೂಗರ್ಭಶಾಸ್ತ್ರ ಪರಿಚಯ | 66–00 |
| 213 | ಕರ್ನಾಟಕದಲ್ಲಿ ಸುಗಂಧದ್ರವ್ಯ ಸಸ್ಯಬೇಸಾಯ (ದ್ವಿಮು.) | 52–00 |
| 214 | ಹಿಪ್ಪುನೇರಳೇತರ ರೇಷ್ಮೆ ಹುಳು ಆಸರೆ ಸಸ್ಯ ಬೇ.. | 42–00 |
| 216 | ಹಿಪ್ಪುನೇರಳೆ ಬೇಸಾಯ | 65–00 |
| 218 | ಮೊಲ ಸಾಕಣೆ (ದ್ವಿಮು.) | 42–00 |
| 219 | ಶೀತವಲಯದ ಹಣ್ಣುಗಳು | 60–00 |
| 220 | ಪ್ರಧಾನ ಹಣ್ಣಿನ ಬೆಳೆಗಳು–ಬಾಳೆ | 32–00 |
| 221 | ಪ್ರಧಾನ ಹಣ್ಣಿನ ಬೆಳೆಗಳು–ಮಾವು | 32–00 |
| 222 | ದೈಹಿಕ ರೋಗ ತಪಾಸಣೆ | 36–00 |
| 223 | ಪ್ರಯೋಗಾಲಯದಲ್ಲಿ ರೋಗ ನಿರ್ಧರಿಕೆ | 40–00 |
| 225 | ಕರ್ನಾಟಕದಲ್ಲಿ ಆರ್ಥಿಕ ಹೂವಿನ...(ದ್ವಿಮು.) | 82–00 |
| 227 | ಬೇಸಾಯಶಾಸ್ತ್ರ ಪಾರಿಭಾಷಿಕ ಶಬ್ದಕೋಶ | 36–00 |
| 228 | ಸಸ್ಯರೋಗಶಾಸ್ತ್ರ ಪರಿಚಯ | 69–00 |
| 230 | ಗ್ರಾಮ್ಯಧ್ವನಿಗಳು | 90–00 |
| 231 | ಕೃಷಿ ಇಂಜಿನಿಯರಿಂಗ್ ಪಾರಿಭಾಷಿಕ ಶಬ್ದಕೋಶ | 54–00 |
| 232 | ಹೈನುಗಾರಿಕೆ ಪಾರಿಭಾಷಿಕ ಶಬ್ದಕೋಶ | 64–00 |
| 234 | ಕೀಟಹತೋಟಿಯಲ್ಲಿ ಜೈವಿಕ ಕ್ರಮಗಳು (ದ್ವಿಮು.) | 90–00 |
| 235 | ಒಣ ಪ್ರದೇಶದಲ್ಲಿ ತೋಟಗಾರಿಕೆ (ದ್ವಿಮು.) | 100–00 |
| 236 | ಪಶುವೈದ್ಯಕೀಯ ಪಾರಿಭಾಷಿಕ ಶಬ್ದಕೋಶ | 75–00 |
| 237 | ರೇಷ್ಮೆ ಹುಳುವಿನ ರೋಗಶಾಸ್ತ್ರ (ದ್ವಿಮು.) | 100–00 |
| 238 | ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ... (ದ್ವಿಮು.) | 80–00 |
| 239 | ವಾಣಿಜ್ಯ ಬೆಳೆಗಳಲ್ಲಿ ಕೀಟ ಹತೋಟಿ (ದ್ವಿಮು.) | 120–00 |
| 240 | ಪಾರ್ಥೇನಿಯಂ ಮತ್ತು ಅದರ ನಿರ್ವಹಣೆ (ದ್ವಿಮು.) | 52–00 |
| 241. | ಕೃಷಿಯಲ್ಲಿ ಜೈವಿಕ ಗೊಬ್ಬರಗಳು (ತೃಮು.) | 82–00 |
| 242 | ಹಣ್ಣು ಮತ್ತು ತರಕಾರಿ ಸಂರಕ್ಷಣೆ (ದ್ವಿಮು.) | 140–00 |
| 245 | ಜೇನು ಕೃಷಿ (ದ್ವಿಮು.) | 66–00 |

| | | |
|---|---|---|
| 246 | ಜೀವತಂತ್ರಜ್ಞಾನ ಅರ್ಥ ವಿವರಣಾ ಕೋಶ | 50–00 |
| 248 | ಸಮಗ್ರ ಬೀಜೋತ್ಪಾದನೆ(ತರಕಾರಿ) ( ದ್ವಿ.ಮು.) | 60–00 |
| 249 | ಮಣ್ಣು ನಿರ್ವಹಣೆ (ದ್ವಿ.ಮು.) | 110–00 |
| 250 | ನೀರು ನಿರ್ವಹಣೆ (ದ್ವಿ.ಮು.) | 80–00 |
| 251 | ಮಾಂಸದ ಕೋಳಿ ಸಾಕಣೆ ಆಧುನಿಕ ಪದ್ಧತಿಗಳು (ತೃ.ಮು.) | 64–00 |
| 252 | ಮೊಟ್ಟೆ ಕೋಳಿ ಸಾಕಣೆ ಆಧುನಿಕ ಪದ್ಧತಿಗಳು (ದ್ವಿ.ಮು.) | 68–00 |
| 253 | ಕೃಷಿ ಮತ್ತು ಪಶುವೈದ್ಯಕೀಯ ವಿಜ್ಞಾನ ಪದಕೋಶ | 240–00 |
| 254 | ಕೃಷಿ ವಿಜ್ಞಾನ ಪದಕೋಶ | 48–00 |
| 255 | ಕೃಷಿ ವಿಜ್ಞಾನ ತಾಂತ್ರಿಕ ಪದಕೋಶ | 188–00 |

**ಕೃಷಿ ಜ್ಞಾನ ಭಂಡಾರ ಮಾಲಿಕೆ**

| | | |
|---|---|---|
| 2 | ನಿಮ್ಮ ಟ್ರ್ಯಾಕ್ಟರ್ | 42–00 |
| 3 | ಸಪೋಟ ಮತ್ತು ಸೀಬೆ (ದ್ವಿ.ಮು.) | 44–00 |
| 4 | ನಿಮ್ಮ ಕೈತೋಟ (ದ್ವಿ.ಮು.) | 42–00 |
| 5 | ದ್ರಾಕ್ಷಿ ಪಪ್ಪಾಯ (ದ್ವಿ.ಮು.) | 44–00 |
| 6 | ಕಬ್ಬಿನಲ್ಲಿ ಸಸ್ಯಸಂರಕ್ಷಣೆ | 40–00 |
| 8 | ಧಾನ್ಯದ ಬೆಳೆ ಸಂರಕ್ಷಣೆ | 40–00 |
| 9 | ಅಣಬೆ ಕೃಷಿ (ದ್ವಿ.ಮು.) | 68–00 |
| 10 | ಜಲಾನಯನ ಅಭಿವೃದ್ಧಿ ಕೈಪಿಡಿ | 65–00 |
| 11 | ರಾಸಾಯನಿಕ ಗೊಬ್ಬರಗಳ ಸಮರ್ಥಬಳಕೆ | 56–00 |
| 12 | ಸುಧಾರಿತ ತರಕಾರಿ ಬೇಸಾಯ (ದ್ವಿ.ಮು.) | 57–00 |
| 13 | ಬಳ್ಳಿ ಮತ್ತು ಸೊಪ್ಪು ತರಕಾರಿಗಳು | 55–00 |
| 15 | ವೆನಿಲ್ಲಾ ಕೃಷಿ | 30–00 |
| 16 | ಹಿಪ್ಪುನೇರಳೆಯಲ್ಲಿ ಸಸ್ಯಸಂರಕ್ಷಣೆ (ದ್ವಿ.ಮು.) | 70–00 |
| 17 | ವಾಣಿಜ್ಯ ಔಷಧೀಯ ಬೆಳೆಗಳು | 50–00 |
| 18 | ಬೆಟ್ಟದ ನೆಲ್ಲಿ ಮತ್ತು ಕಮರಾಕ್ಷಿ (ದ್ವಿ.ಮು.) | 44–00 |
| 20 | ರೇಷ್ಮೆ ಹುಳು ಊಜಿ..ಸಮಗ್ರ ಹತೋಟಿ (ದ್ವಿ.ಮು.) | 64–00 |
| 21 | ರೇಷ್ಮೆ ಕೃಷಿಯಲ್ಲಿ ಆಧುನಿಕ ತಾಂ...(ದ್ವಿ.ಮು.) | 45–00 |
| 22 | ಸಂಕಟದ ಸುಳಿಯಲ್ಲಿ ಭಾರತೀಯ ರೈತ | 13–00 |
| 23 | ನಮ್ಮ ಆಹಾರ (ದ್ವಿ.ಮು.) | 68–00 |
| 24 | ಸುವರ್ಣ ಕೃಷಿ (ದ್ವಿ.ಮು.) | 85–00 |
| 25 | ರೈತರಿಗೆ ಬೇಕಾದ ಗಿಡಮರಗಳು (ದ್ವಿ.ಮು.) | 60–00 |
| 26 | ತೋಟದ ಬೆಳೆಗಳ ಕೊಯ್ಲಿನೋತ್ತರ ನಿರ್ವಹಣೆ | 82–00 |
| 27 | ಸುಧಾರಿತ ಹೈನೋತ್ಪಾದನೆ (ದ್ವಿ.ಮು.) | 58–00 |
| 28 | ಗ್ರಾಮೀಣಾಭಿವೃದ್ಧಿಯಲ್ಲಿ ಕುರಿಸಾಕಣೆ (ದ್ವಿ.ಮು.) | 38–00 |
| 29 | ಎಣ್ಣೆಕಾಳು ಬೆಳೆಗಳ ಬೇಸಾಯ ತಾಂತ್ರಿಕತೆಗಳು | 72–00 |
| 30 | ಸಾವಯವ ಗೊಬ್ಬರಗಳು | 68–00 |

| | | |
|---|---|---|
| 31 | ಕೃಷಿಯಲ್ಲಿ ಬೌದ್ಧಿಕ ಆಸ್ತಿ ಹಕ್ಕು...(ದ್ವಿ.ಮು.) | 48-00 |
| 32 | ಜಾಗತಿಕ ತಾಪಮಾನ ಮತ್ತು ಹವಾಮಾನ...(ದ್ವಿ.ಮು.) | 42-00 |
| 35 | ಕೃಷಿಯಲ್ಲಿ ನೀರಿನ ಸದ್ಬಳಕೆ | 52-00 |
| 36 | ಪ್ರಾಣಿಗಳಿಂದ ಮನುಷ್ಯರಿಗೆ ಬರುವ ಕೆಲವುರೋಗಗಳು | 25-00 |
| 37 | ಗೌಜುಗನ ಹಕ್ಕಿ ಸಾಕಣೆ | 38-00 |
| 38 | ಕೃಷಿಮೇಳ-ಒಂದು ಪರಿಣಾಮಕಾರಿ....ಪದ್ಧತಿ | 42-00 |
| 39 | ಸಮಗ್ರ ಬಾಳೆ ಬೇಸಾಯ | 56-00 |
| 40 | ಸಾವಯವ ಕೃಷಿ ಸಂಪನ್ಮೂಲಗಳು | 26-00 |
| 41 | ಸಸ್ಯಮೂಲ ಸೌಂದರ್ಯ ಮೂಲಿಕೆಗಳು | 100-00 |
| 42 | ಸಾವಯವ ಕೃಷಿ-ಒಂದು ಕಿರುಪರಿಚಯ | 42-00 |
| 43 | ಜೇನುನೊಣಗಳು ಮತ್ತು ಬೆಳೆ ಉತ್ಪಾದನೆ | 62-00 |
| 44 | ರೇಷ್ಮೆಹುಳು ಬೀಜೋತ್ಪಾದನಾ ತಾಂತ್ರಿಕತೆ | 62-00 |
| 45 | ಡಾ.ಎಂ.ಪುಟ್ಟರುದ್ರಯ್ಯ ಜೀವನ ಸಾಧನೆ | 60-00 |

**ಕನ್ನಡ ಭಾಷಾಭಿವೃದ್ಧಿ ಯೋಜನೆ ಮಾಲಿಕೆ**

| | | |
|---|---|---|
| 01 | ಹಟ್ಟಿ ಪದ್ಧತಿಯಲ್ಲಿ ಮೇಕೆ ಸಾಕಣೆ | 60-00 |
| 02 | ಮರಗಳ ಬೀಜಶಾಸ್ತ್ರ | 52-00 |
| 03 | ಕೆಲವು ಅರಣ್ಯ ಉತ್ಪನ್ನಗಳು | 57-00 |
| 04 | ಲಾಭದಾಯಕ ತೆಂಗಿನ ಬೇಸಾಯ | 72-00 |
| 05 | ಮೌಲ್ಯವರ್ಧಿತ ಆಹಾರ-ರಾಗಿ ಮತ್ತು ಮು.ಜೋಳ | 52-00 |
| 06 | ದ್ವಿದಳ ಧಾನ್ಯ ಬೆಳೆಗಳ ಬೇಸಾಯ | 48-00 |
| 07 | ಜಾನುವಾರು ರೋಗಗಳು (ವೈರಸ್ ರೋಗಗಳು) | 44-00 |
| 08 | ಬಯೋಡೈಜಸ್ಟರ್-ಸಾವಯವ ಕೃಷಿಗೊಂದು ವರದಾನ | 28-00 |
| 09 | ಕೆಲವು ಸಸ್ಯಗಳ ವೈಜ್ಞಾನಿಕ, ಕುಟುಂಬ,.... ಹೆಸರುಗಳು | 72-00 |
| 10 | ಬತ್ತದ ಬೇಸಾಯಕ್ಕೆ ಹೆಬ್ಬಾಗಿಲು | 82-00 |
| 11 | ಹಂದಿ ಸಾಕಣೆ | 58-00 |
| 12 | ಮಿಡಿಸೌತೆಕಾಯಿ (ಗರ್ಕಿನ್) ಬೆಳೆಯ ಸುಧಾರಿತ ಬೇಸಾಯ | 44-00 |
| 13 | ದಾಸ್ತಾನು ಧಾನ್ಯ ಸಂರಕ್ಷಣೆ | 52-00 |
| 14 | ಜಲಸಂಪನ್ಮೂಲಗಳು ಹಾಗೂ ಅವುಗಳ ನಿರ್ವಹಣೆ | 60-00 |
| 15 | ಕುಷ್ಕಿ ತೋಟಗಾರಿಕೆ | 66-00 |

* ಪ್ರತಿಗಳು ಮುಗಿದಿವೆ.

ವಿಭಾಗದ ಪ್ರಕಟಣೆಗಳನ್ನು ಕೊಳ್ಳಲು ಸಂಪರ್ಕಿಸಿ:
**ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ**
ಕೃಷಿ ವಿಶ್ವವಿದ್ಯಾನಿಲಯ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ
ಬೆಂಗಳೂರು-560065, ದೂರವಾಣಿ: 080-23625411

## ಕೃಷಿ ಜ್ಞಾನ ಭಂಡಾರ

'ಕೃಷಿ ಜ್ಞಾನ ಭಂಡಾರ' ರೈತರ ಜನಮನವನ್ನು ತಲುಪುವ ಉನ್ನತವಾದ ಉದ್ದೇಶದಿಂದ ಪ್ರಾರಂಭವಾದ ಒಂದು ಅಪೂರ್ವ ಜ್ಞಾನವಾಹಿನಿ. 'ಕೃಷಿತೋ ನಾಸ್ತಿ ದುರ್ಭಿಕ್ಷಂ' ಇದು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಲಾಂಛನದ ಹೊನ್ನುಡಿ. ಕೃಷಿ ವಿಜ್ಞಾನ ಪ್ರಗತಿಯಾದಂತೆ ನಾಡಿನಲ್ಲಿ ಸುಭಿಕ್ಷತೆ ನೆಲೆಯಾಗುತ್ತದೆ. ರೈತ ಸಂಸ್ಕೃತಿ ಬೆಳೆದಂತೆಲ್ಲಾ ಕೃಷಿ ಜ್ಞಾನ ಭಂಡಾರವು ತುಂಬಿ ಹರಿಯುತ್ತದೆ. ಇದರಲ್ಲಿ ಕೃಷಿ ವಿಜ್ಞಾನಿಗಳ, ಚಿಂತಕರ ಪಾತ್ರ ಅಪಾರ, ವಿಶ್ವಗಾಮಿನಿಯಾದ ವಿಚಾರ, ಚಿಂತನೆಗಳು ಮಾನವನ ಮುನ್ನಡೆಯ ದ್ಯೋತಕ. ಇದಕ್ಕೆ ಪೂರಕವಾದ ವೈಜ್ಞಾನಿಕ ಕಿರುಪುಸ್ತಕಗಳನ್ನು ಸರಳ, ಸುಂದರ, ವಿಚಾರಪೂರ್ಣ ಶೈಲಿಯಲ್ಲಿ ರೈತರಿಗೆ ಒದಗಿಸಿಕೊಡುವ ವಿಶಿಷ್ಟ ಕಾರ್ಯವನ್ನು ಕೃಷಿ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದಲ್ಲಿ ಕೈಗೊಳ್ಳಲಾಗಿದೆ.

*****

## ಕೃಷಿ ವಿಜ್ಞಾನಿ – ಕೀಟಶಾಸ್ತ್ರಜ್ಞ ಡಾ.ಎಂ.ಪುಟ್ಟರುದ್ರಯ್ಯ

ಡಾ. ಎಂ. ಪುಟ್ಟರುದ್ರಯ್ಯರವರು ಕರ್ನಾಟಕ ಕೃಷಿವಿಜ್ಞಾನ ಕ್ಷೇತ್ರದಲ್ಲಿ ಸೇವೆಸಲ್ಲಿಸಿದ ಅಪರೂಪದ ಮೇಧಾವಿಗಳಲ್ಲಿ ಒಬ್ಬರು. ಕರ್ನಾಟಕ ರಾಜ್ಯದ ಕೃಷಿ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗಾಗಿ ಮತ್ತು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಹಾಗೂ ಕೃಷಿ ವಿದ್ಯಾರ್ಥಿಗಳ ಏಳಿಗೆಗಾಗಿ ತಮ್ಮ ಸಮಯ ಶ್ರಮವನ್ನೆಲ್ಲ ಮುಡುಪಾಗಿಟ್ಟು ನಿರ್ಮೋಹ, ನಿಷ್ಕಾಮ ರೀತಿಯಲ್ಲಿ ಸೇವೆ ಸಲ್ಲಿಸಿದವರು. ಕೀಟಶಾಸ್ತ್ರದಲ್ಲಿ ವಿಶೇಷ ಪಾಂಡಿತ್ಯವನ್ನು ಸಂಪಾದಿಸಿದ ಇವರು ಜಾಗತಿಕ ಮೇರು ಕೀಟತಜ್ಞರಲ್ಲಿ ಒಬ್ಬರಾಗಿರುವುದು ಕರ್ನಾಟಕದ ಹೆಮ್ಮೆಯೇ ಸರಿ.

**Published with the assistance of the Commission for Scientific and Technical Terminology, Government of India, New Delhi under the Scheme for Productionof University Level Literatue in Indian Languages.**

**UNIVERSITY OF AGRICULTURAL SCIENCES**
**GKVK, BANGALORE-560065**

**www.uasbangalore.edu.in**

9 789383 889068

₹ 60

Cover Design: JB